ಸಂಪುಟ 23 ಸಂಚಿಕೆ 29
ಜುಲೈ 22, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ



ಸರ್ಕಾರದ ಧಾಳಿಗೆ ಪ್ರತಿಧಾಳಿ
ದುಡಿವ ಜನರ ಸಮರ ಘೋಷಣೆ




ರೇಷನ್ ಕಡಿತ ಅನ್ನದಗುಳಿಗೆ ಕನ್ನ

ಕೃಷ್ಣ ಸರ್ಕಾರ ಪರೀಕ್ಷೆಯೆಂಬ ವ್ಯವಹಾರ



ಬ್ರಿಟೀಶ್ ರಾಜಕೀಯ ಎತ್ತ-ಏನು?

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 72

ನ್ಯಾಯದ ಕಣ್ಣುಮುಚ್ಚಾಲೆ

ಎಂಟನೇ ಹಣಕಾಸು ಆಯೋಗದ ಶಿಫಾರಸುಗಳ ಜಾರಿ ವಿಚಾರದಲ್ಲಿ ಕೇಂದ್ರ ಸರಕಾರ ಪ.ಬಂಗಾಳದ ವಿರುದ್ಧ ಪಕ್ಷಪಾತಿ ಧೋರಣೆ ತಳೆಯಿತು. ಆದಾಯ ತೆರಿಗೆ ಮತ್ತು ಅಬಕಾರಿ ತೆರಿಗೆ ಆದಾಯಗಳನ್ನು ಕೇಂದ್ರ ಹಾಗೂ ರಾಜ್ಯಗಳ ನಡುವೆ ಹೇಗೆ ವಿತರಿಸಬೇಕು ಎಂದು ಆಯೋಗ ಶಿಫಾರಸು ಮಾಡಿದೆ. ತಮ್ಮದೇ ಸಂಪನ್ಮೂಲಗಳಿಂದ ವೆಚ್ಚಗಳನ್ನು ಭರಿಸಿಕೊಳ್ಳುವ ಸಾಮರ್ಥ್ಯವಿಲ್ಲದ ರಾಜ್ಯಗಳಿಗೆ ವಿನಾಯಿತಿಗಳನ್ನು ನೀಡಬೇಕೆಂಬುದು ಆಯೋಗದ ಶಿಫಾರಸು ಆಗಿತ್ತು.

1984 ಏಪ್ರಿಲ್ 30 ರಂದು ಎಂಟನೇ ಹಣಕಾಸು ಆಯೋಗ ತನ್ನ ವರದಿಯನ್ನು ಮಂಡಿಸಿತು. ಆಯೋಗದ ಶಿಫಾರಸುಗಳಿಗೆ ಸಂಬಂಧಿಸಿದಂತೆ ಆಯೋಗದ ಐದು ವರ್ಷಗಳ ಅವಧಿಯ ಮೊದಲ ವರ್ಷವನ್ನು ಗಮನಕ್ಕೆ ತೆಗೆದುಕೊಳ್ಳದಿರುವ ನಿರ್ಧಾರದಿಂದ ಪ.ಬಂಗಾಳಕ್ಕೆ ತುಂಬಾ ಹಾನಿಯಾಗುತ್ತದೆ ಎಂಬುದನ್ನು ಅಂದಿನ ಕೇಂದ್ರ ಹಣಕಾಸು ಸಚಿವ ಪ್ರಣಬ್ ಮುಖರ್ಜಿ ಅರ್ಥಮಾಡಿಕೊಳ್ಳಲಿಲ್ಲ. ಏನಿದ್ದರೂ ಬಂಗಾಳಕ್ಕೆ ವಿನಾಯಿತಿಗಳನ್ನು ನೀಡಬೇಕು ಎಂದು ಆಯೋಗ ಸಲಹೆ ಮಾಡಿತು. ಇದು ನಮ್ಮ ನಿರೀಕ್ಷೆಗಿಂತ ತುಂಬಾ ಕಡಿಮೆಯಾಗಿತ್ತು. ಆದರೆ ಅದರಿಂದಲೂ ಬಹಳಷ್ಟು ನೆರವಾಯಿತು. ರಾಜ್ಯಗಳಿಗೆ ನೀಡಲಾದ ಒಟ್ಟು 1500 ಕೋಟಿ ರೂಪಾಯಿಗಳಲ್ಲಿ ಬಂಗಾಳಕ್ಕೆ 325 ಕೋಟಿ ರೂಪಾಯಿ ಸಿಕ್ಕಿತು. ಈ ರೀತಿಯಾಗಿ ಆಯೋಗದ ಶಿಫಾರಸುಗಳನ್ನು ಅನುಷ್ಠಾನ ಮಾಡದಿರುವ ವಿಚಾರದಲ್ಲಿ ನಮಗೆ ತುಂಬಾ ಹಾನಿಯಾಯಿತು.

ಕೇಂದ್ರದಿಂದ ಪಡೆದಿದ್ದ ಸಾಲದ ಕೆಲವು ಕಂತುಗಳ ಮರುಪಾವತಿ ತಡೆಹಿಡಿಯಲು ರಾಜ್ಯ ಸರಕಾರ ಯೋಚಿಸಿತು. ನಾವು ಕೇಂದ್ರಕ್ಕೆ 360 ಕೋಟಿ ರೂಪಾಯಿ ನೀಡಬೇಕಿತ್ತು. 55 ಕೋಟಿ ರೂಪಾಯಿ ಕಂತಿನ ಮರುಪಾವತಿ ಪಡೆಹಿಡಿಯುವುದಾಗಿ ಕೇಂದ್ರಕ್ಕೆ ಪತ್ರ ಬರೆದೆವು. ಆದರೆ ರಾಜ್ಯಕ್ಕೆ ನೀಡಬೇಕಿರುವ ತೆರಿಗೆ ಆದಾಯದಲ್ಲಿ ಮೊದಲು ಈ ಮೊತ್ತವನ್ನು ಕಳೆಯುವುದಾಗಿ ಕೇಂದ್ರ ತಿಳಿಸಿತು! ಅದು ಬಂಗಾಳಕ್ಕೆ ಮಾತ್ರವೇ ಅನ್ವಯವಾಗಲಿತ್ತು!

ಇದರ ವಿರುದ್ಧ ನಾವು ಹೋರಾಡಲೇ ಬೇಕಾಯಿತು. 1984 ಫೆಬ್ರವರಿ 19 ರಂದು ಕೂಚ್ ಬಿಹಾರ್‌ನಿಂದ ಪಾದಯಾತ್ರೆ ಆರಂಭಿಸಿದೆವು. ಮಾರ್ಚ್ 15 ರಂದು ಕಲ್ಕತ್ತದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಬೃಹತ್ ರ್‍ಯಾಲಿ ನಡೆಯುವುದರೊಂದಿಗೆ ಅದು ಮುಕ್ತಾಯವಾಯಿತು. ಇದು ನಾವು ನಡೆಸಿದ ಜನತಾ ಆಂದೋಳನಗಳ ಪೈಕಿ ಒಂದು ಅತ್ಯಂತ ದೊಡ್ಡ ಚಳವಳಿ.

ಮುಖ್ಯವಾಗಿ ಉತ್ತರ ಬಂಗಾಳ ಮತ್ತು ಗ್ರೇಟರ್ ಕಲ್ಕತ್ತದ ಕಲ್ಯಾಣದ ಬೇಡಿಕೆಗಳನ್ನು ಒಳಗೊಂಡಿದ್ದ ಈ ಪಾದಯಾತ್ರೆ ರಾಜ್ಯದ 9 ಜಿಲ್ಲೆಗಳ 826 ಕಿಮೀ. ಪ್ರದೇಶವನ್ನು ಹಾದುಹೋಯಿತು.

ಉತ್ತರ ಬಂಗಾಳ ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶ ಕಳೆದ ಒಂದುವರೆ ದಶಕಗಳ ಅವಧಿಯಲ್ಲಿ ನಮ್ಮ ಪ್ರಯತ್ನಗಳಿಂದಾಗಿ ಬಹಳ ಸುಧಾರಣೆ ಆಗಿದೆ. ಸಂಕುಚಿತ ರಾಜಕೀಯದ ಕಾಂಗ್ರೆಸ್ ಪಕ್ಷ ನಮ್ಮ ಯತ್ನಗಳಿಗೆ ತೊಡರುಗಾಲು ಹಾಕುತ್ತಲೇ ಇದ್ದರೂ ಜನತೆ ನಮ್ಮೊಂದಿಗಿದ್ದಾರೆ ಎಂಬುವುದು ಸಂತೋಷದ ಸಂಗತಿ.

ಆಪರೇಷನ್ ಬ್ಲೂ ಸ್ಟಾರ್

1984 ಜೂನ್‌ನಲ್ಲಿ ಇಂದಿರಾಗಾಂಧಿ ಸ್ವರ್ಣದೇವಾಲಯವನ್ನು ನುಗ್ಗಲು ಸೇನೆಗೆ ಆದೇಶ ನೀಡುವ ಮೂಲಕ ಪಂಜಾಬಿನ ಪರಿಸ್ಥಿತಿ ಸ್ಫೋಟಕ ತಿರುವನ್ನು ಪಡೆಯಿತು. ಸ್ವರ್ಣಮಂದಿರ ಮತ್ತು ಇತರ ಗುರುದ್ವಾರಗಳಿಂದ ಭಯೋತ್ಪಾದಕರನ್ನು ಹೊಸದಬ್ಬಲಾಯಿತು. ಖಲಿಸ್ತಾನಿ ನಾಯಕ ಸಂತ ಭಿಂದ್ರನ್‌ವಾಲೆ ಮತ್ತವರ ಅನೇಕ ಸಹಚರರ ಹತ್ಯೆಯಾಯಿತು. ಕಾರ್ಯಾಚರಣೆ ಬಗ್ಗೆ ಕೇಂದ್ರ ಸರಕಾರ ಶ್ವೇತಪತ್ರ ಪ್ರಕಟಿಸಿತು. ಭಿಂದ್ರನ್‌ವಾಲೆಯನ್ನು 'ಸಂತ'ನ ಸ್ಥಾನಕ್ಕೆ ಏರಿಸಿದ್ದು ರಾಜೀವ್‌ಗಾಂಧಿಯೇ. ಪಂಜಾಬ್ ಸಮಸ್ಯೆಗೆ ರಾಜಕೀಯ ಪರಿಹಾರ ಕಂಡುಕೊಳ್ಳುವ ಆಸಕ್ತಿ ಹಾಗೂ ಗಂಭೀರತೆ ಕೇಂದ್ರ ಸರಕಾರಕ್ಕೆ ಇದ್ದಿದ್ದರೆ ಈ ಕಾರ್ಯಾಚರಣೆ ನಡೆಸುವ ಅಗತ್ಯವೇ ಉದ್ಭವಿಸುತ್ತಿರಲಿಲ್ಲ.


1984 ಜುಲೈ 10-17 ರವರೆಗೆ ನಾವು 'ಪಂಜಾಬ್ ಸಪ್ತಾಹ' ಆಚರಿಸಿದೆವು. ಏಳು ದಿನಗಳಂದು ಬೇರೆ ಬೇರೆ ಕಾರ್ಯಕ್ರಮಗಳನ್ನು ನಡೆಸಿದೆವು. ರಾಷ್ಟ್ರಪತಿ ಮತ್ತು ಕೇಂದ್ರ ಸರಕಾರಕ್ಕೆ ಪ್ರಸ್ತಾವಗಳನ್ನು ಕಳಿಸಿದೆವು. ನೀರಿನ ಸಮಸ್ಯೆಯ ಪರಿಶೀಲನೆಗೆ ಸುಪ್ರೀಂಕೋರ್ಟ್ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ನ್ಯಾಯಮಂಡಳಿಯನ್ನು (ಟ್ರಿಬ್ಯುನಲ್) ರಚಿಸಬೇಕು, ಚಂಡೀಗಢವನ್ನು ಪಂಜಾಬಿಗೆ ಹಸ್ತಾಂತರಿಸಬೇಕು ಹಾಗೂ ಹರ್ಯಾಣಕ್ಕೆ ಸಾಕಷ್ಟು ಪರಿಹಾರ ನೀಡಬೇಕು ಎಂದು ಸಲಹೆ ಮಾಡಿದೆವು.

ಹರ್ಯಾಣದಲ್ಲಿ ಹೊಸ ರಾಜಧಾನಿಯನ್ನು ಸ್ಥಾಪಿಸಲು ಹಣ ಒದಗಿಸಬೇಕು. ಹರ್ಯಾಣ ಮತ್ತು ಪಂಜಾಬ್ ಗಡಿಯಲ್ಲಿನ ಗ್ರಾಮಗಳು ಹಾಗೂ ಅಕ್ಕಪಕ್ಕದ ಪ್ರದೇಶಗಳ ಪ್ರಶ್ನೆಯನ್ನು ಭಾಷೆಯ ಆಧಾರದಲ್ಲಿ ಇತ್ಯಾರ್ಥಪಡಿಸಲು ಒಂದು ಆಯೋಗವನ್ನು ರಚಿಸಬೇಕು ಎಂದೂ ನಾವು ಹೇಳಿದೆವು.

ಹಿಂದಿನ ಸಂಚಿಕೆಯಲ್ಲಿ ಮಲೋಪರ ಹತ್ಯಾಕಾಂಡ ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳ ಸಮ್ಮೇಳನ,ಸರ್ಕಾರಿಯಾ ಆಯೋಗ ರಚನೆ, ಸೆಣಬು ಕಾರ್ಮಿಕರ ಮುಷ್ಕರ, ರಾಜ್ಯಪಾಲರ ವರ್ಗ ಈ ಬಗ್ಗೆ ಓದಿರುವಿರಿ....ಈ ಸಂಚಿಕೆಯಲ್ಲಿ ಅಪರೇಷನ್ ಬ್ಲೂಸ್ಟಾರ್, ಮತ್ತೆರಡು ರಾಜ್ಯ ಸರ್ಕಾರಗಳ ವಜಾ, ಎನ್‌ಡಿಸಿ ಸಭೆ ಬಹಿಷ್ಕಾರ, ಎನ್‌ಟಿಆರ್ ಸಂಪುಟ ಮತ್ತೆ ಅಧಿಕಾರಕ್ಕೆ, ಇಂದಿರಾಗಾಂಧಿ ಆಘಾತ .... ಈ ಬಗ್ಗೆ ಓದಿ.

ರಾಜ್ಯ ಸರಕಾರಗಳ ವಜಾ

ಆದರೆ ದುರದೃಷ್ಟವಶಾತ್, ಇಂದಿರಾಗಾಂಧಿ ಮಾತ್ರವೇ ಒಳ್ಳೆಯ ಸಲಹೆಗಳಿಗೆ ಕಿವಿಕೊಡಲು ಸಿದ್ಧರಿರಲಿಲ್ಲ. ಒಕ್ಕೂಟ ತತ್ವಗಳಿಗೆ ಗೌರವವನ್ನು ಕೊಡುತ್ತಿರಲಿಲ್ಲ. 1984ರ ಜುಲೈ ಆಗಸ್ಟ್ ತಿಂಗಳಲ್ಲಿ 46 ದಿನಗಳ ಅಂತರದಲ್ಲಿ ಅವರು ಎರಡು ರಾಜ್ಯ ಸರಕಾರಗಳನ್ನು ವಜಾ ಮಾಡಿದರು. ಜುಲೈ ಎರಡರಂದು ಜಮ್ಮು ಮತ್ತು ಕಾಶ್ಮೀರದ ಡಾ। ಫರೂಕ್ ಅಬ್ದುಲ್, ಆಗಸ್ಟ್ 16 ರಂದು ಆಂಧ್ರಪ್ರದೇಶದ ಎನ್‌ಟಿಆರ್ ಪದಚ್ಯುತರಾದರು.



ಕಾಂಗ್ರೆಸ್ಸೇತರ ಪಕ್ಷಗಳ ಸಮಾವೇಶಗಳಲ್ಲಿ ಪಾಲ್ಗೊಂಡಿದ್ದಕ್ಕಾಗಿ ಅವರಿಗೆ ಈ ಶಿಕ್ಷೆ ನೀಡಲಾಯಿತು.

ಅಬ್ದುಲ್ಲಾ ಸರಕಾರ 13 ತಿಂಗಳು ಅಧಿಕಾರದಲ್ಲಿತ್ತು. ಆಗ ಜಗ್‌ಮೋಹನ್ ರಾಜ್ಯಪಾಲರಾಗಿದ್ದರು. ನ್ಯಾಷನಲ್ ಕಾನ್ಫರೆನ್ಸ್‌ನ ಭಿನ್ನಮತೀಯ ನಾಯಕ ಗುಲಾಂ ಮಹಮದ್ ಷಾಗೆ ಮುಖ್ಯಮಂತ್ರಿ ಪಟ್ಟದ ಆಮಿಷ ಒಡ್ಡಲಾಯಿತು. ಉಭಯ ಬಣಗಳ ಬಲಾಬಲ ಪರೀಕ್ಷೆಗೆ ಅಸೆಂಬ್ಲಿ ಅಧಿವೇಶನ ವ್ಯವಸ್ಥೆಗೊಳಿಸುವಂತೆ ಡಾ. ಅಬ್ದುಲ್ಲಾ ರಾಜ್ಯಪಾಲರನ್ನು ಕೋರಿದರು. ಆದರೆ ಜಗಮೋಹನ್ ಈ ರೀತಿ ಯೋಚಿಸಲೂ ಇಲ್ಲ. 24 ಗಂಟೆಗಳೊಳಗೆ ಷಾರನ್ನು ಮುಖ್ಯಮಂತ್ರಿ ಪಟ್ಟದಲ್ಲಿ ಕೂರಿಸಲಾಯಿತು.

ಕೆಲವೇ ವಾರಗಳ ಹಿಂದೆ ಇದೇ ರೀತಿಯಲ್ಲಿ ಸಿಕ್ಕಿಂನ ನರಬಹಾದೂರ್ ಭಂಡಾರಿಯವರ ಚುನಾಯಿತು ಸರಕಾರವನ್ನು ವಜಾಮಾಡಿದ್ದು ನೆನಪಿದೆ. ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಜನರು ವಿಶ್ವಾಸ ಕಳೆದುಕೊಳ್ಳುತ್ತಿದ್ದರು. ಇದು ಜಮ್ಮು ಮತ್ತು ಕಾಶ್ಮೀರದಂತ ಸೂಕ್ಷ್ಮ ಪ್ರದೇಶದಲ್ಲಿ ಅನಾಹುತಕಾರಿ ಪರಿಣಾಮ ಬಿರುವ ಸಾಧ್ಯತೆಯಿತ್ತು. ವಾಸ್ತವವಾಗಿ, ಫಾರೂಕ್ ಸರಕಾರ ವಜಾಗೊಂಡ ನಂತರ ಉಗ್ರಗಾಮಿಗಳು ಮೇಲುಗೈ ಪಡೆದಿದ್ದರು.

ಪಶ್ಚಿಮ ಬಂಗಾಳ ಸಚಿವ ಸಂಪುಟ ಈ ಪ್ರಕರಣವನ್ನು ಖಂಡಿಸಿದರು. ಎಡಪಂಥೀಯ ವಿದ್ಯಾರ್ಥಿ ಸಂಘಟನೆಗಳು ರಾಜ್ಯದಲ್ಲಿ ಮುಷ್ಕರ ನಡೆಸಿದವು. ಅಬ್ದುಲ್ಲಾರಿಗೆ ಬೆಂಬಲ ವ್ಯಕ್ತಪಡಿಸಲು ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಪ್ರತಿಪಕ್ಷ ನಾಯಕರ ಸಭೆ ಕರೆದರು. ನಿಯೋಗವೊಂದು ಶ್ರೀನಗರಕ್ಕೆ ಭೇಟಿ ನೀಡಿತ್ತು. ಡಾ. ಅಶೋಕ್‌ಮಿತ್ರ ಮತ್ತು ಕಾ. ಬಸವಪುನ್ನಯ್ಯ ತಂಡದಲ್ಲಿದ್ದರು.

ಜನತಾಪಕ್ಷ ವಿಭಜನೆಗೊಂಡ ನಂತರ ಅದೇ ಮೊದಲ ಬಾರಿಗೆ ಎಲ್ಲ ಕಾಂಗ್ರೆಸ್ಸೇತರ ಪಕ್ಷಗಳ ಮುಖಂಡರು ದೆಹಲಿಯಲ್ಲಿ ಸಭೆ ಸೇರಿದರು. ಸಭೆಯ ಮರುದಿನ ನಾವು ರಾಷ್ಟ್ರಪತಿಯವರನ್ನು ಭೇಟಿಯಾಗಿ ರಾಜ್ಯಪಾಲ ಜಗಮೋಹನ್‌ರನ್ನು ವಾಪಸ್ ಕರೆಸಿಕೊಳ್ಳುವಂತೆ ಒತ್ತಾಯಿಸಿದೆವು. ಲೋಕದಳ ನೇತಾರ ಚರಣ್‌ಸಿಂಗ್ ರಾಷ್ಟ್ರಪತಿಗೆ ಮನವಿ ಪತ್ರವನ್ನು ಅರ್ಪಿಸಿದರು.

ಆಗ ನಡೆಯುತ್ತಿದ್ದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ (ಎನ್.ಡಿ.ಸಿ) ಸಭೆಯನ್ನು ಬಹಿಷ್ಕರಿಸಲೂ ನಾವು ನಿರ್ಧರಿಸಿದೆವು. ಎನ್‌ಡಿಸಿ ಸಭೆಯಲ್ಲಿಯೇ ಅದನ್ನು ಪ್ರಕಟಿಸಿ ಪ್ರತಿಪಕ್ಷಗಳ ನಾಲ್ವರು ಮುಖ್ಯಮಂತ್ರಿಗಳು ತಕ್ಷಣವೇ ಸಭಾತ್ಯಾಗ ಮಾಡಿದೆವು. ಅದಕ್ಕೆ ಮುಂಚೆ ಎನ್.ಟಿ.ಆರ್ ಮನವಿ ಪತ್ರವೊಂದನ್ನು ಸಭೆಯಲ್ಲಿ ಓದಿ ಹೇಳಿದರು. ಇದರಿಂದ ದೇಶಾದ್ಯಂತ ಕೇಂದ್ರ ಸರಕಾರದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಯಿತು.

ನಾನು ದೆಹಲಿಯಿಂದ ಹಿಂದಿರುಗಿದ ನಂತರ ವಿದೇಶ ಪ್ರವಾಸಕ್ಕೆ ತೆರಳಿದೆ. ಆಗಸ್ಟ್ 12 ರಂದು ಕಲ್ಕತ್ತಕ್ಕೆ ಮರಳಿದೆ. ಅಮೆರಿಕದಲ್ಲಿ ನಾನು ಅನೇಕ ವಿಷಯಗಳಲ್ಲಿ ಭಾಷಣ ಮಾಡಿದ ಸಂದರ್ಭದಲ್ಲಿ ಪಶ್ಚಿಮ ಬಂಗಾಳ ಸರಕಾರದ ಬಗ್ಗೆ ಅಲ್ಲಿನ ಜನರು ತೋರಿಸಿದ ಆಸಕ್ತಿಯಿಂದ ನಾನು ಆಶ್ಚರ್ಯ ಚಕಿತನಾದೆ. ಭಾರತದಲ್ಲಿನ ರಾಷ್ಟ್ರೀಯ ಪರಿಸ್ಥಿತಿ ಬಗ್ಗೆ ನಮ್ಮ ನಿಲುವನ್ನು ತಿಳಿಯಲು ಕೂಡ ಅಲ್ಲಿನವರು ಕುತೂಹಲ ತಾಳಿದ್ದರು.

ಎನ್.ಟಿ.ಆರ್. ವಜಾ - ಮತ್ತೆ ಅಧಿಕಾರಕ್ಕೆ

ನಾನು ಮರಳಿದ ಕೇವಲ ನಾಲ್ಕು ದಿನಗಳ ನಂತರ ಎನ್.ಟಿ. ರಾಮರಾವ್‌ರನ್ನು ವಜಾ ಮಾಡಲಾಯಿತು. ತನ್ನ ಕೃತ್ಯದಿಂದ ಹಿಂದೆ ಸರಿಯಬೇಕಾದೀತು ಎಂದು ಕಾಂಗ್ರೆಸ್ ನಾಯಕರು ಕಲ್ಪಿಸಿಕೊಂಡಿರಲೇ ಇಲ್ಲ.

ಆಗಸ್ಟ್ 16 ರಂದು ರಾಜ್ಯಪಾಲ ರಾಮ ಲಾಲ್ ಎನ್. ಟಿ.ಆರ್.ರನ್ನು ಕರೆಸಿ ರಾಜನಾಮೆ ನೀಡುವಂತೆ ಸೂಚಿಸಿದರು. ಮುಖ್ಯಮಂತ್ರಿ ಬಹುಮತ ಕಳೆದುಕೊಂಡಿದ್ದಾರೆ ಎಂಬುದು ತಮಗೆ ತಿಳಿದು ಬಂದಿದೆ ಎಂದು ರಾಜ್ಯಪಾಲರು ಹೇಳಿದರು. ಈ ಅಂಕಿ ಸಂಖ್ಯೆ ಅವರಿಗೆ ಎಲ್ಲಿಂದ ಸಿಕ್ಕಿತು ಎಂಬುದು ಗೊತ್ತಿಲ್ಲ; ಆದರೆ ದೆಹಲಿಯಲ್ಲಿ ಈ

295 ಶಾಸಕರಲ್ಲಿ ತೆಲುಗುದೇಶಂಗೆ 201 ಸದಸ್ಯರಿದ್ದರು. ಕಾಂಗ್ರೆಸ್ ಬಲ ಕೇವಲ59 ಆಗಿತ್ತು. ಇದಲ್ಲದೆ ತೆಲುಗುದೇಶಂಗೆ ಸರಕಾರಕ್ಕೆ ಸಿಪಿಐ(ಎಂ)ನ ಮೂವರು, ಸಿಪಿಐನ ಐವರು ಹಾಗೂ ಬಿಜೆಪಿಯ ನಾಲ್ವರು ಶಾಸಕರ ಬೆಂಬಲವೂ ಇತ್ತು.

ಆದರೆ ರಾಮಲಾಲ್ ವಿಧಾನಸಭೆಯನ್ನು ವಿಸರ್ಜಿಸಿದರು ಹಾಗೂ ಭಿನ್ನಮತೀಯ ಹಣಕಾಸು ಸಚಿವ ಎನ್.ಭಾಸ್ಕರರಾವ್‌ರನ್ನು ಮುಖ್ಯಮಂತ್ರಿಯಾಗಿ ಪ್ರತಿಷ್ಠಾಪಿಸಿದರು. ಇದನ್ನು ಪ್ರತಿಭಟಿಸಿ ಆಗಸ್ಟ್ 25 ರಂದು 'ಭಾರತ ಬಂದ್'ಗೆ ಪ್ರತಿಪಕ್ಷಗಳು ಕರೆ ನೀಡಿದವು. ಆಗಸ್ಟ್ 21 ರಂದು 161 ಶಾಸಕರ ಜತೆ ಎನ್.ಟಿ.ಆರ್ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿಯವರನ್ನು ಭೇಟಿ ಮಾಡಿದರು.

ದೇಶಾದ್ಯಂತ ಕಂಡು ಬಂದ ವ್ಯಾಪಕ ಪ್ರತಿಭಟನೆ ಹಾಗೂ ಒತ್ತಡದಿಂದಾಗಿ ಸೆಪ್ಟೆಂಬರು 20 ರಂದು ಆಂಧ್ರಪ್ರದೇಶ ವಿಧಾನಸಭೆಯ ಅಧಿವೇಶನವನ್ನು ಕರೆಯಲಾಯಿತು. ಎನ್‌ಟಿಆರ್‌ರನ್ನು ಮತ್ತೆ ಮುಖ್ಯಮಂತ್ರಿಯನ್ನಾಗಿ ಪ್ರತಿಷ್ಠಾಪಿಸದಿದ್ದರೆ ಸೆಪ್ಟೆಂಬರ್ 15 ರಂದು ಆಂಧ್ರಬಂದ್ ನಡೆಸುವುದಾಗಿ ಪ್ರತಿಪಕ್ಷಗಳು ಎಚ್ಚರಿಕೆ ನೀಡಿದವು. ಸೆಪ್ಟೆಂಬರ್ 20 ರಂದು 'ಭಾರತ ಬಂದ್'ಗೂ ಕರೆ ಕೊಡಲಾಯಿತು. ಪಶ್ಚಿಮ ಬಂಗಾಳ ಸರಕಾರ ವ್ಯಾಪಕ ಕಾರ್ಯಕ್ರಮವನ್ನು ರೂಪಿಸಿತು.

(ಮುಂದುವರಿಯುವುದು)

ನಗರ ಪಟ್ಟಣ ಪಂಚಾಯಿತಿ ಚುನಾವಣೆಗಳು ಕುಗ್ಗಿದ ಬಿಜೆಪಿ-ಅಧಿಕಾರ ಬಳಸಿದ ಕಾಂಗ್ರೆಸ್

ಎರಡನೇ ಹಂತದಲ್ಲಿ ನಗರ ಪುರ ಹಾಗೂ ಪಟ್ಟಣ ಪಂಚಾಯತ್‌ಗಳಿಗೆ ಚುನಾವಣೆಗಳು ಮುಕ್ತಾಯಗೊಂಡು ಫಲಿತಾಂಶಗಳೂ ಪ್ರಕಟವಾಗಿವೆ. ರಾಜ್ಯದ 21 ಜಿಲ್ಲೆಗಳ ಸುಮಾರು 750 ವಾರ್ಡ್‌ಗಳಿಗೆ ನಡೆದ ಚುನಾವಣೆಯಲ್ಲಿ 4 ನಗರ ಸಭೆ, 1 ಪುರಸಭೆ, 44 ಪಟ್ಟಣ ಪಂಚಾಯತಿಗಳು ಚುನಾಯಿತವಾಗಿವೆ. ಕಾಂಗ್ರೆಸ್ 364, ಬಿಜೆಪಿ-102, ಜೆಡಿ(ಎಸ್)-85, ಜೆಡಿಯು 50, ಸಿಪಿಐ(ಎಂ)-4, ಸಿಪಿಐ-1, ಬಿಎಸ್‌ಪಿ-6, ಪಕ್ಷೇತರರು 133.

ಇದರಲ್ಲಿ ಬಹುತೇಕ ಕಳೆದ ಚುನಾವಣೆಗಳ ಫಲಿತಾಂಶದಂತಹ ಸ್ವರೂಪದಲ್ಲೇ ಇದ್ದು, ಅಂತಹ ಭಿನ್ನವಾದ ಸ್ಥಿತಿ ನಿರ್ಮಾಣಆಗಿಲ್ಲ. ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್ 2 ನಗರಸಭೆ, 21 ಪಟ್ಟಣ ಪಂಚಾಯ್ತಿಗಳಲ್ಲಿ ಸ್ಪಷ್ಟ ಬಹುಮತ ಪಡೆದಿದ್ದರೆ ಉಳಿದ 10ರಲ್ಲಿ ಮುಂದಿದೆ. ಬಿಜೆಪಿ ಕೇವಲ 3, ಜೆಡಿಯು-2, ಪಕ್ಷೇತರರು 3ರಲ್ಲಿ ಬಹುಮತ ಸಾಧಿಸಿದ್ದಾರೆ.

ಇನ್ನು ಬೆಂಗಳೂರಿನ ಮಹಾನಗರಕ್ಕೆ ಹೊಂದಿಕೊಂಡಿರುವ ಹಾಗೂ ನಗರ ಪ್ರದೇಶಗಳು ಈ ಪ್ರದೇಶಗಳಲ್ಲೆಲ್ಲಾ ಜನತೆ ಈ ಹಿಂದೆ ಬಿಜೆಪಿಗೆ ಬಹುತೇಕ ಬೆಂಬಲಿಸಿದ್ದಾರೆ. ಎಂ.ಪಿ., ಶಾಸಕರರನ್ನು ಆಯ್ಕೆಮಾಡಿದವರು. ಕೆಲವು ನಗರಸಭೆಗಳಲ್ಲಿ ಬಹುಮತ ಪಡೆದಿದ್ದರು. ಆದರೀಗ ಬಿಜೆಪಿಯ ಬಲವೀಗ ಈ ನಗರ ಪ್ರದೇಶಗಳಲ್ಲಿ ಕುಗ್ಗುತ್ತಿರುವುದು ಸ್ಪಷ್ಟವಾಗುತ್ತಿದೆ. ಮೊದಲಿನ ಸುತ್ತಿನ ಚುನಾವಣೆಗಳಲ್ಲಯೂ ಬಿಜೆಪಿ ಶಕ್ತಿ ಕಳೆದುಕೊಂಡಿತ್ತು. ಈಗಲೂ ಅದೇ ಪ್ರತಿಫಲಿಸಿದೆ. ಕೇಂದ್ರದಲ್ಲಿ ವಾಜಪೇಯಿ ಸರ್ಕಾರ, ರಾಜ್ಯದಲ್ಲಿ ಕೇಂದ್ರದ ಸಚಿವರು, ವಿಧಾನಸಭೆಯ ವಿರೋಧ ಪಕ್ಷದ ಸ್ಥಾನಗಳು ಇದ್ದರೂ ಅದರ ವರ್ಚಸ್ಸು ಏನೂ ಮಾಡಲಾಗಿಲ್ಲ. ಹಿಂದೆ ಕಾಂಗ್ರೆಸ್‌ನ ವಿರುದ್ಧದ ನಿಲುವು ತಳೆದ ಜನತೆ ಬಿಜೆಪಿಯನ್ನು ಪರ್ಯಾಯವಾಗಿ ನೆಚ್ಚಿಕೊಂಡಿದ್ದರು. ಆದರೀಗ ಜನತೆಯ ಹಿತ ಕಾಯುವಲ್ಲಿ ಬಿಜೆಪಿ ವಿಫಲವಾಗಿದೆಯೆಂಬುದನ್ನು ಅರಿಯತೊಡಗಿದ್ದಾರೆ. ಜನರನ್ನು ವಂಚಿಸುವಲ್ಲಿ ಇತರೆ ಬಂಡವಾಳಶಾಹಿ- ಭೂಮಾಲೀಕ ಪಕ್ಷಗಳಿಗಿಂತ ಏನೂ ಕಡಿಮೆ ಇಲ್ಲ, ಅವರಿಗಿಂತಲೂ ಒಂದು ಕೈ ಮುಂದು ಎಂದು ತೋರಿಸಿಬಿಟ್ಟಿದ್ದಾರೆ. ಕೇಂದ್ರ ಸರ್ಕಾರದ ಆಘಾತಕಾರಿ ನೀತಿ ಜನರನ್ನು ಭ್ರಮನಿರಸನಗೊಳಿಸಿದೆ. ಹೀಗೆ ಕಾಂಗ್ರೆಸ್ ಮತ್ತು ಬಿಜೆಪಿಗಳ ವಿರುದ್ಧ ರಾಜಕೀಯ ಹೋರಾಟವನ್ನು ನಿರಂತರವಾಗಿ ನಡೆಸಿದ ಜನಪರವಾದ ಬಣಗಳ ವಿಫಲತೆಯೂ ಇದೆ.

ಕಾಂಗ್ರೆಸ್ ತನ್ನ ಅಧಿಕಾರದ ಬಲವನ್ನು ಈ ಚುನಾವಣೆಯಲ್ಲೂ ಬಳಸಿದೆ. ಹಲವೆಡೆ ಬಹುಮತ ಪಡೆದಿದ್ದರೂ ಕಾಂಗ್ರೆಸ್ ಹೇಳಿಕೊಳ್ಳುವಂತೆ ಗೆಲುವು ಅನಾಯಸವಾಗಿಯೂ ಇಲ್ಲ ಮತ್ತು ಕೃಷ್ಣರ ಆಡಳಿತ ವೈಖರಿಗೆ ದೊರೆತ ಬೆಂಬಲವೂ ಅಲ್ಲ.

ಈ ಹಂತದ ಚುನಾವಣೆಯಲ್ಲಿ ಸಿಪಿಐ(ಎಂ) ತನ್ನ ಹೋರಾಟದಲ್ಲಿ 4 ಸ್ಥಾನಗಳನ್ನು ಗಳಿಸಿದೆ. ಈ ಪ್ರದೇಶಗಳು ಜನತೆಯ ನಡುವೆ ಅವಿರತ ಪರಿಶ್ರಮ ಪಟ್ಟ ಪ್ರದೇಶಗಳು. ಬಾಗೇಪಲ್ಲಿ ಪಟ್ಟಣ ಪಂಚಾಯತ್‌ನಲ್ಲಿ ಹಿಂದೆ ಒಂದನೇ ವಾರ್ಡ್‌ನಲ್ಲಿ ಒಂದು ಸ್ಥಾನ ಸಿಪಿಐ(ಎಂ)ಗೆ ಇದ್ದರೆ ಈ ಬಾರಿ ಅಲ್ಲಿ ಅತ್ಯಧಿಕ ಬಹುಮತದಿಂದ ಗೆದ್ದಿರುವುದೇ ಅಲ್ಲದೆ ಇತರೆ ಎರಡು ಕಡೆ ಹೊಸದಾಗಿ ಸ್ಥಾನ ಪಡೆಯಲಾಗಿದೆ. ಹಾಗೆಯೇ ಮೈಸೂರಿನ ಹೆಗ್ಗಡದೇವನಕೋಟೆಯಲ್ಲಿ ಹೊಸ ಸ್ಥಾನ ಗಳಿಸಲಾಗಿದೆ. ಬಾಗೇಪಲ್ಲಿಯಲ್ಲಿ ಶಾಸಕ ಸಂಪಂಗಿಯವರ ವಿರುದ್ಧದ ಜನರ ಅತೃಪ್ತಿ ಹೆಚ್ಚಿರುವುದನ್ನು ಕಾಣಬಹುದು. ಕಾಂಗ್ರೆಸ್ ಆರು ಸ್ಥಾನ ಪಡೆದರೂ ಅಧಿಕಾರ ಹಿಡಿಯುವಷ್ಟು ಬಹುಮತವಿಲ್ಲ.

ಈ ಚುನಾವಣೆಗಳಲ್ಲಿ ಕಾಂಗ್ರೆಸ್, ಬಿಜೆಪಿ ಪಕ್ಷಗಳು ಹಣದ ಹೊಳೆಯನ್ನೇ ಹರಿಸಿವೆ. ಒಂದು ವಾರ್ಡ್‌ಗೆ ಬೆಂಗಳೂರು ಪ್ರದೇಶದಲ್ಲಿ ಕನಿಷ್ಠ 10 ಲಕ್ಷದಿಂದ 40 ಲಕ್ಷದವರೆಗೆ ಈ ಅಭ್ಯರ್ಥಿಗಳು ಹಣ ಚೆಲ್ಲಿದ್ದಾರೆ. ಟಿ.ವಿ., ಮೋಟಾರು ವಾಹನ, ಸೀರೆ, ಬಟ್ಟೆಗಳನ್ನು, ಹೆಂಡ-ಸರಾಯಿ, ಬ್ರಾಂದಿ, ಬಿರ‍್ಯಾನಿಗಳನ್ನು ಪೈಪೋಟಿ ಮೇಲೆ ನೀಡಿದ್ದಾರೆ.



ಪಕ್ಷಗಳ ಬಲಾಬಲ	
ಒಟ್ಟು ಸ್ಥಾನಗಳು	750
ಪ್ರಕಟಿತ ಫಲಿತಾಂಶ	745
ಕಾಂಗ್ರೆಸ್	364
ಬಿಜೆಪಿ	102
ಸಂ.ದಳ	50
ಜಾ. ದಳ	85
ಸಿಪಿಐಎಂ	4
ಸಿಪಿಐ	1
ಬಿಎಸ್‌ಪಿ	6
ಪಕ್ಷೇತರರು	133

ಗೂಂಡಾಗಿರಿಯೂ ನಡೆದಿದೆ. ಸಿಪಿಐ(ಎಂ) ಸ್ಪರ್ಧಿಸಿದ್ದ ಕಾಮಾಕ್ಷಿಪಾಳ್ಯದ ಕೊಟ್ಟಿಗೆಪಾಳ್ಯ, ಟಿ.ದಾಸರಹಳ್ಳಿ, ಬಾಗೇಪಲ್ಲಿಯ 1, 2 ವಾರ್ಡ್‌ಗಳಲ್ಲಿ ಕಾಂಗ್ರೆಸ್, ಖೋಟಾ ಮತದಾರರನ್ನು ನುಗ್ಗಿಸಿದ್ದಾರೆ. ಅವರನ್ನು ತಡೆದಾಗ ಆಕ್ರಮಣ ಮಾಡಿದ್ದಾರೆ. ಪೋಲೀಸರು ಇದಕ್ಕೆ ಶಾಮೀಲಾಗಿದ್ದು, ಇದನ್ನು ಪ್ರತಿಭಟಿಸಿದಾಗ ಲಾಠಿ ಚಾರ್ಜ್ ಸಹ ನಡೆದಿದೆ. ಬೆಂಗಳೂರಿನಲ್ಲಿ ಒಂದು ಮತಗಟ್ಟೆಯಲ್ಲಿ ಮರು ಮತದಾನವೂ ಆಗಿದೆ.

ಈ ಸ್ಥಾನಗಳಿಗೆ ಇಷ್ಟೆಲ್ಲಾ ಪೈಪೋಟಿ, ಹಣದ ಹೊಳೆ ಯಾಕೆ? ಈ ಪ್ರದೇಶಗಳ-ನಗರದ ವಲಯದಲ್ಲಿದ್ದ ಕೈಗಾರಿಕೆಗಳ ಪ್ರದೇಶವೂ ಹೌದು. ಇಲ್ಲಿನ ಭೂಮಿಗೆ ಅಪಾರ ಬೇಡಿಕೆ, ಬೆಲೆ.... ಒಮ್ಮೆಅಧಿಕಾರ ಹಿಡಿದರೆ ಬೇಕಾದಷ್ಟು ಅಕ್ರಮವಾಗಿ ನುಂಗಬಹುದು ಎಂಬ ಲೆಕ್ಕಾಚಾರ ಅವರಿಗೆ. ಹೀಗಾಗಿ ಭಾರಿ ಜಮೀನುದಾರರು, ಕಾಂಟ್ರಾಕ್ಟ್‌ದಾರರು, ಅಕ್ರಮ ಹಣ ನುಂಗುವ ಮಾಫಿಯಾಗಳು ಸ್ಪರ್ಧೆಗೆ ಇಳಿದಿದ್ದಾರೆ. ಬಾಗೇಪಲ್ಲಿಯ 1ನೇ ವಾರ್ಡ್‌ನ ಅಭ್ಯರ್ಥಿಯೊಬ್ಬ 'ಬ್ರೌನ್ ಶುಗರ್' ಮಾದಕ ವಸ್ತುವಿನ ದಂಧೆಯಲ್ಲಿ ಮಾಲು ಸಮೇತ ಸಿಕ್ಕಿಬಿದ್ದು, ಜೈಲಿಗೆ ತಳ್ಳಲ್ಪಟ್ಟವನು.

ಈ ಚುನಾವಣೆಗಳು ವಿವಿಧ ರಾಜಕೀಯ ಶಕ್ತಿಗಳ ಬಗೆಗೆ ಜನತೆಯ ಇಂದಿನ ಮನೋಭಾವ ತೋರಿಸಿವೆ.



ಶೋಕಿಯಾ ಜಮ್ರುತ್

ಸಿಪಿಐ(ಎಂ) ಸ್ಥಾನಗಳು			
ಬಾಗೇಪಲ್ಲಿ			
1ನೇ ವಾರ್ಡ್	ಓಬಳರಾಜು	328	
	ಕಾಂಗ್ರೆಸ್	192	
2ನೇ ವಾರ್ಡ್	ಶೋಕಿಯಾ ಜಮ್ರುತ್	122	
	ಕಾಂಗ್ರೆಸ್	118	
3ನೇ ವಾರ್ಡ್	ಜಿ.ಕೃಷ್ಣಪ್ಪ	312	
	ಸಂಯುಕ್ತ ಜೆಡಿ	253	
ಹೆಗ್ಗಡದೇವನಕೋಟೆ		ಸಿ.ಮಾರುತಿ	

ಸಿಂಗಟಲೂರು ಏತ ನೀರಾವರಿ ಯೋಜನೆ: ಸರ್ಕಾರ ಜನತೆಯ ಆತಂಕ ನಿವಾರಿಸುವುದು ಅಗತ್ಯ

ಕಾವೇರಿ, ಕೃಷ್ಣ ನದಿ ನೀರಿನ ಬಳಕೆಯ ವಿವಾದ ಒಂದೆಡೆ ಈಗ ತುಂಗಭದ್ರಾ ಅಚ್ಚುಕಟ್ಟು ಪ್ರದೇಶವೂ ವಿವಾದದ ಸುಳಿಯಲ್ಲಿದೆ. ಈಗಿನದು ರಾಜ್ಯದ ಎರಡು ಪ್ರದೇಶಗಳ ನಡುವಿನದು. ಸಿಂಗಟಾಲೂರು ಏತ ನೀರಾವರಿ ಯೋಜನೆಗೆ ಸಂಬಂಧಿಸಿದ್ದು. ತಮಗೆ ಲಭ್ಯವಾಗುತ್ತಿರುವ ನೀರು ಕಸಿಯಲಾಗುವುದೇ ಎಂಬ ಆತಂಕ ರೈತರದ್ದು.

ಏನೀ ಸಿಂಗಟಾಲೂರು ಏತ ನೀರಾವರಿ ಯೋಜನೆ? ಇದು 1980 ರ ದಶಕದಲ್ಲಿ ರೂಪಿತವಾದ ಯೋಜನೆ. ನಮ್ಮ ರಾಜ್ಯ ಸರ್ಕಾರದ ತೀರಾ ನಿರ್ಲಕ್ಷ್ಯ, ದೂರದೃಷ್ಟಿಯ ಕೊರತೆಯ ಪರಿಣಾಮದಿಂದ ನೆನೆಗುದಿಗೆ ಬಿದ್ದ ಒಂದು ಯೋಜನೆ. **'ಹುಲಿಗುಡ್ಡ ಯೋಜನೆ'** ಎಂದೇ ಕರೆಯಲಾಗುತ್ತಿದ್ದ ಈ ಯೋಜನೆಯಂತೆ ತುಂಗಭದ್ರ ನದಿಯ ಪಾತ್ರಕ್ಕೆ ಹೊಂದಿಕೊಂಡಿರುವ ಗದಗ, ಕೊಪ್ಪಳ, ಹಡಗಲಿ ಪ್ರದೇಶಗಳಿಗೆ ಕುಡಿಯುವ ನೀರು ಹಾಗೂ ಒಂದಿಷ್ಟು ಸಾವಿರ ಎಕ್ರೆ ಭೂ ನೀರಾವರಿಗಾಗಿ 7 ಟಿ.ಎಂ.ಸಿ.ಬಳಸಲು ಹಿಂದೆ ಅನುಮತಿ ದೊರೆತಿದೆ.

ಈ 7 ಟಿಎಂಸಿ ಜೊತೆಗೆ ಇನ್ನೂ 11 ಟಿಎಂಸಿ ನೀರನ್ನು ಬಳಸುವ ಮೂಲಕ ಕುಡಿಯುವ ನೀರಿನ ಸಮರ್ಪಕ ಪೂರೈಕೆ ಹಾಗೂ ಸುಮಾರು 55 ಸಾವಿರ ಎಕರೆ ಭೂಮಿಗೆ ನೀರುಣಿಸಲು ಸಾಧ್ಯವಾಗುವಂತೆ ಸಿಂಗಟಾಲೂರು ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರ ಕೆಲಸ ಆರಂಭಿಸಿದೆ. ಆಗ ಯೋಜನೆಯ ವೆಚ್ಚದ ಗಾತ್ರ 90 ಕೋಟಿ. ಆದರೀಗ ಕೃಷ್ಣ ಸರ್ಕಾರವು 595 ಕೋಟಿಗೆ ಹೆಚ್ಚಿಸಿದೆ. ಇದರಿಂದಾಗಿ ಅಚ್ಚುಕಟ್ಟು ಪ್ರದೇಶದ ರೈತರು ಸಹಜವಾಗಿ ಆತಂಕಿತರಾಗಿದ್ದಾರೆ. ತಮ್ಮ ಭೂಮಿಗಳಿಗೆ ಸಿಗುತ್ತಿದ್ದ ನೀರಿಗೆ ಎಲ್ಲಿ ಖೋತಾ ಬರಲಿದೆಯೋ ಎಂದು ಆತಂಕಿತರಾಗಿರುವುದು ಸಹಜವೇ. ಯಾಕೆಂದರೆ ಹಿಂಗಾರು ಮತ್ತು ಬೇಸಿಗೆ ಸಂದರ್ಭಕ್ಕೆ ನೀರು ಸಿಗದೇ ಪೈರು ಒಣಗಿಹೋಗುವ ಸಂದರ್ಭಗಳನ್ನು ಪ್ರತಿವರ್ಷ ರೈತರು ಅನುಭವಿಸುತ್ತಲೇ ಇರುತ್ತಾರೆ.

ಆದರೆ ಭಾರೀ ನೀರಾವರಿ ಸಚಿವ ಎಚ್.ಕೆ.ಪಾಟೀಲ್ ಹೇಳಿದಂತೆ ಈಯೋಜನೆಗಾಗಿ ಈ ನೀರು ಬಳಸದೆ ಹೆಚ್ಚುವರಿಯಾಗಿ ಪ್ರತಿವರ್ಷ ಹರಿದುಹೋಗುವ ನೀರನ್ನೇ ಬಳಸಲಾಗುವುದು ಎಂದು. ಹೀಗೆ ಪ್ರತೀವರ್ಷ ಏನಿಲ್ಲವೆಂದರೂ ಕನಿಷ್ಠ 100 ಟಿಎಂಸಿಯಾದರೂ ನೀರು ನದಿಯಲ್ಲಿ ಹಿಡಿದಿಡಲಾಗದೇ ಹರಿದುಹೋಗುವುದು ಎಂಬುದು ಒಂದು ಅಂದಾಜು. ಅದರಲ್ಲಿನ ನೀರನ್ನಷ್ಟೇ ಬಳಸಲಾಗುವುದೇ ಹೊರತು ಬೇರೆ ಹನಿ ನೀರನ್ನು ಮುಟ್ಟುವುದಿಲ್ಲ ಎಂಬುದು ಸರ್ಕಾರದ ಸಮಜಾಯಿಷಿ.

ಆದರೆ ಹಲವು ಸಮಸ್ಯೆಗಳನ್ನು ಬಳ್ಳಾರಿ, ಸಿಂಧನೂರು ಪ್ರದೇಶದ ರೈತರು ಎತ್ತುತ್ತಿದ್ದಾರೆ. ತುಂಗಭದ್ರಾ ಜಲಾಶಯ 133 ಟಿಎಂಸಿ ನೀರನ್ನು ಹಿಡಿದಿಟ್ಟುಕೊಳ್ಳುವ ಶಕ್ತಿ ಇರುವಂತಹದ್ದು. ಇದರಲ್ಲಿ 18 ಟಿಎಂಸಿ ಆವಿಯಾದರೆ 212 ಟಿಎಂಸಿ ನೀರನ್ನು ಬಳಸಲು ಕೆಡಬ್ಲ್ಯೂಡಿಟಿ ಅವಾರ್ಡ್ ತೀರ್ಪು ಇದೆ ನಿಜ. ಆದರೆ ಜಲಾಶಯದಲ್ಲಿ ಹೂಳು ತುಂಬಿರುವುದರಿಂದ ಕೇವಲ 175 ಟಿಎಂಸಿ ಮಾತ್ರ ಬಳಸಲಾಗುತ್ತಿದೆ ಎಂಬುದು ಕೇಳಲಾಗುತ್ತಿರುವ ಮಾತು. ಈ ಹೂಳು 30 ಟಿಎಂಸಿ ಯಷ್ಟು ನೀರಿನ ಜಾಗ ಆಕ್ರಮಿಸಿದೆ ಎಂದು ಒಂದು ಅಂದಾಜು. ಈ ಹೂಳು ಎತ್ತುವ ಪ್ರಸ್ತಾವ ಕಳೆದ ಕನಿಷ್ಠ 25 ವರ್ಷಗಳಿಂದ ಇದ್ದರೂ, ಅದಕ್ಕಾಗಿ ಏನೂ ಮಾಡಲಾಗಲಿಲ್ಲ. ಅದನ್ನೆತ್ತುವ ವೆಚ್ಚವೇ ಇನ್ನೊಂದು ಅಣೆಕಟ್ಟು ಕಟ್ಟಬಹುದಾದ ಮೊತ್ತದ್ದು, ಮಣ್ಣು ಎಲ್ಲಿಗೆ ಸಾಗಿಸಬೇಕು ಎಂಬಿತ್ಯಾದಿ ಕಾರ್ಯ ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಹುತೇಕ ಬರಲಾಗಿದೆ. ಆದರೆ ಹರಿದುಬರುವ ಮಣ್ಣು ತಡೆಯಲು ಈ ಹಿಂದೆ ತಜ್ಞರ ಸಮಿತಿಗಳು ನೀಡಿದ್ದ ಸಲಹೆಗಳು, ವರದಿಗಳು ಮೂಲೆ ಸೇರಿವೆ.

ಒಟ್ಟಾರೆ ಅಚ್ಚುಕಟ್ಟು ಪ್ರದೇಶದ ರೈತರ ಆತಂಕ ಸಹಜವಾದದ್ದು. ಹಾಗೆಯೇ ಗದಗ್‌ನಂತಹ ಜಿಲ್ಲೆಯಲ್ಲಿ ವಿಪರೀತ ಫ್ಲೋರೇಸಿಸ್ ದ್ರಾವಣವಿರುವ ನೀರಿನಿಂದಾಗಿ ಹಲವಾರು ಅಪಾಯಕಾರಿ ರೋಗಗಳಿಗೆ ತುತ್ತಾಗುತ್ತಿರುವುದು, ನದಿ ಪಾತ್ರದಲ್ಲಿದ್ದು ಕುಡಿವ ನೀರಿನ ಅಭಾವ, ಕೃಷಿಗೆ ಒಂದಿಷ್ಟು ನೀರು ಸಿಗದಿರುವುದು ವಾಸ್ತವವೇ. ಇದಕ್ಕಾಗಿ ಹೆಚ್ಚುವರಿ ನೀರಿನ ಬಳಕೆ ಮಾಡಬಹುದು. ಆದರೆ ಸರ್ಕಾರ ಜನರಲ್ಲಿನ ಈ ಆತಂಕ, ಗೊಂದಲಗಳನ್ನು ಸಮರ್ಥವಾಗಿ ವಿವರಿಸಿ, ವಿವಾದವನ್ನು ಸೌಹಾರ್ದಯುತವಾಗಿ ಪರಿಹರಿಸಲು ಮುಂದಾಗಬೇಕು. ಈ ದಿಕ್ಕಿನಲ್ಲಿ ಸರ್ಕಾರದ ಕ್ರಮ ತೃಪ್ತಿಕರವಾಗಿಲ್ಲ. ಜೊತೆಗೆ ಎರಡು ಪ್ರದೇಶದ ರೈತರನ್ನು ಪರಸ್ಪರ ಎತ್ತಿಕಟ್ಟುವ ಹಲವರ ಪ್ರಯತ್ನಗಳು ಕೂಡದು. ಅದು ಅಪಾಯಕಾರಿ.

ಪುಟ 9 ಕ್ಕೆ

ಕರ್ನಾಟಕ ಈ ವಾರ ಒಂದು ನೋಟ

ಎಸ್.ವೈ. ಗುರುಶಾಂತ್

ಕೇಂದ್ರ-ರಾಜ್ಯ ಸರ್ಕಾರಗಳ ಆರ್ಥಿಕ ನೀತಿಗಳ ವಿರುದ್ಧ ಒಗ್ಗೂಡಿ ಹೋರಾಡಲು ನಿರ್ಧಾರ

ಕಾರ್ಮಿಕ ವರ್ಗದ ಅಭೂತಪೂರ್ವ ಒಗ್ಗಟ್ಟು

ಅದೊಂದು ಅಭೂತಪೂರ್ವವಾದ ಸಮಾವೇಶವಾಗಿತ್ತು. ವಿಭಿನ್ನ ತಾತ್ವಿಕ ನೆಲೆಗಳನ್ನು ಹೊಂದಿರುವ ವಿವಿಧ ಕೇಂದ್ರ ಕಾರ್ಮಿಕ ಸಂಘಟನೆಗಳ ವೈವಿಧ್ಯತೆಯಲ್ಲಿ ಏಕತೆಯನ್ನು ಮೆರೆದ ಐತಿಹಾಸಿಕ ಸಮಾವೇಶ ಅದಾಗಿತ್ತು.

ಟೌನ್ ಹಾಲ್‌ನಲ್ಲಿ ಕಿಕ್ಕಿರಿದ ಯಶಸ್ವಿ ರಾಜ್ಯ ಸಮಾವೇಶ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ, ರಾಷ್ಟ್ರ ವಿರೋಧಿ ನೀತಿಗಳ ವಿರುದ್ಧ ಕಾರ್ಮಿಕ ಸಂಘಗಳ ಜಂಟಿ ಸಮಿತಿಯ ಆಶ್ರಯದಲ್ಲಿ ಕಾರ್ಮಿಕರ ರಾಜ್ಯ ಮಟ್ಟದ ಸಮಾವೇಶವೊಂದು ಜುಲೈ 12 ರಂದು ಬೆಂಗಳೂರು ಪುರಭವನದಲ್ಲಿ ಏರ್ಪಟ್ಟಿತ್ತು. ಕರ್ನಾಟಕದ ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿ ಹಿಂದೆಂದೂ ನಡೆಯದಂತಹ ಈ ಸಮಾವೇಶದಲ್ಲಿ ಭಾಗವಹಿಸಲು ರಾಜ್ಯದ ಮೂಲೆ ಮೂಲೆಗಳಿಂದ ಆಗಮಿಸಿದ್ದ ಕಾರ್ಮಿಕ ಪ್ರತಿನಿಧಿಗಳು ಬೆಳಿಗ್ಗೆಯಿಂದಲೇ ಪುರಭವನದಲ್ಲಿ ಬಂದು ಸೇರತೊಡಗಿದರು. AITUC, BMS, CITU, HMS, HMKP, INTUC, TUCC, UTUCLS, ಬ್ಯಾಂಕ್, ವಿಮೆ, ಕೇಂದ್ರ- ರಾಜ್ಯ ಸರ್ಕಾರಿ ನೌಕರರು, ಮೆಡಿಕಲ್ ಸೇಲ್ಸ್ ರೆಪ್ರೆಸೆಂಟೇಟಿವ್ಸ್ ಮತ್ತು ಸಾರ್ವಜನಿಕ ವಲಯದ ಸಂಘಟನೆಗಳನ್ನು ಪ್ರತಿನಿಧಿಸುವ ಭಿನ್ನ ಭಿನ್ನ ಬಣ್ಣದ ಬಾವುಟಗಳು ಪುರಭವನ ಎದುರು ಸಮನಾಂತರದಲ್ಲಿ ಹಾರಾಡುತ್ತಿದ್ದುದು ರಸ್ತೆಯಲ್ಲಿ ಹಾದು ಹೋರಟವರೆಲ್ಲರ ಗಮನ ಸೆಳೆಯುತ್ತಿತ್ತು.


ಅನುಭವದ ಆಳದಿಂದ ಹೊರಹೊಮ್ಮಿದ ಐಕ್ಯತೆ

ಸರಿಯಾಗಿ ಹನ್ನೊಂದು ಘಂಟೆಗೆ ಸಮಾವೇಶದ ಕಲಾಪಗಳು ಆರಂಭಗೊಂಡವು. ಎಐಟಿಯುಸಿಯ ಎಂ.ಸಿ. ನರಸಿಂಹನ್, ಬಿ.ಎಂ.ಎಸ್.ನ ಅಲ್ಲಂಪಲ್ಲಿ ವೆಂಕಟರಾಮ್ ಹಾಗೂ ಬಿ.ಕೆ. ಸದಾಶಿವ, ಸಿಐಟಿಯುನ ಎಸ್. ಸೂರ್ಯನಾರಾಯಣರಾವ್, ಹೆಚ್.ಎಂ.ಎಸ್.ನ ಎಂ. ವಿ. ಹರೀಶ್, ಹೆಚ್.ಎಂ.ಕೆ.ಪಿ.ಯ ಮೈಕಲ್ ಫರ್ನಾಂಡಿಸ್, ಐ.ಎನ್.ಟಿ.ಯು.ಸಿ.ಯ ಪಿ.ಕೆ. ಚಂದ್ರಶೇಖರ್, PWTUCಯ ಆರ್. ಎಂ. ಗೋಡಬೊಲೆ, TUCCಯ ಆರ್. ಶಿವಶಂಕರ್, UTUCLSನ ಕೆ. ಸೋಮಶೇಖರ್ ಅಧ್ಯಕ್ಷೀಯ ಮಂಡಳಿಯ ಸ್ಥಾನಗಳನ್ನು ಅಲಂಕರಿಸಿದರು.

ಇದೆಂತಹ ಜಾಗತೀಕರಣ : ಡಾ। ಪಂಧೆ.

ಸಮಾವೇಶಕ್ಕೆ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾಮ್ರೆಡ್ ಎಂ.ಕೆ. ಪಂಧೆ ಅವರು "ಇದೊಂದು ಐತಿಹಾಸಿಕ ಸಮಾವೇಶವಾಗಿದೆ" ಎಂದು ತಮ್ಮ ಭಾಷಣವನ್ನು ಆರಂಭಿಸಿದರು. ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಒಕ್ಕೂಟಗಳು ಒಂದೇ ವೇದಿಕೆಯನ್ನು ಹಂಚಿಕೊಳ್ಳಲು ಸಾಧ್ಯವಾಗಿರುವುದನ್ನು ಕಂಡು ತಮಗಾದ ಸಂತೋಷವನ್ನು ವ್ಯಕ್ತಪಡಿಸಿದ ಡಾ। ಪಂಧೆಯವರು "ನಮ್ಮ ಒಬ್ಬೊಬ್ಬರ ಸ್ವಂತ ಅನುಭವದಿಂದ ಈ ಐಕ್ಯತೆ ಸಾಧ್ಯವಾಗಿದೆ" ಎಂದು ಹೇಳಿದರು. ಜಾಗತೀಕರಣದ ವಕ್ತಾರರಾಗಿರುವ ಮುಂದುವರೆದ ರಾಷ್ಟ್ರಗಳಲ್ಲಿ ಕಾರ್ಮಿಕ ಸಂಘಗಳ ಪ್ರಾಮುಖ್ಯತೆಯನ್ನು ತಿರಸ್ಕರಿಸಲಾಗುತ್ತಿರುವ ಈ ಕಾಲ ಘಟ್ಟದಲ್ಲಿ ಜಾಗತೀಕರಣದ ಅನಿಷ್ಟಗಳ ವಿರುದ್ಧ ಭಾರತದ ಕಾರ್ಮಿಕ ಸಂಘಗಳು ಪರಸ್ಪರ ಹತ್ತಿರ ಬರುತ್ತಿರುವುದು ಅತ್ಯಂತ ಸ್ವಾಗತಾರ್ಹ ಬೆಳವಣಿಗೆಯಾಗಿದೆ ಎಂದು ಹೇಳಿದರು.

ವೇದಿಕೆ ಮೇಲೆ ನಾಯಕರು




ಡಾ। ಪಂಧೆಯವರ ಭಾಷಣ ಮುಂದುವರೆದಿತ್ತು. ಕಿಕ್ಕಿರಿದು ತುಂಬಿದ ಪುರಭವನದಲ್ಲಿ ನೆರೆದವರೆಲ್ಲರನ್ನು ಡಾ। ಪಂಧೆಯವರ ವಿಚಾರ ಲಹರಿ ಗಂಭೀರವಾದ ಚಿಂತನೆಗೆ ಒಳಪಡಿಸಿತು.

ನಾವು ಜಾಗತೀಕರಣವನ್ನು ಸಾರಾಸಗಟಾಗಿ ವಿರೋಧಿಸುವುದಿಲ್ಲ ಎಂದ ಅವರು ದೇಶದೇಶಗಳ ನಡುವಿನ ಅಂತರಗಳು ಅಳಿದು ಪರಸ್ಪರ ಸ್ನೇಹ ಸಹಕಾರ ಬೆಳೆಯುವಂತಹ ಜಾಗತೀಕರಣವಾಗಿದ್ದರೆ ಅದನ್ನು ನಾವ್ಯಾಕೆ ವಿರೋಧಿಸಬೇಕು? ಹಿಂದುಳಿದ ರಾಷ್ಟ್ರಗಳ ಆರ್ಥಿಕತೆಗಳನ್ನು ಕ್ಷಣಾರ್ಧದಲ್ಲಿಯೇ ಬುಡಮೇಲು ಮಾಡುವ ಹಣಕಾಸು ಬಂಡವಾಳದ ಜಾಗತೀಕರಣವನ್ನು ನಾವು ವಿರೋಧಿಸುತ್ತೇವೆ. ಇಂದು ಜಾಗತೀಕರಣದಿಂದಾಗಿ ಸರಕು ಸಾಮಗ್ರಿಗಳನ್ನು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸಾಗಿಸಲು ಯಾವುದೇ ಅಡೆತಡೆಗಳಿಲ್ಲ ಎನ್ನಲಾಗುತ್ತದೆ. ಆದರೆ ಸರಕುಗಳಂತೆ ಶ್ರಮಶಕ್ತಿಯ ಚಲನೆ ಸಾಧ್ಯವಾಗಿಲ್ಲವಲ್ಲ! ಕಾರ್ಮಿಕರು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ದುಡಿಯಲು ಹೋಗುವುದು ಅದ್ಯಾಕೆ ಸರಳವಾಗಿಲ್ಲ?

ನಾವು ಸುಧಾರಣೆಗಳ ವಿರೋಧಿಗಳಲ್ಲ, ನಮಗೆ ಸುಧಾರಣೆಗಳು ಬೇಕು. ನಮ್ಮ ದೇಶದ ಜನಗಳನ್ನು ಕಿತ್ತು ತಿನ್ನುತ್ತಿರುವ ಬಡತನವನ್ನು ಹೋಗಲಾಡಿಸುವ ಸುಧಾರಣೆಗಳು ಬೇಕು. ನಮ್ಮ ಯುವಕರ ಪ್ರತಿಭೆಯನ್ನು ಸಾಮರ್ಥ್ಯವನ್ನು ಬಳಸಿಕೊಂಡು ನಿರುದ್ಯೋಗವನ್ನು ನಿರ್ಮೂಲನೆ ಮಾಡುವ ಸುಧಾರಣೆಗಳು ನಮಗೆ ಬೇಕು. ಆದರೆ ಕಳೆದ ಹತ್ತು ವರ್ಷಗಳ ಸುಧಾರಣೆಗಳ ನಮ್ಮ ಅನುಭವ ಕಳವಳಕಾರಿಯಾಗಿದೆ. ಜಾಗತೀಕರಣದ ನೀತಿಗಳಿಂದ ಮುಂದುವರೆದ ಕೆಲವೇ ಕೆಲವು ರಾಷ್ಟ್ರಗಳಿಗೆ ಲಾಭವಾಗಿದೆ. ಜಗತ್ತಿನಾದ್ಯಂತ ಸೃಷ್ಟಿಯಾದ ಸಂಪತ್ತಿನ ಬಹು ದೊಡ್ಡ ಭಾಗ ಈ ಕೆಲವೇ ಕೆಲವು ರಾಷ್ಟ್ರಗಳಿಗೆ ಹರಿದು ಬಂದಿದೆ. ಆರ್ಥಿಕ ಅಸಮಾನತೆ ಭಯಾನಕವಾಗಿ ಹೆಚ್ಚುತ್ತಿದೆ. ಜಗತ್ತಿನ ಹತ್ತು ಅತೀ ಶ್ರೀಮಂತ ದೇಶಗಳು ಜಗತ್ತಿನ ಒಟ್ಟು ಆದಾಯದ ಶೇಕಡಾ 85ರಷ್ಟನ್ನು ಭೋಗಿಸುತ್ತವೆ. ಮುಂದುವರೆದ ದೇಶಗಳ ತಲಾ ವರಮಾನವು ಹಿಂದುಳಿದ ದೇಶಗಳ ತಲಾ ವರಮಾನಕ್ಕಿಂತ 78 ಪಟ್ಟು ಹೆಚ್ಚಾಗಿದೆ. ನಿಮ್ಮ ಒಬ್ಬೊಬ್ಬರ ಆದಾಯ ಇದೇ ರೀತಿ 78 ಪಟ್ಟು ಹೆಚ್ಚಾದರೆ ನಿಮ್ಮ ಜೀವನ ಹೇಗಾಗಬಹುದು, ಯೋಚಿಸಿ ಎಂದು ಡಾ। ಪಂಧೆಯವರು ಸಭಿಕರಿಗೆ ಹಾಕಿದ ಪ್ರಶ್ನೆ ಅವರ ಮನಸ್ಸುಗಳನ್ನು ಕಲಕದೆ ಇರಲಿಲ್ಲ.

"ಆಳವಾಗುತ್ತಿರುವ ಆರ್ಥಿಕ ಅಸಮಾನತೆಗಳಿಗೆ ಅಸಮಾನ ವಾಣಿಜ್ಯ ಸಂಬಂಧಗಳೇ ಕಾರಣ" ಎಂದು ಡಾ। ಪಂಧೆ ತಮ್ಮ ಮಾತುಗಳನ್ನು ಮುಂದುವರೆಸಿದರು. ಇಂದು ಮುಕ್ತ ವ್ಯಾಪಾರದ ಬಗ್ಗೆ ಭಾರೀ ಪ್ರಚಾರ ನಡೆದಿದೆ. ಎಲ್ಲಿದೆ ಮುಕ್ತ ವ್ಯಾಪಾರ? ಭಾರತದಂತಹ ದೇಶಗಳಿಗೆ ತಮ್ಮ ಉತ್ಪನ್ನಗಳನ್ನು ರಫ್ತು ಮಾಡಲು ಮುಕ್ತ ಅವಕಾಶ ಎಲ್ಲಿದೆ? ಬಲಾಢ್ಯ ರಾಷ್ಟ್ರಗಳು ವಾಣಿಜ್ಯ ಒಕ್ಕೂಟ (Trade Blocks) ಗಳನ್ನು ರಚಿಸಿಕೊಂಡಿವೆ. ಅವುಗಳ ಮೂಲಕ ಈ ರಾಷ್ಟ್ರಗಳು ಜಾಗತಿಕ ಮಾರುಕಟ್ಟೆಯನ್ನು ನಿಯಂತ್ರಿಸುತ್ತಾ ಅದನ್ನು ಕೇವಲ ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತವೆ. ಮುಂದುವರೆದ ರಾಷ್ಟ್ರಗಳು ತಮ್ಮ ಹಿತರಕ್ಷಣೆಗಾಗಿ ಒಂದುಗೂಡ ಬಹುದಾದರೆ ನಾವು ಹಿಂದುಳಿದ ರಾಷ್ಟ್ರಗಳು ಏಕೆ ಒಂದುಗೂಡಬಾರದು? ನಾವು ಪರಸ್ಪರ ಕಚ್ಚಾಡುವುದು, ಸ್ಪರ್ಧೆಗಿಳಿಯುವುದು ಅವರಿಗೆ ಲಾಭದಾಯಕವಾಗುತ್ತದೆ. ಭಾರತ ಕಡಿಮೆ ದರದಲ್ಲಿ ಚಹ ರಫ್ತು ಮಾಡಲು ಹೊರಟರೆ ಶ್ರೀಲಂಕ ಇನ್ನೂ ಕಡಿಮೆ ದರದಲ್ಲಿ ರಫ್ತು ಮಾಡುತ್ತದೆ. ನಮ್ಮ ನಡುವಿನ ಪೈಪೋಟಿಯಿಂದ ಶ್ರೀಮಂತ ದೇಶಗಳಿಗೆ ನಮ್ಮ ಸರಕುಗಳು ಅಗ್ಗವಾಗಿ ಸಿಗುವಂತಾಗುತ್ತದೆ. ಆದರೆ ನಮ್ಮ ಆರ್ಥಿಕತೆಗಳು ಮಾತ್ರ ಸೊರಗುತ್ತವೆ.



ಹತ್ತು ವರ್ಷಗಳ ಸುಧಾರಣೆಗಳು :

90ರ ದಶಕದಲ್ಲಿ ಸುಧಾರಣೆಗಳ ಹೆಸರಿನಲ್ಲಿ ಖಾಸಗೀಕರಣ, ಉದಾರೀಕರಣದ ನೀತಿಗಳನ್ನು ನಮ್ಮ ದೇಶದೊಳಗೆ ಅನುಷ್ಠಾನಕ್ಕೆ ತರಲು ಆರಂಭವಾದಾಗ ನಮ್ಮ ದೇಶ ಬಾಂಧವರಿಗೆ ಅನೇಕ ಭರವಸೆಗಳನ್ನು ನೀಡಲಾಗಿತ್ತು. ಅಭಿವೃದ್ಧಿಯ ವೇಗ ತೀವ್ರಗೊಳ್ಳಲಿದೆ ಎಂದೂ, ಸಿಕ್ಕಾಪಟ್ಟೆ ವಿದೇಶಿ ಬಂಡವಾಳ ಹರಿದು ಬರಲಿದೆ ಎಂದೂ, ನಮ್ಮ ರಫ್ತು ವ್ಯಾಪಾರ ಗಣನೀಯವಾಗಿ ಹೆಚ್ಚಲಿದೆ ಎಂದೂ ಹೇಳಲಾಗಿತ್ತು. ಹತ್ತು ವರ್ಷಗಳ ನಂತರ ಇಂದು ನಾವು ಕಾಣುತ್ತಿರುವುದು ಈ ಭರವಸೆಗಳಿಗೆ ವ್ಯತಿರಿಕ್ತವಾದ ಪರಿಸ್ಥಿತಿ. ಕೃಷಿ ಹಾಗೂ ಕೈಗಾರಿಕಾ ರಂಗಗಳಲ್ಲಿ ಉತ್ಪಾದನೆ ಕುಸಿದಿದೆ, ಅಭಿವೃದ್ದಿಯ ವೇಗ ನಿಧಾನವಾಗಿದೆ. ನಮ್ಮ ರಫ್ತುಗಿಂತ ಆಮದು ಹೆಚ್ಚಾಗಿದೆ. ನಮ್ಮ ಮಾರುಕಟ್ಟೆ ವಿದೇಶಿ ಸರಕುಗಳಿಂದ ತುಂಬಿಹೋಗಿದೆ. ವಿದೇಶಿ ಬಂಡವಾಳ ಹರಿದು ಬರಲಿಲ್ಲ. ಹೊಸ ಕೈಗಾರಿಕೆಗಳ ಸ್ಥಾಪನೆಯಾಗಲಿಲ್ಲ. ನಮ್ಮ ಕೈಗಾರಿಕಾ ಘಟಕಗಳನ್ನು ಬಹುರಾಷ್ಟ್ರೀಯ ಕಂಪೆನಿಗಳು ನುಂಗುತ್ತಿವೆ. ನಮ್ಮ ಕೈಗಾರಿಕಾ ನೆಲವನ್ನು ಬಹುರಾಷ್ಟ್ರೀಯ ಕಂಪೆನಿಗಳು ಆಕ್ರಮಿಸಿಕೊಳ್ಳುತ್ತಿವೆ.

ಅಂದು ಮಹಾತ್ಮ ಗಾಂಧಿಯವರು ಸ್ವದೇಶಿ ಚಳುವಳಿಯನ್ನು ಹುಟ್ಟುಹಾಕಿ ವಿದೇಶಿ ಸರಕುಗಳನ್ನು ಬಹಿಷ್ಕರಿಸಲು ಕರೆನೀಡಿದ್ದರು. ಆದರೆ ಇಂದು ಮತ್ತೆ ವಿದೇಶಿ ಸರಕುಗಳು ಹರಿದು ಬರಲು ದೇಶದ ಗೇಟುಗಳನ್ನೆಲ್ಲಾ ತೆರೆದು ಇಟ್ಟಿರುವುದರಿಂದ ಕೈಗಾರಿಕಾ ರೋಗಗ್ರಸ್ತತೆ ಒಂದು ಸಾಂಕ್ರಾಮಿಕ ಪಿಡುಗಿನಂತೆ ಹರಡುತ್ತಿದೆ. ಸರ್ ವಿಶ್ವೇಶ್ವರಯ್ಯ ಕರ್ನಾಟಕದವರೇ ಆಗಿದ್ದರು. ಅವರ ದೂರದೃಷ್ಟಿ ಅಪರೂಪದ್ದು. ಅವರು ಸ್ವಾವಲಂಭಿ ಭಾರತದ ಕನಸು ಕಂಡವರಾಗಿದ್ದರು. ಭಾರತ ಸ್ವಾವಲಂಭಿಯಾಗುವುದೆಂದರೆ ಅದರ ಆಮದು ಕಡಿಮೆಯಾಗಬೇಕು. ನಮಗೆ ಬೇಕಾದುದನ್ನು ನಾವು ನಮ್ಮಲ್ಲಿಯೇ ಉತ್ಪಾದಿಸಬೇಕು. ಆದರೆ ಇಂದು ಅವರೇ ಸ್ಥಾಪಿಸಿದ ಉಕ್ಕು ಉತ್ಪಾದಿಸುವ ಘಟಕವನ್ನು ಖಾಸಗೀಯವರಿಗೆ ಮಾರಾಟ

ಪುಟ 9 ಕ್ಕೆ

ಯಂತ್ರ ನಡೆಯದು ನೀವು ನಡೆಸದೆ

ಎಚ್ಚರವಾಗಿಹ ದುಡಿಮೆದಾರರೇ,
ಕಾದಿರಿ ಒಗ್ಗಟ್ಟಾಗುತ ಎಲ್ಲರೂ
ಮುರಿದಿಕ್ಕಲು ಬಂಧನ ಬೇಡಿಗಳೆಲ್ಲ.
ಮರಳಿ ಬಂದಿತು ಕ್ರಾಂತಿಯ ಕಾಲ
ಕಳಚಲು ನಿಮ್ಮಯ ಭುಜಗಳು ನೊಗವ
ಕೆಳಗಡೆ ನಿಮ್ಮಯ ತೋಳ್ಗಳು ನೇಗಿಲ
ಧೂರ್ತ ಶೋಷಕರ ಎದೆಗಳು ನಡುಗಿ
ಜಿಗಣೆ ಧನಿಕರಿಗೆ ಗೋಳೆ ಗೋಳು.
ನಿಮ್ಮ ಅಣತಿಯಿಲ್ಲದೆ ತಿರುಗದು ಗಾಲಿ
ನಿಂತರೆ ನೀವು ನಿಲುವುದು ಗಾಡಿ
ಯಂತ್ರ ಚಲಿಸಲು ನೀವು ನಡೆಸದೆ
ಲಾಭವೆಲ್ಲಿದೆ ನೀವು ದುಡಿಯದೆ?
ಕವಿದಿಹ ಮೌಢ್ಯವ ಬೇಗನೆ ಹರಿಸಿ
ದಾಸ್ಯವ ತಾಳುವ ಸಹನೆಯ ತ್ಯಜಿಸಿ
ಅನ್ನ ಸ್ವಾತಂತ್ರ್ಯವು ನಮಗೆಂದು
ತಿಳಿಯಿರಿ ಸ್ವಾತಂತ್ರ್ಯವೇ ನಮ್ಮುಸಿರು

- ಕಾರ್ಲ್‌ಮಾರ್ಕ್ಸ್

ಜನ ಚಳುವಳಿಯ ಉತ್ತಮ ಸಂಘಟಕ ತ್ಯಾಗಮಯಿ ನಾಯಕ

ಕಾಮ್ರೇಡ್ ಶೈಲೇನ್‌ದಾಸ್ ಗುಪ್ತಾ ನಿಧನ

ಜಗತ್ತು ನಿಬ್ಬೆರಗಾಗುವಂತೆ ಪ.ಬಂಗಾಳದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಿ ಬೆಳೆಸುವಲ್ಲಿ ಶ್ರಮಿಸಿದ ಕ್ರಾಂತಿಕಾರಿ ನಾಯಕರಲ್ಲಿ ಒಬ್ಬರು ಕಾಂ! ಶೈಲೆನ್ ದಾಸ್ ಗುಪ್ತಾರವರು. ತೀರಾ ಬಡ ಕುಟುಂಬದಿಂದ ಬಂದ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು. ಅಲ್ಲಿಂದ ಎಲ್ಲಾ ಹಂತಗಳಲ್ಲಿಯೂ, ವಿವಿಧ ಜವಾಬ್ದಾರಿ ನಿರ್ವಹಿಸಿ ಎಡರಂಗದ ಅಧ್ಯಕ್ಷರಾಗಿ ಶ್ರಮಿಸಿದ ಅವರು ಈಗ ನಮ್ಮನ್ನಗಲಿದ್ದಾರೆ.

ಅತ್ಯುತ್ತಮ ಸಂಘಟಕ, ಬಂಗಾಳದ ಜನಪರ ಚಳುವಳಿಯ ಪ್ರಮುಖ ನೇತಾರ, ಸಿಪಿಐ(ಎಂ) ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯ, ಪಶ್ಚಿಮ ಬಂಗಾಳದ ಎಡರಂಗದ ಅಧ್ಯಕ್ಷ ಕಾಮ್ರೇಡ್ ಶೈಲೇನ್ ದಾಸ್ ಗುಪ್ತಾ, ಜುಲೈ 10 ರಂದು ರಾತ್ರಿ ಮುಂಬೈ ಆಸ್ಪತ್ರೆಯಲ್ಲಿ ಹೃದಯ ಚಿಕಿತ್ಸೆ ಸಂದರ್ಭದಲ್ಲಿ ನಿಧನರಾದರು. ಅವರಿಗೆ 81 ವರ್ಷ ವಯಸ್ಸಾಗಿತ್ತು. ಪತ್ನಿ, ಪುತ್ರ ಮತ್ತು ಪುತ್ರಿಯನ್ನು ಅಗಲಿದ ಶೈಲೇನ್ ಬಾಬು ಲಕ್ಷಾಂತರ ಪಕ್ಷದ ಸದಸ್ಯರನ್ನು, ಅಸಂಖ್ಯಾತ ಅಭಿಮಾನಿಗಳನ್ನು ಅಗಲಿ ಹೋದರು.


1897 ರಲ್ಲಿ ಇಂದಿನ ಬಾಂಗ್ಲಾದೇಶದ ಬರಿಶಾಲ್ ಜಿಲ್ಲೆಯಲ್ಲಿ ಹುಟ್ಟಿದ ಶೈಲೇನ್ ದಾಸ್‌ಗುಪ್ತಾ 1938 ರಲ್ಲಿ ಮೆಟ್ರಿಕ್ಯುಲೇಶನ್ ಪಾಸು ಮಾಡಿದರು ಹಾಗೂ 1939 ರಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು. ಅಷ್ಟರಲ್ಲಿಯೇ ಕ್ರಾಂತಿಕಾರಿ ಸಂಘಟನೆ ಅನುಶೀಲನ್ ಸಮಿತಿಯ ಚಟುವಟಿಕೆಗಳಲ್ಲಿ ಭಾಗವಹಿಸಿ ಜೈಲು ವಾಸ ಅನುಭವಿಸಿದ್ದರು. ನಂತರ ಜನಪರ ಚಳುವಳಿಯ ಭಾಗವಾಗಿ ಅನೇಕ ಬಾರಿ ಜೈಲಿಗೆ ಹೋಗಬೇಕಾಯಿತು.

ತೀರ ಬಡತನದಿಂದ ಬೆಳೆದುಬಂದ ಶೈಲೇನ್ ದಾಸ್‌ಗುಪ್ತಾ, ಕುಟುಂಬದ ಐದು ಮಂದಿಯ ಜೀವನ ನಿರ್ವಹಣೆಗಾಗಿ ಕೆಲಸವನ್ನು ಅರಿಸಿ ಕಲ್ಕತ್ತಕ್ಕೆ ಬಂದು ಟೆಲಿಗ್ರಾಫ್ ಸಹಕಾರಿ ಸಂಘದಲ್ಲಿ, ಬ್ರಿಟಿಶ್ ಕಂಪನಿಯೊಂದರಲ್ಲಿ, ಕೊಲ್ಕತ್ತಾ ಬಂದರಿನಲ್ಲಿ ಕೆಲಸ ಮಾಡುತ್ತಿದ್ದರು. ಕುಟುಂಬದ ಪರಿಸ್ಥಿತಿ ಕಷ್ಟದಲ್ಲಿದ್ದರೂ, 1944 ರಲ್ಲಿ ಕೆಲಸ ಬಿಟ್ಟು ಪಕ್ಷದ ಪೂರ್ಣಾವಧಿ ಕ್ರಾಂತಿಕಾರಿಯಾದರು. ಅಂದಿನ ದಿನಗಳಲ್ಲಿ ಸರಿಯಾದ ವೇತನ ಸಿಗುತ್ತಿರಲಿಲ್ಲ. ಆದ್ದರಿಂದ ಸಾಹಿತ್ಯವನ್ನು ಮಾರಾಟ ಮಾಡಿ ಜೀವನ ನಿರ್ವಹಿಸುತ್ತಿದ್ದರು. ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೆ, ಕಮ್ಯುನಿಸ್ಟ್ ಜೀವನ ಶೈಲಿಗೆ ತನ್ನನ್ನು ತಾನೇ ತೊಡಗಿಸಿಕೊಂಡ ಅವರು ಸಾಮಾನ್ಯ ಕಾರ್ಯಕರ್ತನಿಂದ ಪಕ್ಷದ ಅತ್ಯುನ್ನತಮಟ್ಟದ ನಾಯಕತ್ವದವರೆಗೂ ಬೆಳೆದರು.

1954 ರಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಪಶ್ಚಿಮ ಬಂಗಾಳದ ರಾಜ್ಯ ಸಮಿತಿ ಸದಸ್ಯರಾದ ಅವರು ಪಕ್ಷ ಇಬ್ಭಾಗವಾದ ನಂತರ ಸಿಪಿಐ(ಎಂ) ನಲ್ಲಿಯೂ ರಾಜ್ಯ ಸಮಿತಿ ಸದಸ್ಯರಾಗಿದ್ದು, 1982 ರಲ್ಲಿ ಕಾರ್ಯದರ್ಶಿ ಮಂಡಳಿ ಸದಸ್ಯರಾದರು. 1990 ರಲ್ಲಿ ಸರೋಜ್ ಮುಖರ್ಜಿ ಯವರ ನಿಧನದ ನಂತರ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಗೊಂಡ ಶೈಲೇನ್‌ದಾಸ್‌ಗುಪ್ತಾ ಎಡರಂಗದ ಅಧ್ಯಕ್ಷರಾಗಿ, ನಂತರ ಪಕ್ಷದ ಕೇಂದ್ರ ಸಮಿತಿ ಸದಸ್ಯರಾಗಿ, ಪಾಲಿಟ್‌ಬ್ಯೂರೋ ಸದಸ್ಯರಾಗಿ ಕಾರ್ಯನಿರ್ವಹಿಸಿದರು.

ಪಕ್ಷದ ಕೇಂದ್ರ ಸಮಿತಿಯು ಕಲ್ಕತ್ತದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಕೇಂದ್ರಕ್ಕೆ ಸಹಾಯ ಮಾಡಿದ ಶೈಲೇನ್, ಕಾಂ.ಜ್ಯೋತಿಬಸುರವರ ಸಂಪಾದಕತ್ವದಲ್ಲಿ ಪೀಪಲ್ಸ್ ಡೆಮಾಕ್ರಸಿಯನ್ನು ನಡೆಸಿಕೊಂಡು ಹೋದರು. ಅದೇ ಸಂದರ್ಭದಲ್ಲಿ ಅಲ್ಲಿನ ರಾಜ್ಯಕೇಂದ್ರದಲ್ಲಿಯೂ ಕೆಲಸ ಮಾಡಿದರು. ಅಚ್ಚುಕಟ್ಟಿನ ಕೆಲಸ, ಅತಿ ಸಣ್ಣ ಕೆಲಸಕ್ಕೂ ಅವರು ನೀಡುತ್ತಿದ್ದ ಗಮನ, ಅತಿ ಜಿಗುಟಿನ ಸಂದರ್ಭದಲ್ಲೂ ಅವರು ತೋರುತ್ತಿದ್ದ ಶ್ರದ್ಧೆ, ತಾಳ್ಮೆ ಎತ್ತರದ ನಾಯಕತ್ವಕ್ಕೆ ಅವರನ್ನು ಕೊಂಡೊಯ್ಯಿತು.

ಮಾರ್ಕ್ಸ್‌ವಾದಿ ಸಾಹಿತ್ಯದ ಪ್ರಕಟಣೆಯಲ್ಲೂ ಶೈಲೆನ್ ದಾಸ್ ಗುಪ್ತಾ ಮುತುವರ್ಜಿ ವಹಿಸಿದರು. ಕಾಂ. ಸುಂದರಯ್ಯನವರ ಮಾರ್ಗದರ್ಶನದಲ್ಲಿ ಮಾವೋತ್ಸೇ ತುಂಗ್, ಲೆನಿನ್ ಮತ್ತು ಸ್ಟಾಲಿನ್ ಅವರ ಆಯ್ದ ಕೃತಿಗಳನ್ನು ಪ್ರಕಟಣೆಗೆ ತಂದ ಅವರು ಪಕ್ಷದ ಸಾಹಿತ್ಯವನ್ನು ಪ್ರಕಟಿಸಿ ಪ್ರಚಾರಕ್ಕೆ ತಂದರು. ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಕೃತಿಗಳನ್ನು ಓದಿ ಅರಗಿಸಿಕೊಂಡ ಅವರು ಪಕ್ಷದ ಗೊತ್ತುವಳಿಗಳನ್ನು ಅಭ್ಯಸಿಸಿ ದೈನಂದಿನ ಕೆಲಸದಲ್ಲಿ, ತನ್ನ ಜೀವನ ಶೈಲಿಯಲ್ಲಿ ಅಳವಡಿಸಿಕೊಂಡರು.



ಯುವ ಸಂಗಾತಿಗಳಿಗೆ ವಿಶೇಷ ಗಮನ ನೀಡುತ್ತಿದ್ದ ಕಾಮ್ರೇಡ್ ಶೈಲೇನ್ ತನ್ನ ಕ್ರಾಂತಿಕಾರಿ ಅನುಭವಗಳನ್ನು ಹೇಳುವುದರ ಮೂಲಕ ಅವರಲ್ಲಿ ಅಭಿರುಚಿಯನ್ನು ಬೆಳೆಸುತ್ತಿದ್ದರು, ಹುರಿದುಂಬಿಸುತ್ತಿದ್ದರು. ಪಕ್ಷದ ಸಭೆಗಳಲ್ಲಿ ಸತತವಾಗಿ ಹಳಬರು ಮಾತ್ರ ಕಾಣಿಸಿಕೊಂಡಾಗ ಹೊಸಬರೆಲ್ಲಿ ಎಂದು ಪ್ರಶ್ನಿಸುತ್ತಿದ್ದರು. ಜನಪರ ಚಳುವಳಿಯು ನಿಂತ ನೀರಾಗಬಾರದು, ಹರಿಯುವ ತೊರೆಯಾಗಬೇಕೆಂದು ಬಯಸುತ್ತಿದ್ದರು.

ಶೈಲೇನ್ ದಾಸ್ ಗುಪ್ತಾ ಅವರ ನಿಧನಕ್ಕೆ ಅತೀವ ಶೋಕ ವ್ಯಕ್ತಪಡಿಸಿದ ಕಾಮ್ರೇಡ್ ಜ್ಯೋತಿಬಸು ಪಕ್ಷದ ಸಂಘಟನೆಯನ್ನು ಬಲಪಡಿಸುವುದರಲ್ಲಿ ಅವರ ಕಾಣಿಕೆಯನ್ನು ಕೇಂದ್ರ ನೆನಪಿಸಿಕೊಂಡರು. ಸರಕಾರವು ಪಕ್ಷವನ್ನು ಬ್ಯಾನ್ ಮಾಡಿ ಭೂಗತರಾಗಿದ್ದ ಸಂದರ್ಭದಲ್ಲೂ, ಪುನಃ ಬ್ಯಾನ್ ಹಿಂತೆಗೆದುಕೊಂಡ ನಂತರದ ಪರಿಸ್ಥಿತಿಯಲ್ಲೂ ಪ್ರಮೋದ್ ದಾಸ್‌ಗುಪ್ತ, ಸರೋಜ್ ಮುಖರ್ಜಿ, ಶೈಲೇನ್ ದಾಸ್‌ಗುಪ್ತಾ ಮತ್ತು ಜ್ಯೋತಿಬಸು ಒಂದಾಗಿ ಕೆಲಸ ಮಾಡಿ ಪಕ್ಷವನ್ನು ಬೆಳೆಸಿದ ಅನುಭವವನ್ನು ವಿವರಿಸಿದರು.

1998 ರಲ್ಲಿ ಶೈಲೇನ್ ಅವರ ಅನಾರೋಗ್ಯದಿಂದ ಬಂಗಾಳದರಾಜ್ಯ ಕಾರ್ಯದರ್ಶಿ ಸ್ಥಾನವನ್ನು ವಹಿಸಿಕೊಂಡ ಕಾಂ. ಅನಿಲ್ ಬಿಸ್ವಾಸ್ 'ತನ್ನ ಕಮ್ಯುನಿಸ್ಟ್ ಜೀವನದ ಹೆಚ್ಚಿನೆಲ್ಲ ಸಮಯದ ರಕ್ಷಕ ಮತ್ತು ಶಿಕ್ಷಕ ಎಂದು ದಾಸ್ ಗುಪ್ತ ಅವರನ್ನು ಬಣ್ಣಿಸಿದರು. ಪ್ರಜಾಪ್ರಭುತ್ವ ಕೇಂದ್ರವಾದಲ್ಲಿ ಅತೀವ ನಂಬಿಕೆ ಇಟ್ಟುಕೊಂಡಿದ್ದ ಶೈಲೇನ್, ಶಿಥಿಲಗೊಳ್ಳುತ್ತಿರುವ ಆರೋಗ್ಯದ ನಡುವೆಯೂ ಪಕ್ಷಕ್ಕಾಗಿ, ಅದರಲ್ಲೂ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅವರು ವಹಿಸಿದ ಜವಾಬ್ದಾರಿಯನ್ನು ನೆನಪಿಸಿಕೊಂಡರು.

ಸಿಪಿಐ ಕಾರ್ಯದರ್ಶಿ ಎ.ಬಿ.ಬರ್ಧನ್, ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಬಿಮನ್ ಬೋಸ್, ಬಂಗಾಳದ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ, ಇತರೆ ರಾಜಕೀಯ ಪಕ್ಷದ ಮುಖಂಡರು ತಮ್ಮ ಶ್ರದ್ಧಾಂಜಲಿಯನ್ನು ಸಲ್ಲಿಸಿದರು.

ಸಿಪಿಐ(ಎಂ) ಪೊಲಿಟ್‌ಬ್ಯೂರೊ ತನ್ನ ಅತೀವ ಶೋಕವನ್ನು ವ್ಯಕ್ತಪಡಿಸಿದುದು ಮಾತ್ರವಲ್ಲದೆ, ಅಂತಿಮ ಯಾತ್ರೆಯಲ್ಲಿ ಭಾಗವಹಿಸಲು ಎಸ್.ರಾಮಚಂದ್ರಪಿಳ್ಳೈ, ಪ್ರಕಾಶ್ ಕಾರಟ್, ಸೀತಾರಾಂಯೆಚೂರಿ, ಪಿ.ರಾಮಚಂದ್ರನ್ ಅವರನ್ನೊಳಗೊಂಡ ನಿಯೋಗವನ್ನು ಕಳಿಸಿತು.

ಬೆಂಗಳೂರಿನಲ್ಲಿ ಶ್ರದ್ಧಾಂಜಲಿ ಸಭೆ

ಶೈಲೇನ್ ದಾಸ್‌ಗುಪ್ತ ಅವರ ನಿಧನದ ಸುದ್ದಿಯನ್ನು ತಿಳಿಯುತ್ತಲೇ, ಪಕ್ಷದ ರಾಜ್ಯ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯ ಸೂರ್ಯನಾರಾಯಣ ರಾವ್ ರಾಜ್ಯ ಸಮಿತಿಯ ಪರವಾಗಿ, ಪಶ್ಚಿಮ ಬಂಗಾಳದ ರಾಜ್ಯ ಕಾರ್ಯದರ್ಶಿ ಅನಿಲ್ ಬಿಸ್ವಾಸ್ ಅವರಿಗೆ ಶೋಕ ಸಂದೇಶವನ್ನು ಕಳಿಸಿದರು. ರಾಜ್ಯ ಸಮಿತಿ ಕಛೇರಿಯ ಪಕ್ಷದ ಬಾವುಟವನ್ನು ಅರ್ಧಕ್ಕೆ ಇಳಿಸಲಾಗಿದ್ದು, ಮಧ್ಯಾಹ್ನ ಶ್ರದ್ಧಾಂಜಲಿ ಸಭೆ ನಡೆಯಿತು. ಸಭೆಯಲ್ಲಿ ಸೂರ್ಯನಾರಾಯಣ ರಾವ್, ಜಿ.ಸಿ.ಬಯ್ಯಾರೆಡ್ಡಿ, ಎಸ್.ವೈ.ಗುರುಶಾಂತ್ ಮತ್ತಿತರರು ಭಾಗವಹಿಸಿದ್ದರು.

ಗುಲ್ಬರ್ಗಾದಲ್ಲೂ ಶ್ರದ್ಧಾಂಜಲಿ ಸಭೆ ನಡೆದ ವರದಿಯಾಗಿದ್ದು ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ, ಜಿ.ಎನ್.ನಾಗರಾಜ್ ಭಾಗವಹಿಸಿದ್ದರು.

ಸುರ್ಜಿತ್ ಕಂಬನಿ

ತನ್ನ ಅನಾರೋಗ್ಯದ ನಿಮಿತ್ತ ಅಂತಿಮ ಯಾತ್ರೆಯಲ್ಲಿ ಭಾಗವಹಿಸಲಾಗದ ಪಕ್ಷದ ಅಖಿಲ ಭಾರತ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಪಶ್ಚಿಮ ಬಂಗಾಳದ ಪಕ್ಷದ ಕಾರ್ಯದರ್ಶಿ ಅನಿಲ್ ಬಿಸ್ವಾಸ್ ಅವರಿಗೆ ಶ್ರದ್ಧಾಂಜಲಿ ಸಂದೇಶವನ್ನು ಕಳಿಸಿದ್ದರು.

ಶೈಲೇನ್ ದಾಸ್ ಗುಪ್ತ ನಿಧನದಿಂದಾಗಿ, ಪಕ್ಷ ಮತ್ತು ಎಡ ಚಳುವಳಿಯು ಉತ್ತಮ ಸಂಘಟಕ ಮತ್ತು ತ್ಯಾಗಮಯಿ ಮುಖಂಡನೊಬ್ಬನನ್ನು ಕಳಕೊಂಡಂತಾಯಿತು. ಎಡರಂಗದ ಅಧ್ಯಕ್ಷರಾಗಿದ್ದು, ಹಿಂದೆ ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿದ್ದ ಬಂಗಾಳದ ಪಕ್ಷಕ್ಕಂತೂ ಅತಿದೊಡ್ಡ ನಷ್ಟವಾಗಿದೆ ಎಂದು ಬಣ್ಣಿಸಿದ ಸುರ್ಜಿತ್ 1966 ರಲ್ಲಿ ಕೇಂದ್ರ ಸಮಿತಿ ಕಛೇರಿಯು ಕಲ್ಕತ್ತದ ಲೇಕ್ ಪ್ಲೇಸ್ ಎಂಬಲ್ಲಿ ಇದ್ದಾಗ ದಾಸ್ ಗುಪ್ತ ವ್ಯವಸ್ಥಿತವಾಗಿ ಕೆಲಸ ನಡೆಸುತ್ತಿದ್ದ ರೀತಿಯನ್ನು ನೆನಪಿಸಿಕೊಂಡರು.

ಅವರ ಪ್ರಾಮಾಣಿಕತೆ, ಸೈದ್ಧಾಂತಿಕ ನಿಲುಮೆ ಮತ್ತು ಪಕ್ಷಕ್ಕಾಗಿ ಸಂಪೂರ್ಣವಾಗಿ ತೊಡಗಿಸಿಕೊಂಡ ರೀತಿಯಿಂದಾಗಿ, ಪಕ್ಷದ ಯಾವುದೇ ಪ್ರಮುಖ ಜವಾಬ್ದಾರಿಗಳನ್ನು ಸುಲಭವಾಗಿ ನಿಭಾಯಿಸಲು ಸಾಧ್ಯವಾಯಿತು ಎಂದು ಹೇಳಿದ ಸುರ್ಜಿತ್, ದಾಸ್ ಗುಪ್ತ ಅವರ ಪತ್ನಿ ಮತ್ತು ಕುಟುಂಬದ ಸದಸ್ಯರಿಗೆ ತುಂಬು ಹೃದಯದ ಶ್ರದ್ಧಾಂಜಲಿ ಕೋರಿದರು.

ಬೆಂಗಳೂರಿಗೆ ಬಂದಾಗ


ಹತ್ತು ವರ್ಷಗಳ ಹಿಂದೆ ಶೈಲೇನ್ ದಾಸ್ ಗುಪ್ತಾ ಬೆಂಗಳೂರಿಗೆ ಬಂದಿದ್ದರು. ಪಕ್ಷದ ಕೇಂದ್ರ ಸಮಿತಿ ಮತ್ತು ಪೊಲಿಟ್‌ಬ್ಯೂರೋ ಸಭೆಗಳಲ್ಲಿ ಭಾಗವಹಿಸಲು. ಆ ಸಂದರ್ಭದಲ್ಲೇ ಅವರ ಆರೋಗ್ಯ ಚೆನ್ನಾಗಿರಲಿಲ್ಲ. ಒಂದೊಂದು ಹೊತ್ತಿನಲ್ಲೂ 10-12 ಔಷಧಿ ಮಾತ್ರೆಗಳನ್ನು ತೆಗೆದುಕೊಳ್ಳುತ್ತಿದ್ದರು. ಆದರೂ ಅವರ ಉತ್ಸಾಹಕ್ಕೆ ಕೊರತೆ ಇರಲಿಲ್ಲ.

ಹಿರಿಯ ಕ್ರಾಂತಿಕಾರಿ ಚೇತನಗಳು ಇನ್ನಿಲ್ಲ.

ಬೆಳಗಿನ ಹೊತ್ತು ಪಕ್ಷದ ಸಭೆಗೆ ತಯಾರಿ, ಮಧ್ಯಾಹ್ನ ಊಟದ ವೇಳೆ ಸ್ವಲ್ಪ ಹೊತ್ತು ವಿಶ್ರಾಮ, ಮತ್ತೆ ಸಭೆ. ಸಂಜೆ ಸ್ವಯಂಸೇವಕರೊಂದಿಗೆ ಮಾತನಾಡಲು ಮರೆಯುತ್ತಿರಲಿಲ್ಲ. ಕರ್ನಾಟಕದಲ್ಲಿ ಪಕ್ಷದ ಬೆಳವಣಿಗೆ, ಸಾಮೂಹಿಕ ಸಂಘಟನೆಗಳ ಚಟುವಟಿಕೆ, ಚಳುವಳಿ, ತನ್ನ ವೈಯಕ್ತಿಕ ಅನುಭವ, ಬಂಗಾಳದ ಚಳುವಳಿ ಬಗ್ಗೆ ಹೇಳುತ್ತಿದ್ದರು. ಬಂಗಾಳದ ಜನ ಚಳುವಳಿ ಮಾಡುವುದರ ಮೂಲಕ ಎಡರಂಗ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ಮುಂದುವರಿದಿದೆ. ದೇಶದ ಉಳಿದ ಭಾಗಗಳಲ್ಲಿ ಚಳುವಳಿ, ಪಕ್ಷ ಬೆಳೆಯದಿದ್ದರೆ ತುಂಬಾ ಕಷ್ಟವಾಗುತ್ತದೆ ಎಂದು ನೆನಪಿಸುತ್ತಿದ್ದರು.

ಸಣ್ಣ ಪಕ್ಷವಾಗಿದ್ದರೂ ವ್ಯವಸ್ಥಿತ ರೀತಿಯಲ್ಲಿ ಕೇಂದ್ರ ಸಮಿತಿ ಸಭೆ, ಬಹಿರಂಗ ಸಭೆಗಳನ್ನು ನಡೆಸಿದುದನ್ನು ಕಂಡು ಕರ್ನಾಟಕದಲ್ಲೂ ಪಕ್ಷದ ಬೆಳವಣಿಗೆಗೆ ಉತ್ತಮ ಅವಕಾಶಗಳಿವೆ ಎಂದು ಹೇಳಲು ಕಾಂ. ದಾಸ್ ಗುಪ್ತ ಮರೆಯಲಿಲ್ಲ. ಗುಪ್ತಾರವರು ಲಾಲ್‌ಬಾಗ್‌ನ ತೋಟಗಳನ್ನು ಸಂದರ್ಶಿಸಿದರು. ಅವರು ಪ್ರತಿಯೊಂದು ಮರಗಳನ್ನು ಸ್ಪಷ್ಟವಾಗಿ ಅದರ ವೈಜ್ಞಾನಿಕ ಹೆಸರಿನಿಂದ ಗುರುತಿಸುತ್ತಿದ್ದರು. ಅವರೊಬ್ಬ ಪರಿಸರವಾದಿ ಸಹ. ○

ಕಾಂ. ನಿರೇನ್ ಘೋಷ್ ನಿಧನ



ಸಿಪಿಐ(ಎಂ) ಪಶ್ಚಿಮ ಬಂಗಾಳ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಹಾಗೂ ಕೇಂದ್ರ ಸಮಿತಿ ಸದಸ್ಯರೂ ಆದ ಕಾಮ್ರೇಡ್ ನಿರೇನ್ ಘೋಷ್‌ರವರು ಜುಲೈ 1 ರಂದು ಕಲ್ಕತ್ತದಲ್ಲಿ ನಿಧನರಾದರು. ಅವರಿಗೆ 87 ವರ್ಷವಾಗಿತ್ತು.

ವಿದ್ಯಾರ್ಥಿ ದಿಸೆಯಲ್ಲಿಯೇ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ಭಾಗವಹಿಸಿದ ನಿರೇನ್ ಘೋಷ್‌ರವರು 1937 ರಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು.


ಕಳೆದ 6 ದಶಕಗಳ ಕಾಲ ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾಗಿ, ಸೆಣಬು ಕಾರ್ಮಿಕರನ್ನು ಸಂಘಟಿಸುತ್ತಾ, ಕಲ್ಕತ್ತ ಸುತ್ತಮುತ್ತ ಮತ್ತು 24 ಪರಗಣ ಜಿಲ್ಲೆಯಲ್ಲಿ ಪಕ್ಷವನ್ನು ಬಲಪಡಿಸಲು ಶ್ರಮಿಸಿದರು ಮಾತ್ರವಲ್ಲ ಘೋಷ್‌ರವರು ಪಶ್ಚಿಮ ಬಂಗಾಳ ಮತ್ತು ದೇಶದ ಕಾರ್ಮಿಕವರ್ಗದ ಹಿತಕ್ಕಾಗಿ ಕೆಲಸ ಮಾಡಿದರು. ಇವರು ಎಐಟಿಯುಸಿ ಯ ಹೆಸರಾಂತ ಮುಖಂಡರಾಗಿದ್ದರು. ಅಲ್ಲದೆ ಸಿಐಟಿಯು ನ ಸಂಸ್ಥಾಪಕ ಮುಖಂಡರೂ ಆಗಿದ್ದರು. ಅಂತಿಮ ದಿನದವರೆಗೂ ಅವರು ಸಿಐಟಿಯು ಪ.ಬಂಗಾಳ ರಾಜ್ಯ ಸಮಿತಿ ಅಧ್ಯಕ್ಷರಾಗಿದ್ದರು.

ಪರಿಷ್ಕರಣವಾದದ ವಿರುದ್ಧದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ ಘೋಷ್‌ರವರು ಸಿಪಿಐ(ಂ) ರಚನೆಯಾಗುವ ಸಂದರ್ಭದಲ್ಲಿ ದೆಹಲಿಯಲ್ಲಿದ್ದುಕೊಂಡು ಮುಖಂಡತ್ವ ವಹಿಸಿದ್ದರು.

ಕಾರ್ಮಿಕ ವರ್ಗದ ಹಕ್ಕುಗಳ ರಕ್ಷಣೆಗಾಗಿ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಮತ್ತು ಸಂಸತ್ತಿನಲ್ಲಿ ಧ್ವನಿ ಎತ್ತಿದವರು ಘೋಷ್

ಘೋಷರವರು ಅವಿವಾಹಿತರಾಗಿದ್ದುಕೊಂಡೆ ತಮ್ಮ ಇಡೀ ಜೀವನವನ್ನು ಕಮ್ಯುನಿಸ್ಟ್ ಚಳುವಳಿಗೆ ಅರ್ಪಿಸಿ, ಮಾರ್ಕ್ಸ್‌ವಾದ-ಲೆನಿನ್‌ವಾದದ ಅನುಷ್ಠಾನಕ್ಕಾಗಿ ದುಡಿದರು.

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹಾಗೂ ಕರ್ನಾಟಕ ರಾಜ್ಯಸಮಿತಿಗಳು ನಿರೇನ್ ಘೋಷ್‌ರವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿ ಅವರ ಕುಟುಂಬಕ್ಕೆ ಮತ್ತು ಚಳುವಳಿಯಲ್ಲಿರುವ ಅವರ ಸಹೋದ್ಯೋಗಿಗಳಿಗೆ ... ಸಂದೇಶ ಕಳಿಸಿವೆ.



ಅನ್ನದಗುಳಿಗೆ ಸಕಾ

ರೇಷನ್‌ಗೆ ನೀಡುತ್ತಿದ್ದ ಸಬ್ಸಿಡಿಯನ್ನು ಸರ್ಕಾರ ನಿಲ್ಲಿಸಿದ್ದರಿಂದ ಬೆಲೆಗಳು ಹೆಚ್ಚಿದವು ರೇಷನ್‌ಗೆ ನೀಡುತ್ತಿದ್ದ ... ಕೊಳೆಯತೊಡಗಿದವು. ವಿದೇಶಕ್ಕೆ ಕಳಿಸಿದರೆ ಅಲ್ಲಿ ತಿರಸ್ಕಾರಕ್ಕೆ ಒಳಗಾಯಿತು. ... ತೋಡಿದಬಾವಿಗೆ ಬಿದ್ದಿದೆ ವಾಜಪೇಯಿ ಸರ್ಕಾರ. ಯಾರೂ ಮೂಸದ ಧಾನ್ಯಗ ... ಯೋಜನೆಯನ್ನು ಘೋಷಿಸಿದ್ದಾರೆ. ಈ ಸನ್ನಿವೇಶವನ್ನೇ ಬಳಸಿ ಕಾರ್ಗಿಲ್‌ನಂತಹ ... ಅನ್ನದಗುಳು ಕಿತ್ತುಕೊಳ್ಳುವ ಅಮಾನುಷ ಆಟಗಳನ್ನು ಬಯಲಿಗೆಳೆದ ಲೇಖನಗಳ...

ಭೂಕಂಪದ ತತ್ತರದಿಂದ ಇನ್ನೂ ಚೇತರಿಸಿಕೊಂಡಿರದ ಗುಜರಾತ್‌ನ ಬುಜ್‌ನಲ್ಲಿ ನಿಂತು ಪ್ರಧಾನಿ ವಾಜಪೇಯಿ ಹೇಳಿದ ಮಾತು "ನಮ್ಮಲ್ಲಿ ಆಹಾರಧಾನ್ಯಗಳ ಉತ್ಪಾದನೆ ಅಧಿಕವಾಗಿಬಿಟ್ಟಿದೆ. ಅದನ್ನು ಎಲ್ಲಿಡುವುದು? ಹೇಗಿಡುವುದು? ಆದ್ದರಿಂದ ಅವುಗಳನ್ನು ವಿದೇಶಕ್ಕೆ ರಫ್ತು ಮಾಡಲಾಗುವುದು ಎಂದು. ಬೇಕಾದವರು ಅಲ್ಲಿಂದಲೇ ತರಿಸಿಕೊಳ್ಳಲಿ" ಎಂಬ ಉದಾಸೀನ

ಫ್ರಾನ್ಸ್‌ನ ಕುಖ್ಯಾತ ರಾಣಿ ಮೇರಿ ಆಂಟನಿಯೇಟ್ ಹೇಳಿದಂತೆ "ಜನಕ್ಕೆ ತಿನ್ನಲು ರೊಟ್ಟಿ(ಬ್ರೆಡ್) ಇಲ್ಲದಿದ್ದರೇನಂತೆ ಅವರು ಕೇಕ್ ತಿನ್ನಲಿ" ಎಂದು. ಇಲ್ಲಿ ಭಾರತದಲ್ಲಿ ಕೋಟಿ ಕೋಟಿ ಜನ ಹಸಿವಿನಿಂದ ಹಾಹಾಕಾರಗಳಿಂದ, ಹೊಟ್ಟೆಗೆ ಒಂದೊತ್ತು ಗಂಜಿ ಇಲ್ಲದೇ ರೋಗ ರುಜಿನಗಳಿಂದ, ಸಾಯುತ್ತಿದ್ದಾರೆ. ರೈತ ಬೆಳೆದ ಬೆಳೆಗೆ ಬೆಲೆ ಇಲ್ಲದೇ, ಸಾಲ ತೀರಿಸಲಾಗದೇ ಆತ್ಮಹತ್ಯೆಗೀಡಾಗುತ್ತಿದ್ದಾನೆ. ವಾಜಪೇಯಿ ಹೇಳುತ್ತಾರೆ ಅಧಿಕ ಉತ್ಪಾದನೆ ಆಗಿದೆ ಎಂದು. ಜನರ, ದೇಶದ ನಿಜ ಪರಿಸ್ಥಿತಿಯನ್ನು ಅರಿತುಕೊಳ್ಳದ ಅವರ **ಮನೋಭಾವ ಫ್ಯಾಸಿಸ್ಟ್** ಸ್ವರೂಪದ್ದು. ಇನ್ನೊಂದೆಡೆ ಪಡಿತರ ವಸ್ತುಗಳ ಬೆಲೆ ಮಾತ್ರ ಹೆಚ್ಚಿಸಿರುವುದಲ್ಲ, ಧಾನ್ಯ ಪೂರೈಕೆಯನ್ನೇ ಕಡಿತ ಮಾಡಿರುವುದು.

ಪಡಿತರ ಅಂಗಡಿಯಲ್ಲಿ ದಿನಸಿಕೊಳ್ಳುವವರ ಸಂಖ್ಯೆ ಕಡಿಮೆಯಾಗುತ್ತಿದೆ ಏಕೆ? ಬಡ-ಮಧ್ಯಮ ವರ್ಗದ ಜನರು ಪಡಿತರ ಚೀಟಿಯಲ್ಲಿ ದಿನಸಿ ಕೊಳ್ಳುವುದರ ಮೇಲೆ ಅವಲಂಬಿತವಾಗಿದ್ದಾರೆ. ಕಾರಣ ಸರ್ಕಾರ ಪಡಿತರ ವ್ಯವಸ್ಥೆಯ ಮೂಲಕ ಸಬ್ಸಿಡಿ(ಸಹಾಯಧನ) ನೀಡುತ್ತಿದ್ದರಿಂದ, ಮಾರುಕಟ್ಟೆಯಲ್ಲಿ ಸಿಗುವ ಬೆಲೆಗಿಂತ ಕಡಿಮೆ ದರದಲ್ಲಿ ಪಡಿತರ ಅಂಗಡಿಯಲ್ಲಿ ದಿನಸಿ ಸಿಗುತ್ತಿತ್ತು. ಕೇಂದ್ರದ ಬಿಜೆಪಿ ಸರ್ಕಾರದ ಉದಾರೀಕರಣ-ಜಾಗತೀಕರಣ ನೀತಿಯ ಪರಿಣಾಮದಿಂದ ವಿಶ್ವ ವ್ಯಾಪಾರ ಸಂಸ್ಥೆ(WTO) ಅಣತಿಯಂತೆ ಪಡಿತರ ವ್ಯವಸ್ಥೆಯಲ್ಲಿ ವಿತರಿಸುತ್ತಿದ್ದ ದಿನಸಿಯ ಸಬ್ಸಿಡಿ ತೆಗೆದು ಹಾಕಿದೆ. ಇದರಿಂದ ಪಡಿತರ ವ್ಯವಸ್ಥೆ ಕುಸಿಯುತ್ತಿದ್ದು ಕಾಲಕ್ರಮೇಣ ಈ ಪದ್ಧತಿಯನ್ನೇ ನಾಶ ಮಾಡಲು ಸರ್ಕಾರ ಹವಣಿಸುತ್ತಿದೆ.

ರಾಜ್ಯದಲ್ಲಿ ರೇಷನ್ ಕಾರ್ಡ್‌ಗೆ ಅರ್ಹತೆ ಇರುವವರ ಸಂಖ್ಯೆ ಅಧಿಕವಾಗಿದೆ. ಸರ್ಕಾರ ಕೆಂಪುಕಾರ್ಡ್, ಹಸಿರುಕಾರ್ಡ್, ಹಳದಿಕಾರ್ಡ್ ಬಣ್ಣಗಳನ್ನು ಬದಲಿಸುತ್ತಾ ತರಾವರಿ ರೀತಿ ನೀತಿಗಳನ್ನು ಮಾಡುತ್ತಾ ಬಂದಿದೆ. ಸೀಮೆಎಣ್ಣೆ ವಿತರಣೆಯನ್ನು ಈ ಕಾರ್ಡ್‌ಗಳ ಮೂಲಕ ನೀಡುತ್ತಿದೆ. ಕೊರೆಯುವ ಚಳಿಯಲ್ಲಿ ಜನರು ಇಡೀ ರಾತ್ರಿ ಕ್ಯೂ ನಿಲ್ಲುವುದು ತಪ್ಪಿಲ್ಲ. ಸರ್ಕಾರ ಕೂಪನ್‌ಗಳನ್ನು ನೀಡಿ ಹೊಸ ರೀತಿಯಲ್ಲಿ ಸಮಸ್ಯೆ ಬಗೆಹರಿಸುತ್ತೇವೆಂದು ಹೇಳಿದ್ದರೂ ಸೀಮೆಎಣ್ಣೆ ವಿತರಣೆ ಬವಣೆ ಮಾತ್ರ ತಪ್ಪಿಲ್ಲ.

ಅವೈಜ್ಞಾನಿಕ ಬಡತನ ರೇಖೆ ಮಾನದಂಡ

ಸರ್ಕಾರ ಪಡಿತರ ವ್ಯವಸ್ಥೆಯಲ್ಲಿ ಬಡ ಜನರಿಗೆ ರೇಷನ್ ನೀಡಲು ಹಲವು ಮಾನದಂಡಗಳನ್ನು ಜಾರಿಗೆ ತಂದಿದೆ. ಬಡತನ ರೇಖೆಯ ಮೇಲಿನವರು(about poverty line-AOL), ಬಡತನ ರೇಖೆಯ ಕೆಳಗಿನವರು(Below Poverty Line-BPL). ಪಡಿತರ ಚೀಟಿ APL ನೀಲಿ ಬಣ್ಣದ ಕಾರ್ಡ್‌ನಲ್ಲಿ ರೂ. 12.25 ಅಕ್ಕಿ, ರೂ. 9.20 ಗೋಧಿ, BPL ಹಸಿರು ಕಾರ್ಡ್‌ಗೆ ಅಕ್ಕಿ 6.15 ರೂ. ನಂತೆ 16 ಕೆ.ಜಿ. ಕೊಡುತ್ತಾರೆ. ರೂ: 4.45 ರಂತೆ ಗೋಧಿ 4 ಕೆ.ಜಿ:ಕೊಡುತ್ತಾರೆ. ಸಕ್ಕರೆ 13.25 ರೂ. ಇದು ಸಾಮಾನ್ಯ ಮಾರುಕಟ್ಟೆ ದರದಲ್ಲಿದೆ. ಈ ಮೇಲಿನ ದಿನಸಿ ಉತ್ತಮವಾಗಿರದೆ ಕಳಪೆಯಾಗಿರುತ್ತದೆ.



ಬಡತನ ರೇಖೆ ಅಳೆಯುವ ಮಾನದಂಡ ಅವೈಜ್ಞಾನಿಕವಾಗಿದೆ. ಒಂದು ಹಳೆ ಸೈಕಲ್ ಇದ್ದರೆ, ಫ್ಯಾನ್ ಇದ್ದರೆ, ಮರಳು-ಸಿಮೆಂಟ್‌ನ ಗೋಡೆ ಇದ್ದರೆ ಇವರಾರು ಬಡವರಲ್ಲ. ಇವರು BPL ಗುಂಪಿಗೆ ಸೇರುವುದಿಲ್ಲ. ಇಂತಹ ಮಾನದಂಡದಿಂದ ದೇಶದಲ್ಲಿ ಬಡವರೇ ಹೆಚ್ಚಾಗಿಲ್ಲವೆಂದು ಅಭಿಪ್ರಾಯ ಬರುತ್ತದೆ. ಆದ್ದರಿಂದ ಶೇ 16 ರಿಂದ 18 ರಷ್ಟು ಮಾತ್ರ ರೇಷನ್ ಕಾರ್ಡ್ ಪಡೆದಿರುವ ಕಡುಬಡವರು ಇದ್ದಾರೆಂದು ಸರ್ಕಾರ ಹೇಳುತ್ತಿದೆ.


ಒಂದು ಅಧ್ಯಯನದ ಪ್ರಕಾರ 5 ಲಕ್ಷ ಜನರಿರುವ ಬಾಂಬೆಯ ಧಾರವಿ ಎಂಬ ದೊಡ್ಡ ಕೊಳಚೆ ಪ್ರದೇಶದಲ್ಲಿ ಇಂತಹ ಮಾನದಂಡದಂತೆ ರೇಷನ್‌ಗೆ ಅರ್ಹರಾದವರು ಕೇವಲ 151 ಕುಟುಂಬಗಳು ಮಾತ್ರ. ಹೇಗಿದೆ, ಬಡವರನ್ನು ನಿರ್ಮೂಲನ ಮಾಡುವ ಪರಿ. ದೇಶದ ಯುವ ವಯಸ್ಕರಲ್ಲಿ ಶೇ 48.5 ರಷ್ಟು ಜನ ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಇನ್ನು ಶೇ 20 ಜನ ಈ ಅಪಾಯಕ್ಕೆ ಈಡಾಗುವ ಭೀತಿಯಲ್ಲಿದ್ದಾರೆ.

ದೇಶದ ಜನತೆಯ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ

ಸ್ವತಂತ್ರ ನಂತರದಲ್ಲಿ ದೇಶದ ಜನರ ಆರ್ಥಿಕ ಸ್ಥಿತಿ ಉತ್ತಮವಾಗಿರುವುದಿಲ್ಲ, ದೇಶದ ಶ್ರೀಮಂತರ ಆಸ್ತಿಗಳು ಅವರ ವರಮಾನ ಜಾಸ್ತಿಯಾಗಿದೆಯಾದರೂ ಬಡ-ಮಧ್ಯಮ ವರ್ಗದ ಜನರ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ. ಆದರೆ ಸರ್ಕಾರ ಈ ಬಡ-ಮಧ್ಯಮ ವರ್ಗದ ಜನರ ಕತ್ತು ಹಿಸುಕುವ ಕ್ರಮಗಳನ್ನು ಜರುಗಿಸುತ್ತಿದೆ.

ಕೆಂಪು ಕಾರ್ಡಿಗೆ ನೀಡುವ ಪಡಿತರ ದಿನಸಿಗೂ ಮಾರುಕಟ್ಟೆಯಲ್ಲಿರುವ ರೇಷನ್‌ನ ಬೆಲೆಗೂ ಸಮಾನವಾಗಿದೆ. ಅಲ್ಲದೆ ನ್ಯಾಯಬೆಲೆ. ಅಂಗಡಿಯಲ್ಲಿ ಸಿಗುವ ವಸ್ತುಗಳು ಕಳಪೆಯಾಗಿದೆ. ಇದರಿಂದ ಬಡ ಮಧ್ಯಮ ವರ್ಗದ ಜನರು ಅನಿವಾರ್ಯವಾಗಿ ಪಡಿತರ ಅಂಗಡಿಗಳಲ್ಲಿ ದಿನಸಿ ಕೊಳ್ಳುವುದು ಕಡಿಮೆಯಾಗುತ್ತಿದೆ.


ದಿನೇ ದಿನೇ ಆಹಾರ ವಸ್ತುಗಳ ಬೆಲೆಗಳು ಏರುತ್ತಲೇ ಇವೆ. ಆದರೆ ಬಡವರ ಆದಾಯ ಹೆಚ್ಚುತ್ತಿಲ್ಲ. ಜನರಲ್ಲಿ ಕೊಳ್ಳುವ ಶಕ್ತಿ ಕಡಿಮೆಯಾಗುತ್ತಿದೆ. ಆದ್ದರಿಂದ ಅವರ ಗೋಳು ಹೆಚ್ಚಾಗುತ್ತಿದೆ. ಅವಶ್ಯವಿರುವ ಅನ್ನ ಬಟ್ಟೆಗಳನ್ನು ಕೊಳ್ಳುವುದು ಕಷ್ಟಕರವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಡಿಮೆ ದರದಲ್ಲಿ ಸಬ್ಸಿಡಿ ಮೂಲಕ ಪಡಿತರ ಅಂಗಡಿಗಳಲ್ಲಿ ಅವಶ್ಯಕ ದಿನಸಿಗಳನ್ನು ಪೂರೈಸುವ ಅವಶ್ಯಕತೆ ಇದೆ. ನ್ಯಾಯಬೆಲೆ ಅಂಗಡಿಗಳ ಮೂಲಕ ಆಹಾರ ವಿತರಣೆ ಮಾಡಬೇಕಾಗಿದೆ. ವಿಶ್ವಬ್ಯಾಂಕ್ ಐಎಂಎಫ್ ಗಳ ಒತ್ತಡಕ್ಕೆ ಮಣಿದು ದೇಶದ ಸಾರ್ವಜನಿಕ ವಿತರಣೆ ವ್ಯವಸ್ಥೆಯನ್ನೇ ತೆಗೆದುಹಾಕುವ ಪ್ರಯತ್ನ ಮಾಡುತ್ತಿದೆ ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ.



ತುತ್ತಿನ ಚೀಲ ತುಂಬಲೇ ಇಲ್ಲ.....

ಆಹಾರ ಉತ್ಪಾದನೆಯು ಹೆಚ್ಚಳವಿದ್ದರೂ ಅದು ಜನತೆಗೆ ತಲುಪುತ್ತಿಲ್ಲ

ಕೇಂದ್ರ ಸರ್ಕಾರದ ಗೋದಾಮುಗಳಲ್ಲಿ ಸುಮಾರು 450 ಲಕ್ಷ ಟನ್ ಆಹಾರ ಧಾನ್ಯಗಳು ತುಂಬಿ ತುಳುಕುತ್ತಿದ್ದರೂ ಅವುಗಳನ್ನು ಜನತೆಗೆ ಕಡಿಮೆ ದರದಲ್ಲಿ ವಿತರಿಸಲು ಸರ್ಕಾರಕ್ಕೆ ಮನಸ್ಸಿಲ್ಲ. ಬದಲಾಗಿ ಶೇ 15 ರಷ್ಟು ಸಬ್ಸಿಡಿ ನೀಡಿ ವಿದೇಶಗಳಿಗೆ ರಫ್ತು ಮಾಡಲು ನಿರ್ಧರಿಸಿತ್ತು. ನಮ್ಮ ಜನರಿಗೆ ಸಿಗುತ್ತಿರುವ ಬೆಲೆಗಿಂತಲೂ ಕಡಿಮೆ ದರದಲ್ಲಿ ರಫ್ತು ಮಾಡುವ ನಿರ್ಧಾರ ಅದು. ಇಲ್ಲಿ ಹಸಿವಿನಿಂದ ಕಂಗಾಲಾಗಿ ಸಾವನ್ನಪ್ಪಿದ್ದರೆ ಸರ್ಕಾರಕ್ಕೆ ಚಿಂತೆ ಇಲ್ಲ. ರಫ್ತು ಮಾಡುವ ತರಾತುರಿ. ವಿದೇಶಿ ವಿನಿಮಯದ ಗಳಿಕೆಯ ಆಸೆ. ಹೇಗಿದೆ ಸರ್ಕಾರದ ಕಾಳಜಿ.



ಬಡಜನರಿಗೆ ಸಬ್ಸಿಡಿ ಇಲ್ಲ - ಶ್ರೀಮಂತರಿಗೆ ಭಾರೀ ರಿಯಾಯಿತಿ

2001-2002 ನೇ ಸಾಲಿನ ಮುಂಗಡ ಪತ್ರದಲ್ಲಿ ಬಹುರಾಷ್ಟ್ರೀಯ ವಿದೇಶಿ ಕಂಪನಿಗಳಿಗೆ, ದೊಡ್ಡ ಬಂಡವಾಳಗಾರರಿಗೆ, ಶ್ರೀಮಂತರಿಗೆ ಹಿಂದೆಂದೂ ಕಾಣದಷ್ಟು ನೇರ ತೆರಿಗೆ ಕಡಿತ ಮಾಡಿ ಭಾರಿ ರಿಯಾಯಿತಿ ತೋರಿಸಿದೆ. ಆದರೆ ದೇಶದ ಜನತೆಗೆ ಬೇಕಾದ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ಏರಿಸಲಾಗಿದೆ. ಶ್ರೀಮಂತರ ಭೋಗದ ವಸ್ತುಗಳಾದ ಟಿ.ವಿ., ಮೊಬೈಲ್, ರೆಫ್ರಿಜರೇಟರ್, ಕಂಪ್ಯೂಟರ್‌ಗಳ ಬೆಲೆಗಳನ್ನು ಇಳಿಸಲಾಗಿದೆ. ಆಹಾರ ಬೆಳೆಗಳನ್ನು ಬೆಳೆಯುವ ರೈತರಿಗೆ ನ್ಯಾಯಬೆಲೆ ನಿಗದಿ ಮಾಡದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಯನ್ನು ಈ ಸರ್ಕಾರ ಉಂಟು ಮಾಡಿದೆ. ಆಹಾರಗಳನ್ನು ಕೊಂಡುಕೊಳ್ಳುವ ಸಾಮಾನ್ಯನು ದುಭಾರಿ ಬೆಲೆ ತೆತ್ತಬೇಕಾಗಿದೆ. ಮಧ್ಯವರ್ತಿಗಳು, ಬಂಡವಾಳ ದಾಸ್ತಾನುಗಾರರು ಈ ಎಲ್ಲಾ ಲಾಭಾಂಶವನ್ನು ನುಂಗು ಹಾಕುತ್ತಿದ್ದಾರೆ. ಬಡಜನರು ನ್ಯಾಯಬೆಲೆ(ಪಡಿತರ ಅಂಗಡಿ)ಯಲ್ಲಿ ಆಹಾರ ಖರೀದಿಸುವುದಕ್ಕೂ ಆಗದೇ ಇರುವಾಗ ನ್ಯಾಯಬೇಲೆ ಅಂಗಡಿಗಳನ್ನು ರದ್ದುಗೊಳಿಸುವ ಉನ್ನಾರ ಮಾಡುತ್ತಿದೆ.

ಅಭಿವೃದ್ಧಿ ಹೊಂದಿರುವ ದೇಶಗಳಲ್ಲೂ ಕೃಷಿಗೆ ಸಬ್ಸಿಡಿ!

ಕೇಂದ್ರದ ಎನ್‌ಡಿಎ ಸರ್ಕಾರ ಕೃಷಿಗೆ ನೀಡುತ್ತಿರುವ ಸಬ್ಸಿಡಿ-ಸಹಾಯಧನವನ್ನು ಕಡಿತ ಮಾಡುವ ನೀತಿಯನ್ನು ಅನುಸರಿಸುತ್ತಿದೆ. ಸಬ್ಸಿಡಿ ನೀಡುವುದು ದೇಶದ ಅಭಿವೃದ್ಧಿಗೆ ಅಡ್ಡಿಯಾಗುತ್ತದೆಂದು ಸರ್ಕಾರ ಹೇಳುತ್ತದೆ. ಆದರೆ ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಕೃಷಿ ಉತ್ಪನ್ನಗಳ ಮೇಲೆ ಹೆಚ್ಚಿನಾಂಶ ಸಬ್ಸಿಡಿ ನೀಡಲಾಗುತ್ತಿದೆ. ಜಪಾನ್ ಶೇ 75.5, ಯುರೋಪ್ ಶೇ 37, ಅಮೆರಿಕಾ ಶೇ 28, ಚೀನಾದಲ್ಲಿ ಶೇ 34 ಮತ್ತು ಪಾಕಿಸ್ತಾನದಲ್ಲಿ ಶೇ 26. ಆದರೆ ಭಾರತದಲ್ಲಿ ಶೇ 3 ರಷ್ಟು ಮಾತ್ರ. ಅಮೇರಿಕಾದಲ್ಲಿ ಕೃಷಿ ರಂಗ ಸರಾಸರಿ ತಲಾ 30655 ಡಾಲರ್ ಸಬ್ಸಿಡಿ ನೀಡಲಾಗುತ್ತಿದೆ. 1998 ರಲ್ಲಿ ಅಮೆರಿಕ ತನ್ನ ಕೃಷಿಕರಿಗೆ ಕೊಟ್ಟ ಸಬ್ಸಿಡಿ ಮೊತ್ತ 17.3 ಬಿಲಿಯ ಡಾಲರ್ (ರೂ. 4,20,000 ಕೋಟಿ)

ಈ ಸಬ್ಸಿಡಿ ದರಗಳನ್ನು ನೋಡಿದರೆ ಭಾರತದಂತಹ ಹಿಂದುಳಿದ ಅಭಿವೃದ್ಧಿಯತ್ತ ಸಾಗುತ್ತಿರುವ ದೇಶಕ್ಕೆ ಸಬ್ಸಿಡಿ ನೀಡುವುದು ತುಂಬಾ ಅಗತ್ಯ. ಕೇಂದ್ರದ ಬಿಜೆಪಿ ಸರ್ಕಾರ ಇದನ್ನು ಪರಿಶೀಲಿಸಬೇಕು. ಈಗಾಗಲೇ ಭಾರತದ ಕೃಷಿ ಉತ್ಪನ್ನ ಕುಸಿದಿದೆ. (0.9 ರಿಂದ 3.5)

...ರದ ಕನ್ನ

...ಕೋಟ್ಯಂತರ ಟನ್ ಧಾನ್ಯಗಳು ಗೋಡಾನಿನಲ್ಲಿ ...ಎಫ್, ವಿಶ್ವಬ್ಯಾಂಕ್ ಮೆಚ್ಚಿಸಲು ತಾನೇ ... ಕಡಿಮೆ ಮಾಡಿದ್ದೇವೆಂದು ಉದ್ಧಾರದ ...ಪನಿಗಳು ಲಾಭ ಹೊಡೆದವು. ಬಡವರ

ಗೋಪಾಲಕೃಷ್ಣ ಅರಳಹಳ್ಳಿ

ಕೇರಳ: ಮನೆ ಬಾಗಿಲಿಗೆ ಪಡಿತರ ಆಹಾರ!

ಕೇರಳದಲ್ಲಿ ಹಿಂದಿನ ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗದ ಸರ್ಕಾರ ಪಡಿತರ ವ್ಯವಸ್ಥೆಯನ್ನು ಜನರ ಮನೆ ಬಾಗಿಲಿಗೆ ಕೊಂಡೊಯ್ಯುವ ಸಾರ್ವಜನಿಕ ವಿತರಣಾ ಪದ್ಧತಿ (PDS) ಯನ್ನು ಜಾರಿಗೆ ತಂದು ಪ್ರಶಂಸೆಗೆ ಪಾತ್ರವಾಗಿದೆ. ಮೋಟಾರ್‌ವಾಹನಗಳ ಮೂಲಕ ಕಡಿಮೆ ದರದಲ್ಲಿ ಅಕ್ಕಿ, ಗೋಧಿ, ಸಕ್ಕರೆ ಇತ್ಯಾದಿ ವಸ್ತುಗಳನ್ನು ಒದಗಿಸುವ ಈ ಪ್ರಗತಿಪರ ಕಾರ್ಯಯೋಜನೆ ಇಡೀ ದೇಶವೇ ಮೆಚ್ಚುವಂತೆ ಮಾಡಿತು.

ಆದರೆ ಕರ್ನಾಟಕದ ಪಡಿತರ ಅಂಗಡಿಗಳಲ್ಲಿ ಜನ ತಲೆ ಹಾಕದಂತೆ ಮಾಡುತ್ತಿದೆ ಸರ್ಕಾರ. ಅಲ್ಪಸ್ವಲ್ಪ ನೀಡುತ್ತಿದ್ದ ದಿನಸಿಗಳು ದುಬಾರಿಯಾಗಿವೆ.

ದೇಶದ ಆಹಾರ ಉತ್ಪಾದನೆ - ಒಂದು ಪಕ್ಷಿನೋಟ

ಭಾರತದ ಈಶಾನ್ಯ ರಾಜ್ಯಗಳಲ್ಲಿ ಇತರೆ ರಾಜ್ಯಗಲಿಗೆ ಹೋಲಿಸಿದರೆ 1960 ರ ನಂತರ ಹಸಿರುಕ್ರಾಂತಿ ಬಹಳ ಫಲಕಾರಿಯಾಗಿ ಜಾರಿಯಾಗಿದೆ. ಇದರಿಂದ ಆಹಾರ ಧಾನ್ಯಗಳು ಹೆಚ್ಚಾಗಿವೆ. ಒಂದು ದಶಮಾನದಿಂದ ಬೇರೆ ಪ್ರದೇಶಗಳಲ್ಲಿ ಬೇರೆಯಾದ ತಂತ್ರವನ್ನು ನಾವು ಭಾರತದಲ್ಲಿ ರೂಪಿಸಲು 1960-61 ಹಾಗೂ 1987-88 ರಲ್ಲಿ ಪ್ರಯತ್ನಿದ್ದೇವೆ.

60 ರ ಪೂರ್ವ ಮತ್ತು 80 ರ ಮಧ್ಯೆ ಈ ನಡುವೆ ಈ ಪ್ರದೇಶಗಳಲ್ಲಿನ ಒಟ್ಟು ಆಹಾರದಲ್ಲಿನ ಉತ್ಪಾದನೆ ಶೇ 82 ಕ್ಕೆ ಏರಿದೆ. 1959-60 ರಿಂದ 1961-62 (ಈ ಮೂರು ವರ್ಷಗಳ ಸರಾಸರಿ) ಒಟ್ಟು ಆಹಾರ ಉತ್ಪಾದನೆಯ ಅರ್ಧಭಾಗ(ಶೇ 26

ಪಡಿತರ ವಿತರಣೆ



ರಷ್ಟು) ಈಶಾನ್ಯ ಮತ್ತು ಉತ್ತರ ಭಾರತದ ರಾಜ್ಯಗಳು ತಮ್ಮ ಭಾಗವನ್ನು 2/5 ಕ್ಕೆ 80 ರ ಮಧ್ಯದಲ್ಲಿ 83-84 ರಿಂದ 85-86 ಕ್ಕೆ ಹೆಚ್ಚಿಸಿಕೊಂಡಿದೆ. (ಶೇ 39.80 ರಷ್ಟು). ಭಾರತದ ಎಲ್ಲಾ ಇತರೇ ರಾಜ್ಯಗಳು ಗಣನೀಯವಾಗಿ ಹೆಚ್ಚಳ ಅಥವಾ ಇಳಿತವನ್ನು ತೋರಿದೆ. ಪೂರ್ವ ಭಾರತ ಶೇ 23.2 ರಿಂದ ಶೇ 20.2, ದಕ್ಷಿಣ ಭಾರತ ಶೇ 21.5 ರಿಂದ ಶೇ 17 ಮತ್ತು ಪೂರ್ವಮಧ್ಯ ಭಾರತ ಶೇ 29.1 ರಿಂದ ಶೇ 23.1. ಈ ಒಂದು ಅವಧಿಯಲ್ಲೇ ಇದರ ಜೊತೆಗೆ ಹೆಚ್ಚುವರಿಯಾಗಿ ಕಾಳುಗಳ ಉತ್ಪಾದನೆ 65 ಮಿಲಿಯನ್ ಟನ್‌ಗಳು, 35 ಮಿಲಿಯ ಟನ್‌ಗಳು ಅಥವಾ ಅದರಲ್ಲಿ ಅರ್ಧದಷ್ಟು ಉತ್ತರ ಭಾರತದಿಂದಲೇ ಬಂದಿದೆ.

ದೇಶದಲ್ಲಿ ಆಹಾರ

ಪುಟ 8 ಕ್ಕೆ

ಬಡವರ ಗೋಧಿ ಮತ್ತು ಲಾಭಲೂಟಿಯ ಕಾರ್ಗಿಲ್

ಹೇರಳವಾಗಿ ಸಂಗ್ರಹವಾಗಿರುವ ಆಹಾರಧಾನ್ಯಗಳನ್ನು ಜನಸಾಮಾನ್ಯರಿಗೆ ಕಡಿಮೆ ದರದಲ್ಲಿ ಪೂರೈಸಿ ಹಸಿವನ್ನು ಹಿಂಗಿಸಲು ಸರ್ಕಾರ ಸಿದ್ಧರಿಲ್ಲ. ಆದರೆ ಕಾರ್ಗಿಲ್‌ನಂತಹ ವಿದೇಶಿ ಕಂಪನಿಗೆ ಅಪಾರ ಲಾಭ ಲಪಟಾಯಿಸಲು ಪೂರ್ಣ ಅವಕಾಶ ಕಲ್ಪಿಸಿದೆ. ಈ ವ್ಯವಹಾರದ ಹೂರಣ ಬಿಡಿಸಿಟ್ಟ ಲೇಖನವಿದು.

ಹೊಟ್ಟೆಗೆ ಒಪ್ಪೊತ್ತಿನ ಕೂಳೂ ದಕ್ಕದ ಕೋಟ್ಯಾಂತರ ನಮ್ಮ ಜನರಿದ್ದಾರೆ. ಅಪಾರ ಪ್ರಮಾಣದ ಆಹಾರಧಾನ್ಯದ ದಾಸ್ತಾನು ಭಾರತ ಆಹಾರ ನಿಗಮ(FCI) ನ ಉಗ್ರಾಣಗಳಲ್ಲಿದೆ. ಶೇಖರಿಸಲು ಸಾಧ್ಯವಾಗದೆ ಲಕ್ಷಗಟ್ಟಲೆ ಟನ್ನುಗಳಷ್ಟು ಆಹಾರ ಧಾನ್ಯವನ್ನು ಎಲ್ಲೆಂದರಲ್ಲಿ ಹರಡಲಾಗಿದೆ. ಹುಳಹುಪ್ಪಟೆಗಳು, ಇಲಿ ಹೆಗ್ಗಣಗಳಿಗೆ ಸುಗ್ರಾಸ. ತಿನ್ನಲು ಗತಿಯಿಲ್ಲದ ಜನ ಒಂದೆಡೆ, ಹಾಳು ಸುರಿಯುತ್ತಿರುವ ಆಹಾರ ಧಾನ್ಯ ಇನ್ನೊಂದೆಡೆ. ಜಾಗತೀಕರಣದ ವ್ಯಾಧಿಗೆ ಒಳಗಾಗಿರುವ ಭವ್ಯ ಭಾರತದ ಹಲವು ವಿಪರ್ಯಾಸಗಳಲ್ಲಿ ಇದೂ ಒಂದು.

ಅವರಿಗೆ ವಿದೇಶೀ ವ್ಯಾಮೋಹ...

ನಮ್ಮ ದೇಶದ ಶ್ರೀಮಂತರಿಗೆ ವಿಪರೀತ ವಿದೇಶೀ ವ್ಯಾಮೋಹ. ಹಲ್ಲುಜ್ಜುವ ಬ್ರಶ್ಶು, ಮೈ ತಿಕ್ಕುವ ಸಾಬೂನಿನಿಂದ ಹಿಡಿದು ನಡೆದಾಡುವ ಬೂಟು, ಓಡಾಡುವ ಕಾರುಗಳವರೆಗೆ ಅವರಿಗೆ ವಿದೇಶೀ ಮಾಲುಗಳೇ ಬೇಕು. ವಿದೇಶಗಳಿಂದ ಬಂದ ಅಂತಹ ವಸ್ತುಗಳಿಗೆ ನಮ್ಮ ದೇಶದಲ್ಲಿ ಕೊರತೆಯೇ ಇಲ್ಲ. ದಂಡಿಯಾಗಿಯೇ ಅವು ಲಭ್ಯ. ಅವುಗಳ ಅತಿ ದುಬಾರಿ ಬೆಲೆ ಇವರ ಕೊಳ್ಳುವಿಕೆಗೆ ಅಡ್ಡಿ ಬರುವುದಿಲ್ಲ. ದಿನನಿತ್ಯ ಲೂಟಿ ಹೊಡೆಯುತ್ತಿರುವ ಸಂಪತ್ತು ಇವರ ಬಳಿ ಹೇರಳವಾಗಿದೆಯಲ್ಲ!

ಒಂದು ಸಣ್ಣ ಸಮಸ್ಯೆ? ಡಾಲರ್ ಡಾಲರ್....

ಆದರೆ ಇದರಲ್ಲಿ ಒಂದು ಸಣ್ಣ ಸಮಸ್ಯೆಯಿದೆ. ಅಂತಹ ಭೋಗವಸ್ತುಗಳನ್ನು ಹೊರದೇಶದಿಂದ ಆಮದು ಮಾಡಿಕೊಳ್ಳಲು ಡಾಲರುಗಳು ಬೇಕು. ಡಾಲರುಗಳು ಸಿಗಬೇಕಾದರೆ ನಮ್ಮ ದೇಶದ ಸರಕುಗಳು ವಿದೇಶಗಳಿಗೆ ರಫ್ತಾಗಬೇಕು. ರಫ್ತು ಮಾಡಲು ನಮ್ಮ ದೇಶವೇನೋ ಸಿದ್ಧವಿದೆ. ಆದರೆ ಕೊಳ್ಳುವವರು ಬೇಕಲ್ಲ! ತೀವ್ರ ಸ್ಪರ್ಧೆ ಮತ್ತು ಶ್ರೀಮಂತ ಬಂಡವಾಳಶಾಹಿ ದೇಶಗಳ ಇಬ್ಬಂದಿತನದಿಂದಾಗಿ, ನಮ್ಮಂತಹ ಬಡರಾಷ್ಟ್ರಗಳ ಉತ್ಪನ್ನಗಳ ಬೆಲೆ ಅಂತರ್‌ರಾಷ್ಟ್ರೀಯವಾಗಿ ಕುಸಿದಿದೆ. ಇದರಿಂದಾಗಿ, ನಮ್ಮ ಸರಕನ್ನು ಕೇಳುವವರೇ ಇಲ್ಲವಾಗಿದೆ..

ಏನೇ ಆಗಲಿ, ಇವರ ಶ್ರೀಮಂತ ಜೀವನಕ್ಕೆ ಕುಂದಂತೂ ಆಗಬಾರದು. ಅವರಿಗೆ ಬೇಕಾದ್ದನ್ನು ತರಿಸಿಕೊಳ್ಳಲೇಬೇಕು. ಇನ್ನು ಡಾಲರುಗಳ ಪ್ರಶ್ನೆ. ಅದಕ್ಕೇನು, ಹೇಗಿದ್ದರೂ ನಮ್ಮಲ್ಲಿ ಹೇರಳವಾದ ಆಹಾರ ಧಾನ್ಯ ಸಂಗ್ರಹವಿದೆ. ನಮ್ಮ ಜನಕ್ಕಂತೂ ಅದನ್ನು ಉಣ್ಣುವ ಅವಕಾಶ ಇಲ್ಲ. ಸುಮ್ಮನೇ ಕೊಳೆಯುವ ಬದಲು, ಆಹಾರ ಧಾನ್ಯಗಳನ್ನು ವಿದೇಶಗಳಿಗೆ ರಫ್ತು ಮಾಡಿದರಾಯಿತು. ಡಾಲರುಗಳು ಸಿಗುತ್ತವೆ. ಇನ್ನು ಕುಸಿದ ಬೆಲೆಗಳ ಪ್ರಶ್ನೆ. ಅದಕ್ಕೂ ನಮ್ಮ ಘನ ಸರ್ಕಾರದ ಬಳಿ ಪರಿಹಾರವಿದೆ. ಅತೀ ಕಡಿಮೆ ಬೆಲೆಗೆ (ಅಂದರೆ ನಮ್ಮ ದೇಶದ ಅತ್ಯಂತ ಕಡು ಬಡವರಿಗಾಗಿ ನಿಗದಿಗೊಳಿಸಿರುವ ಪಡಿತರ ಧಾನ್ಯಗಳ ಬೆಲೆಗೆ) ಸುಲಭವಾಗಿ ರಫ್ತು ಮಾಡಬಹುದು.

ತುಂಬಿದ ಹಡಗುಗಳು ವಾಪಾಸು!

ನಮ್ಮನ್ನಾಳುವ ಅಪ್ಪಟ ದೇಶಭಕ್ತ ಪ್ರಭುಗಳು ಇಂತಹ ನಿರ್ಧಾರ ಕೈಗೊಂಡಿದ್ದೇ ತಡ, ಆಹಾರ ಧಾನ್ಯಗಳ ರಫ್ತು ಪ್ರಾರಂಭ. ದೂರದ ಇರಾಕ್ ದೇಶಕ್ಕೆ ಗೋಧಿ ರಫ್ತು ಮಾಡಲಾಯಿತು. ಆದರೆ ದುರಾದೃಷ್ಟ, ಕಳಪೆ ಗುಣಮಟ್ಟ ಎಂಬ ಕಾರಣದಿಂದ ಇರಾಕಿಗೆ ತೆರಳಿದ ಗೋಧಿ ತುಂಬಿದ ಹಡಗುಗಳು ವಾಪಸ್ಸಾಗಬೇಕಾಯಿತು. ಎದೆಗುಂದಲಿಲ್ಲ ನಮ್ಮ ಘನ ಸರ್ಕಾರ. ಬೇರೆ ದೇಶಗಳಿಗೆ ಮೊರೆಹೋದರು. ಕಡಿಮೆ ದರದಲ್ಲಿ ಸಿಗುವುದಾದರೆ ಯಾರಿಗೆ ತಾನೆ ಬೇಡ. ಫಿಲಿಪೈನ್ಸ್ ದೇಶ ನಮ್ಮ ಗೋಧಿ ಆಮದು ಮಾಡಿಕೊಳ್ಳಲು ಮುಂದೆ ಬಂತು. ಪ್ರತಿ 3-4 ತಿಂಗಳಿಗೊಮ್ಮೆ 25000 ಟನ್ನುಗಳಷ್ಟು ಗೋಧಿಯನ್ನು ಆಮದು ಮಾಡಿಕೊಳ್ಳುತ್ತದೆ. ಮೊದಲಿಗೆ ನಮ್ಮ ದೇಶದಿಂದ 20,000 ಟನ್ನುಗಳನ್ನು ಜುಲೈ 15 ರಿಂದ ಆಗಸ್ಟ್ 15 ರ ಅವಧಿಯ ಒಳಗೆ ಆಮದು ಮಾಡಿಕೊಳ್ಳಲು ಒಪ್ಪಿತು.



ಆದರೆ ರಫ್ತು ಮಾಡುವವರಾರು? ತನ್ನ ಗೋದಾಮುಗಳಲ್ಲಿ ಗೋಧಿ ಸಂಗ್ರಹಿಸಿರುವ ಭಾರತ ಆಹಾರ ನಿಗಮವೇ? ಅಲ್ಲ. ಅಥವಾ ಕೇಂದ್ರ ಸರ್ಕಾರದ ವ್ಯಾಪಾರ ನಿಗಮವೇ (State Trading Corporation) ಅಲ್ಲ, ಕೃಷಿ ಮಾರುಕಟ್ಟೆ ಸಹಕಾರೀ ಮಹಾಮಂಡಳಗಳೇ? ಅವೂ ಅಲ್ಲ. ಈ ಸಂಸ್ಥೆಗಳಿಗೆ ರಫ್ತು ಮಾಡಿರುವ ಅನುಭವ ಇದೆ. ಸಾಮರ್ಥ್ಯವೂ ಇದೆ. ಆದರೆ ಅವು ಸಾರ್ವಜನಿಕ ವಲಯದ ಸಂಸ್ಥೆಗಳಲ್ಲವೇ? ಆದ್ದರಿಂದ ಅವುಗಳಿಗೆ ಅವಕಾಶ ನೀಡಬಾರದು. ಹಾಗಾದರೆ ಮತ್ತಾರು?

ಲಾಭ - ಲಾಭ ಬೇಕು ಲಾಭ


ಕಾರ್ಗಿಲ್ ಕಂಪನಿಯ ಹೆಸರನ್ನು ಕೇಳಿದ್ದೀರಲ್ಲವೆ? ಈ ದೈತ್ಯ ಬಹುರಾಷ್ಟ್ರೀಯ ಕಂಪನಿ ನಮ್ಮ ದೇಶದಲ್ಲಿ ಕಾಲಿಟ್ಟ ದಿನದಿಂದಲೇ ಹತ್ತು ಹಲವು ವಿವಾದಗಳನ್ನು ಹುಟ್ಟು ಹಾಕುತ್ತಲಿದೆ. ನಮ್ಮ ರೈತರಿಗೆ

ಭರಣಿ

ನೆರವಾಗಲು ಮತ್ತು ಕೃಷಿ ಉತ್ಪಾದನೆ ಹೆಚ್ಚಿಸಲು ಅದು ನಮ್ಮಲ್ಲಿಗೆ ಬಂದಿದೆ ಎಂದು ಆಳುವ ಜನ ಮತ್ತು ಅವರ ಮುಖವಾಣಿಗಳು ತುತ್ತೂರಿ ಊದುತ್ತಲೇ ಇವೆ. ಆ ಕಾರ್ಗಿಲ್ ಕಂಪನಿಯೇ, ಈಗ ಫಿಲಿಫೈನ್ಸ್‌ಗೆ ನಮ್ಮ ಗೋಧಿ ರಫ್ತು ಮಾಡುವ ಹಕ್ಕು ಪಡೆದಿರುವುದು. ಏಕೆಂದು ಹೇಳಬಲ್ಲಿರಾ?

ನಿಮ್ಮ ಊಹೆ ಸರಿ! ಲಾಭ. ಹೌದು ಈ ವ್ಯವಹಾರದಲ್ಲಿ ಕಾರ್ಗಿಲ್ ಕಂಪನಿಗೆ ಲಾಭವಿದೆ. ಬೆಳೆ ಬೆಳೆದ ರೈತ ಮುಳುಗಿದರೇನು; ಅವನ ದೇಶದ ಜನ ಉಪವಾಸವಿದ್ದರೇನು; ದೇಶ ದಿವಾಳಿಯಾದರೇನು; ಕಾರ್ಗಿಲ್ ಕಂಪನಿಗೆ ಲಾಭ ಸಿಗಬೇಕು.

ರಫ್ತು ವ್ಯವಹಾರದ ಒಪ್ಪಂದದ ಪ್ರಕಾರ ಕಾರ್ಗಿಲ್ ಕಂಪನಿಗೆ ಫಿಲಿಫೈನ್ಸ್ ದೇಶ ಪ್ರತಿ ಕ್ವಿಂಟಾಲು ಗೋಧಿಗೆ ಸುಮಾರು ರೂ. 545 ರಷ್ಟು



ಲೂಟಿ ಪೂರ್ಣ

ಬೆಲೆ ನೀಡುತ್ತದೆ. (ಟನ್ನಿಗೆ 115.75 ಡಾಲರುಗಳಂತೆ). ಅಸಲು ಮತ್ತು ಸಾಗಾಣಿಕಾ ವೆಚ್ಚ ಸೇರಿ ಪ್ರತಿ ಕ್ವಿಂಟಾಲು ಗೋಧಿಗೆ ಕಾರ್ಗಿಲ್ ಭರಿಸಬೇಕಾಗಿರುವ ಬೆಲೆ ಸುಮಾರು 477 ರೂ.ಗಳು. ಅಂದರೆ ನಿರಾಯಾಸವಾಗಿ ಪ್ರತಿ ಕ್ವಿಂಟಾಲ್‌ಗೆ 68 ರೂ ಲಾಭ!. 20000 ಟನ್ನುಗಳ ರಫ್ತಿನಿಂದಾಗಿ ಸುಮಾರು 14 ಕೋಟಿಯಷ್ಟು ಲಾಭ ಕಾರ್ಗಿಲ್ ಮಡಿಲಿಗೆ. ಯಾರಿಗುಂಟು? ಯಾರಿಗಿಲ್ಲ?

'ಅನ್ನಪೂರ್ಣ' ಹಿಟ್ಟು - ಬಯಲಾದ ಗುಟ್ಟು

ಗೋಧಿಯ ವ್ಯವಹಾರದಲ್ಲಿ ವಿದೇಶಿ ತಿಮಿಂಗಲಗಳಿಗೆ ಇಷ್ಟೊಂದು ಲಾಭ ದೊರಕಿಸಿಕೊಟ್ಟರೆ ಆಯಿತೆ? ನಮ್ಮ ದೇಶದ ಶ್ರೀಮಂತ ಬಂಡವಾಳಿಗರಿಗೆ ಸಹ ಏನಾದರೂ ದಕ್ಕಬೇಡವೆ? ಅದಕ್ಕೂ ಅವಕಾಶವಿದೆ ನಮ್ಮಲ್ಲಿ. ಮುಕ್ತವಾದ ಮಾರುಕಟ್ಟೆಯಲ್ಲಿ ಮುಕ್ತವಾದ ಅವಕಾಶ!

ಕಳೆದ ತಿಂಗಳಲ್ಲಿ 'ಅನ್ನಪೂರ್ಣ' ಗೋಧಿ ಹಿಟ್ಟಿನ ಜಾಹೀರಾತೊಂದು ಪತ್ರಿಕೆಗಳಲ್ಲಿ ಬಂದದ್ದು ನೆನಪಿಸಿಕೊಳ್ಳಿ. ಒಂದು ಕಿಲೋ ಗೋಧಿ ಹಿಟ್ಟಿನ ಪೊಟ್ಟಣ ಕೊಂಡರೆ ಮತ್ತೊಂದು ಕಿಲೋ ಪೊಟ್ಟಣ ಉಚಿತ ಎಂಬ ಉದಾರ ಕೊಡುಗೆಯನ್ನು ಬಳಕೆದಾರರಿಗೆ ಆ ಮೂಲಕ ನೀಡಲಾಯಿತು. ಕೇವಲ 2-3 ದಿನಗಳಿಗೆ ಮಾತ್ರ ಆ ಕೊಡುಗೆ ಸೀಮಿತ ಎಂಬ ಟಿಪ್ಪಣಿ ಬೇರೆ. ಒಂದು ಕಿಲೋನ ಬೆಲೆಗೆ ಎರಡು ಕಿಲೋ ಗೋದಿ ಹಿಟ್ಟು ದೊರಕುವಾಗ ನಮ್ಮ ಶ್ರೀಮಂತ ಮತ್ತು ಮಧ್ಯಮ ವರ್ಗದ ಜನ ಸುಮ್ಮನಿದ್ದಾರೆಯೇ? ಮುಗಿಬಿದ್ದು ಕಿಲೋಗಟ್ಟಲೆ ಕೊಂಡುಕೊಂಡರು. ತಮಗೆ ಲಾಭ ಆಯಿತೆಂದು ಹಿಗ್ಗಿ ಹೀರೇಕಾಯಿಯಾದರು!

ಆದರೆ ಈ ಜನ ಪ್ರತಿ ಕಿಲೊ ಗೋಧಿ ಹಿಟ್ಟಿಗೆ ತೆತ್ತ ಬೆಲೆಯೆಷ್ಟು ಗೊತ್ತೆ? ಹದಿನೇಳು ರೂಪಾಯಿಗಳು! ಒಂದು ಕಿಲೋ ಬೆಲೆಗೆ ಎರಡು ಕಿಲೋ ಪಡೆದಾಗಲೂ, ಅವರು ತೆತ್ತಬೆಲೆ ಸರಾಸರಿ ರೂ. 8.50.

ವಿದೇಶಕ್ಕೆ ರೂ. 5.45ರ ಬೆಲೆಗೆ ರಫ್ತಾಗುವ, ಸಗಟು ಮಾರುಕಟ್ಟೆಯಲ್ಲಿ ರೂ. 5.50 ರಿಂದ ರೂ. 6.50 ರವರೆಗಿನ ಬೆಲೆಯಲ್ಲಿ ಲಭ್ಯವಾಗುವ ಗೋಧಿಯನ್ನು ಹಿಟ್ಟುಮಾಡಿ ಚಂದದ ಪೊಟ್ಟಣಗಳಲ್ಲಿ ತುಂಬಿಸಿ ರೂ. 17 ಕ್ಕೆ ಮಾರುವ 'ಅನ್ನಪೂರ್ಣ' ದ ತಯಾರಕರು ಕೊಳ್ಳೆ ಹೊಡೆಯುತ್ತಿರುವುದು ಎಷ್ಟೆಂದು ನೀವೇ ಲೆಕ್ಕ ಹಾಕಿ! ನಿಜ, ಜಾಹೀರಾತಿನ ಮೂಲಕ 2-3 ದಿನಗಳಲ್ಲಿ ಅರ್ಧದಷ್ಟು ಕಮ್ಮಿ ಬೆಲೆಗೆ ಸುಮಾರು ಗೋಧಿ ಹಿಟ್ಟು ಮಾರಿರಬಹುದು. ಅಲ್ಲೂ ಕೂಡಾ ಆ ತಯಾರಕರಿಗೆ ನಷ್ಟವಾಗಿಲ್ಲ. ಸಾಕಷ್ಟು ಲಾಭವೇ ದಕ್ಕಿದೆ.

ಇಂತಹ 'ಅನ್ನಪೂರ್ಣ'ದ ತಯಾರಕರು ಯಾರೆಂದು ತಿಳಿದಿರಿ. ಬೇರಾರು ಅಲ್ಲ ಮದ್ಯಗಳ ತಯಾರಿಕೆಗೆ ಪ್ರಸಿದ್ಧಿಯಾಗಿರುವ ಯೂಬಿ ಉದ್ಯಮ! ಕಿಲೊಗೆ ಒಂದೆರಡು ರೂಪಾಯಿಗಳಿಗೆ ಸಿಗುತ್ತಿದ್ದ ಹರಳುಪ್ಪಿನ ಬದಲು, ಆಕರ್ಷಕ ಪೊಟ್ಟಣಗಳಲ್ಲಿ ಹುಡಿ ಉಪ್ಪನ್ನು ಕಿಲೋ ರೂ. 7.00 ರಂತೆ ಮಾರಿ ದೇಶ ಸೇವೆ ಮಾಡುತ್ತಿರುವ ಉದ್ಯಮ ಸಮೂಹ!

ಹೇಗಿದೆ ನಮ್ಮ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಪ್ರಭಾವ! ಮಾರುಕಟ್ಟೆಯ ಶಕ್ತಿಗಳ ಆಡಂಬೋಲ!

ತಲೆ ತಿರುಗುತ್ತಿದೆಯೇ. ದಯವಿಟ್ಟು ಸಂಬಾಳಿಸಿಕೊಳ್ಳಿ, ಇಲ್ಲದಿದ್ದರೆ ಇದೇ ಯೂಬಿ ಸಮೂಹದ ಮಲ್ಯ ಆಸ್ಪತ್ರೆಗೆ ದಾಖಲಾಗಬೇಕಾದೀತು. ಚಿಕಿತ್ಸೆಗಾಗಿ ನಿಮ್ಮಲ್ಲಿರುವ ಎಲ್ಲವನ್ನೂ ಮಾರಿ, ಹಣ ಸುರಿಯಬೇಕಾದೀತು! ಕೆಲವೇ ಲಕ್ಷಗಳು ಮಹರಾಯ್ರೆ...!

ಅನ್ನದಗುಳಿಗೆ ಕನ್ನ....

ಪುಟ 7 ರಿಂದ

ಉತ್ಪಾದನೆಯ ಶೇಖರಣೆ:

ಸಾಮಾಜಿಕ ವಿತರಣ ಪದ್ಧತಿ (PDS) ಯಶಸ್ವಿಯಾಗಲು ಪ್ರಾದೇಶಿಕ ಆಹಾರ ಶೇಖರಣೆ ಪ್ರಮುಖ ಅಂಶವಾಗಿದೆ. ಬಹಳ ಹಿಂದಿನಿಂದ ಈ ವ್ಯವಸ್ಥೆ ಜಾರಿಯಲ್ಲಿದ್ದರೂ. 70 ದಶಕದಲ್ಲಿ ಆದ ಬೆಲೆ ಏರಿಕೆಯಿಂದ ಈ ವ್ಯವಸ್ಥೆ, ವಿಸ್ತರಣೆಗೊಂಡಿತು. ಉತ್ತರ ಭಾರತದಲ್ಲಿ ಆಹಾರ ಶೇಖರಣೆಯಿಂದಾಗಿ ಅದನ್ನು ಖರೀದಿಸಿ ನಗರ, ಕೇಂದ್ರ ಆಡಳಿತ



ಸಾಲು ಸಾಲು ಎಲ್ಲೋಡಿ ಸಾಲೇ ಸಾಲು

ಪ್ರದೇಶಗಳಿಗೆ ಮತ್ತು ಆಹಾರ ಕೊರತೆ ಇರುವ ರಾಜ್ಯಗಳಿಗೆ ಒದಗಿಸಲಾಯಿತು. ಈ ಪ್ರದೇಶದ ಆಹಾರ ಶೇಖರಣೆಯು ವಿಶೇಷ ಮನ್ನಣೆ ಪಡೆಯಲು ಕಾರಣವಾಯಿತು. ಆಧುನಿಕ ತಂತ್ರಗಾರಿಕೆ ಉಪಯೋಗಿಸಿ ಕೆಲವಾರು ಪ್ರದೇಶಗಳಲ್ಲಿ ಆಹಾರ ಉತ್ಪಾದನೆ ಹೆಚ್ಚಿಸಲಾಯಿತು. ಉತ್ತರ, ಭಾರತದ ಹರಿಯಾಣ, ಪಂಜಾಬ್, ಉತ್ತರ ಪ್ರದೇಶ ರಾಜ್ಯಗಳು ಇಡೀ ರಾಷ್ಟ್ರಕ್ಕೆ ಆಹಾರ ಒದಗಿಸುವ ರಾಜ್ಯಗಳಾದವು. ಉಳಿದ ಕಷ್ಟಕರ ರಾಜ್ಯಗಳು ಭಿನ್ನವಾಗಿದ್ದವು. ಈ ಕಾಲು ಶತಮಾನದ ಅವಧಿಯ ಹಸಿರುಕ್ರಾಂತಿಯಲ್ಲಿ ಉತ್ಪಾದನೆಯ ಪ್ರದೇಶಗಳ ಪ್ರತಿಯೊಬ್ಬನ ತಲೆವಾರು ಉತ್ಪಾದನೆಯಾಗಿದ್ದು ದೇಶದ ಉತ್ತರ ಮತ್ತು ಪಶ್ಚಿಮ ಭಾಗದಲ್ಲಿ ಶೀಘ್ರವಾಗಿ ಬೆಳೆಯಿತು. ಉಳಿದ ಪ್ರದೇಶದಲ್ಲಿ ಉತ್ಪಾದನೆ ಇಳಿಮುಖಗೊಂಡು ಸ್ಥಗಿತತೆ ಕಂಡು ಬಂದಿತು. ಉತ್ತರ ಭಾರತದಲ್ಲಿ ಮೂರರಲ್ಲಿ ಎರಡು ಪಟ್ಟು ಹೆಚ್ಚಾಯಿತು. ಇತರೆಡೆಗಳಲ್ಲಿ ಇಳಿಮುಖಗೊಂಡಿತು. ಇದು ಪಶ್ಚಿಮ ಬಂಗಾಳ ಹೊರತುಪಡಿಸಿ ಇತರೆ ಎಲ್ಲಾ ರಾಜ್ಯಗಳಿಗೂ ಅನ್ವಯಿಸುತ್ತದೆ. ಆಹಾರ ಉತ್ಪಾದನೆ ಕಡಿಮೆ ಇರುವ ರಾಜ್ಯಗಳಿಗೆ 60 ರ ನಂತರ 3 ದಶಕಗಳಲ್ಲಿ ಮಹತ್ವ ನೀಡಲಾಯಿತು. ಈ ಯೋಜನೆಯು ತುಂಬಾ ಉಪಯೋಗಕರವಾಯಿತು. ವಿವಿಧ ರೀತಿಯ ಉತ್ಪಾದನೆ ಹೊಂದಿರುವ ಕೇರಳ-ಕರ್ನಾಟಕದ ಕರಾವಳಿ ಪ್ರದೇಶಗಳಲ್ಲಿ ಭೌಗೋಳಿಕವಾಗಿ ವಿಭಿನ್ನ ಮಣ್ಣು, ವಾತಾವರಣ ಹೊಂದಿದ್ದು ವಾಣಿಜ್ಯ ಬೆಳೆಗಳಾದ ರಬ್ಬರ್, ಮೆಣಸು, ಜೀರಿಗೆ ಇತ್ಯಾದಿಗಳನ್ನು ಉತ್ಪಾದಿಸುವ ವೈಶಿಷ್ಟ ಹೊಂದಿದ್ದವು. ಉತ್ತರ ಬಂಗಾಳ, ಅಸ್ಸಾಂ, ತಮಿಳುನಾಡು, ಕರ್ನಾಟಕದ ಗುಡ್ಡಗಾಡು ವಿಭಾಗಗಳು ಟೀ, ಕಾಫಿ, ಬೆಳೆಗಳ ಉತ್ಪಾದನೆ ಕೇಂದ್ರಗಳಾಗಿದ್ದವು.

ಭಾರತ ಆಹಾರ ನಿಗಮ(FCI) ದಪಾತ್ರ

80 ರ ದಶಕದಲ್ಲಿ ಆಹಾರ ನಿಗಮವು

[illegible] 16 [illegible]

ಆಹಾರವನ್ನು ಖರೀದಿಸಿ ದಾಸ್ತಾನು ಮಾಡಿದೆ. ಇದು ಮಾರುಕಟ್ಟೆಗೆ ಬರುವ ದೇಶದ ಶೇ 40 ರಷ್ಟು ಆಹಾರ ಧಾನ್ಯವಾಗುತ್ತದೆ. ಶೇ 90 ರಷ್ಟು ಗೋಧಿಯನ್ನು ಖರೀದಿಸಿದೆ. ಅದರಲ್ಲಿ ಮೂರನೇ ಎರಡರಷ್ಟು ಉತ್ತರ ಭಾರತದ ರಾಜ್ಯಗಳಿಂದ ಬರುತ್ತಿತ್ತು. FCI ಆಹಾರ ದಾಸ್ತಾನು ಮಾಡಿಕೊಂಡು, ಮಾರುವ ಮತ್ತು ಕೊಳ್ಳುವುದರಿಂದ ಬೆಲೆಯನ್ನು ನಿಯಂತ್ರಣ ಮಾಡಿ, ಬೆಲೆ ಕುಸಿತ ಆಗುವುದನ್ನು ತಡೆಗಟ್ಟಿ ರೈತರನ್ನು ಕಾಪಾಡಲು ಸಾಧ್ಯವಾಗಿತ್ತು. FCI ನಲ್ಲಿ ದಾಸ್ತಾನು ಇರುವುದರಿಂದ ಜನರಿಗೆ ಬೇಕಾದ ಸಂದರ್ಭದಲ್ಲಿ ಧಾನ್ಯಗಳನ್ನು ಬಿಡಗಡೆ ಮಾಡಲು ಸಾಧ್ಯವಾಗುತ್ತಿತ್ತು. ಆಹಾರ ಕೊರತೆ ಉಂಟಾದ ಸಂದರ್ಭದಲ್ಲಿ ಆಹಾರ ಬಿಡುಗಡೆ ಮಾಡಿ ಜನರಿಗೆ ಆಗುವ ತೊಂದರೆಯನ್ನು ತಪ್ಪಿಸುತ್ತಿತ್ತು.

1987-88 ರ ಬರಗಾಲದಲ್ಲಿ ಸಾಕಷ್ಟು ಆಹಾರ ದಾಸ್ತಾನು ಮಾಡಿ ಆಹಾರ ಕೊರತೆ ನೀಗಿಸುವಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿತು. 'ಆಹಾರಕ್ಕಾಗಿ ಕೆಲಸ' ಎಂಬ ಯೋಜನೆ ರೂಪಿಸಿ. ಉದ್ಯೋಗ ಒದಗಿಸಿದ್ದಲ್ಲದೇ ಆದಾಯ ಒದಗಿಸಲು ಸಾಧ್ಯವಾಗಿತ್ತು. FCI ನಲ್ಲಿ ಹಲವು ದೋಷಗಳಿದ್ದರೂ, ಜನರಿಗೆ ಅನುಕೂಲ ಮಾಡಲು ಸಾಧ್ಯವಾಗಿತ್ತು.

ಎನ್‌ಡಿಎ ಸರ್ಕಾರ

PDS ಯೋಜನೆ ನಾಶಗೊಳಿಸುತ್ತಿದೆ

ಕೇಂದ್ರದ ವಾಜಪೇಯಿ ಎನ್‌ಡಿಎ ಸರ್ಕಾರ ಭಾರತ ಆಹಾರ ನಿಗಮ(FCI) ಮತ್ತು ಸಾರ್ವಜನಿಕ ವಿತರಣೆ ಪದ್ಧತಿ (PDS) ರದ್ದುಗೊಳಿಸುವ ಪ್ರಯತ್ನ ನಡೆಸುತ್ತಿದೆ. ಸರ್ಕಾರ ತನ್ನ ಬಜೆಟ್‌ನಲ್ಲಿ ಪಡಿತರ ಕಾರ್ಡ್‌ದಾರರಿಗೆ ಸಬ್ಸಿಡಿ ನೀಡುವುದು ಹೊರೆಯಾಗುತ್ತಿದೆ. ಮತ್ತು ಗೋಡನ್‌ನಲ್ಲಿ ದಾಸ್ತಾನು ಮಾಡುವ ಖರ್ಚು ಹೆಚ್ಚಾಗುತ್ತಿದೆ ಎಂಬ ನೆಪ ಹೇಳುತ್ತಿದೆ. ಸರ್ಕಾರ ಈಗಾಗಲೇ PDS ಯೋಜನೆಗೆ ನೀಡುತ್ತಿದ್ದ ಸಬ್ಸಿಡಿ ಸಹಾಯಧನವನ್ನು ಕಡಿತ ಮಾಡಿದೆ. ಅಲ್ಲದೆ ಅಮೆರಿಕಾ, ಯುರೋಪಿಯನ್ ಒಕ್ಕೂಟ ದೇಶಗಳಿಗೆ ಹೆಚ್ಚು ಆಹಾರ ರಫ್ತು ಮಾಡುವ ಶ್ರೀಮಂತ ದೇಶಗಳಿಗೆ ಸಹಾಯಕವಾಗುವ ರೀತಿಯಲ್ಲಿ ತನ್ನ ಧಾಳಿಯನ್ನು ಮುಂದುವರಿಸುತ್ತದೆ.

ಸರ್ಕಾರ ಪಡಿತರ ವ್ಯವಸ್ಥೆಯನ್ನೇ ಕುಗ್ಗಿಸುತ್ತಿದೆ. ಆಹಾರ ಕೊಳ್ಳುವುದು ಮತ್ತು ವಿತರಿಸುವ ವ್ಯವಸ್ಥೆಯನ್ನು ಸರ್ವನಾಶ ಮಾಡುವುದನ್ನೇ ಪ್ರತಿಪಾದಿಸುವುದನ್ನು ವಾಜಪೇಯಿ ಸರ್ಕಾರ ಮುಂದುವರಿಸುತ್ತಿದೆ.

ಆದರೆ ಎನ್‌ಡಿಎನ ಮಿತ್ರ ಪಕ್ಷಗಳು ಇದಕ್ಕೆ ವಿರುದ್ಧವಾಗಿರುವುದರಿಂದ ಮತ್ತು ರೈತರ ಬೆಂಬಲವಿಲ್ಲದಿರುವುದರಿಂದ ಪೂರ್ಣ ಪ್ರಮಾಣದಲ್ಲಿ ಜಾರಿ ಮಾಡುತ್ತಿಲ್ಲ. ಅದಕ್ಕೆ ಬದಲಾಗಿ FCI ಸಮರ್ಥವಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳುತ್ತಿದೆ. ಆದ್ದರಿಂದ FCI ರೈತರಿಂದ ಆಹಾರ ಕೊಳ್ಳುವ - ಮಾರುವ ನಿರ್ಬಂಧವೇನಿಲ್ಲ ಎಂದು ಪ್ರತಿಪಾದಿಸುತ್ತಿದೆ ಯಾವ ರಾಜ್ಯಗಳಾದರೋ ಆಹಾರಕ್ಕೆ ಬೇಡಿಕೆ ಸಲ್ಲಿಸಿದಲ್ಲಿ ಖರೀದಿಸುವುದು, ಸಾಗಣಿಕೆ ಜವಾಬ್ದಾರಿ ಆಯಾ ರಾಜ್ಯಗಳದ್ದಾಗಿರುತ್ತದೆಂದು ಹೇಳುತ್ತಿದೆ. ಈ ಎಲ್ಲಾ ಅಂಶಗಳು ಮುಂದಿನ ದಿನಗಳಲ್ಲಿ ಪಡಿತರ ವ್ಯವಸ್ಥೆಯನ್ನು - ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ನಾಶಗೊಳಿಸುವುದು ಖಂಡಿತ. ಈ ಬಗ್ಗೆ ದೇಶದ ಜನತೆ ಎಚ್ಚರಿಕೆಯಿಂದ ನೋಡಬೇಕಾಗಿದೆ.

ಕೊನೆಗೂ ರೇಷನ್ ರೇಟು ಇಳಿಸಲಾಗಿದೆ ಈಗ ಆದರೆ... ತಾವೇ ತೋಡಿದ ಬಾವಿಗೆ ಬಿದ್ದ ವಾಜಪೇಯಿ ಸರಕಾರ

ರೇಶನ್ ದರ ಹೆಚ್ಚಿಸಬೇಡಿರೆಂದು ದೇಶದ ಜನ ಒಕ್ಕೊರಲಿನಿಂದ ಕೂಗಿದಾಗ ಕೇಳಲಿಲ್ಲ ಈ ವಾಜಪೇಯಿ ಸರಕಾರ. ಅವರಿಗೆ ದೇಶದ ಜನ ಹಿತಕ್ಕಿಂತ ವಿಶ್ವಬ್ಯಾಂಕ್, WTO ಗಳ ಆಣತಿಯೇ ವೇದವಾಕ್ಯವಾಗಿತ್ತು. ಬಡತನ ರೇಖೆಗಿಂತ ಕೆಳಗಿರುವ (BPL) ಅತ್ಯಂತ ಬಡವರಿಗೂ, ಬಡತನ ರೇಖೆಗಿಂತ ಮೇಲಿರುವ (APL) ಮಧ್ಯಮ ಮತ್ತು ಶ್ರೀಮಂತ ವರ್ಗದವರಿಗಿದ್ದ ರೇಷನ್ ದರವನ್ನು ಹೆಚ್ಚಿಸಿತು. ಇದರಿಂದಾಗಿ ಸರಕಾರಕ್ಕೆ ಕೋಟಿಗಟ್ಟಲೆ ಲಾಭ ಆಗಿತ್ತು. ಅಂದರ ಅದುವರೆಗೆ ನೀಡುತ್ತಿದ್ದ ಸಬ್ಸಿಡಿಯನ್ನು ಸರಕಾರ ಹಿಂತೆಗೆದುಕೊಂಡಿತ್ತು.

ರೇಷನ್‌ದರ ಮತ್ತು ತೆರೆದ ಮಾರುಕಟ್ಟೆಯಲ್ಲಿನ ದರ ಹೆಚ್ಚು ಕಡಿಮೆ ಒಂದೇ ಆಗಿದ್ದರೆ, ರೇಶನ್ ಅಂಗಡಿಗೆ ಯಾರು ಹೋಗುತ್ತಾರೆ. ಕಳಪೆ ಅಕ್ಕಿ, ತೂಕ ಕಡಿಮೆ ಬೇರೆ. ಆದ್ದರಿಂದಲೇ ರೇಷನ್ ತೆಗೆದುಕೊಳ್ಳುವವರ ಸಂಖ್ಯೆ ತೀರಾ ಕಡಿಮೆಯಾಯ್ತು. ರೇಷನ್ ಅಂಗಡಿಯವರು ತರಿಸುವುದನ್ನು ನಿಲ್ಲಿಸಿದರು. ಗೋದಾಮುಗಳಲ್ಲಿ ಧಾನ್ಯಗಳು ಹಾಳಾಗಲು ಆರಂಭವಾಯಿತು. ಅತ್ತ ರಫ್ತು ಕುಂಠಿತಗೊಂಡಿದೆ. ಇದರಿಂದ ಪರಿತಪಿಸಿದ ಸರಕಾರ ರೇಷನ್ ಪ್ರಮಾಣವನ್ನು ಜಾಸ್ತಿ ಮಾಡಿತು. ಆದರೆ ಜನರ ಕೈಯಲ್ಲಿ ಹಣವಿಲ್ಲ. ಹೇಗೆ ಕೊಳ್ಳುವುದು. ಇದೇ ವಾಜಪೇಯಿ ಸರಕಾರ ಅನುಸರಿಸಿದ ಎಲ್‌ಪಿಜಿ ನೀತಿಯಿಂದ ಜನರಿಗೆ ಕೆಲಸವಿಲ್ಲ. ಕೊಳ್ಳುವುದು ಎಲ್ಲಿಂದ? ಇದರಿಂದಾಗಿ ಗೋದಾಮುಗಳಲ್ಲಿ ದಾಸ್ತಾನು ಬೆಳೆಯುತ್ತಲೇ ಹೋಯಿತು. ನಮ್ಮದೇಶಕ್ಕೆ ಬೇಕಾಗಿರುವ ಹೆಚ್ಚುವರಿ ದಾಸ್ತಾನು 158 ಲಕ್ಷ ಟನ್ನುಗಳಾದರೆ, ಗೋದಾಮುಗಳಲ್ಲಿ ಒಟ್ಟು ದಾಸ್ತಾನು 604.08 ಲಕ್ಷ ಟನ್ನುಗಳಿಗೇರಿತು.

ಅಂದರೆ ಬೇಕಾದುದಕ್ಕಿಂತ 4 ಪಟ್ಟು ಜಾಸ್ತಿ! ಹಿಂದಿನ ವರ್ಷ ಈ ದಾಸ್ತಾನು 422 ಲಕ್ಷ ಟನ್.

ಇದರಿಂದಾಗಿ ಹೊಸ ಸಮಸ್ಯೆ ತಲೆದೋರಿತು! ದಾಸ್ತಾನು ನಿರ್ವಹಣೆ ಮತ್ತು ಸಾಗಾಣಿಕೆ ಖರ್ಚಿಗೆ ವಿಪರೀತ ಹೆಚ್ಚಳವಾಯಿತು. ಇದು ವರ್ಷಕ್ಕೆ 2000 ಕೋಟಿ ರೂ.ಗಿಂತಲೂ ಜಾಸ್ತಿ. ಸಬ್ಸಿಡಿ ಹಣದ 4/5 ರಷ್ಟು! ಒಂದೆಡೆ ಜನರು ಉಪವಾಸ. ಇನ್ನೊಂದೆಡೆ ಕೊಳೆಯುತ್ತಿರುವ ಆಹಾರ ಧಾನ್ಯಗಳು. ಅದನ್ನು ಶೇಖರಿಸಿಡಲು ಕೋಟ್ಯಾಂತರ ರೂಪಾಯಿ ಖರ್ಚು. ಇದು ವಾಪೇಯಿಯವರ ಸರಕಾರದ ನೀತಿ.

ಚಿಂತಿಲ್ಲ. ಆಹಾರ ಧಾನ್ಯಗಳನ್ನು ವಿದೇಶಕ್ಕೆ ಕಳಿಸಿ ಲಾಭ ಗಳಿಸಬೇಕೆಂಬ ಆಸೆ. ಆದರೆ ವಿದೇಶದಲ್ಲಿ ನಮ್ಮ ಆಹಾರ ಧಾನ್ಯವನ್ನು ಕೊಳ್ಳುವವರಿಲ್ಲ. ಕಳಪೆ ಗುಣಮಟ್ಟ!

ದಾಸ್ತಾನನ್ನು ಹೇಗಾದರೂ ಕಡಿಮೆ ಮಾಡಬೇಕೆಂದು ರೇಶನ್ ಅಂಗಡಿಗಳಲ್ಲಿ ಅಕ್ಕಿ ದರವನ್ನು ಕೆ.ಜಿ. 3 ರೂ.ಗೆ ಹಾಗೂ ಗೋಧಿ ದರವನ್ನು ಕೆ.ಜಿ.ಗೆ 2.20 ರೂನಂತೆ ಕಡಿಮೆ ಮಾಡಿದೆ. ಆದರೆ ಬಡ ಜನರಿಗೆ ಸಿಗುವ ಅಕ್ಕಿ ಮತ್ತು ಗೋಧಿಯ ದರ ಕಡಿಮೆ ಆಗಿಲ್ಲ. ಮಧ್ಯಮವರ್ಗ ಮತ್ತು ಶ್ರೀಮಂತರಿಗೆ (APL) ಸಿಗುವ ಅಕ್ಕಿ, ಗೋಧಿಯ ದರ ಮಾತ್ರ ಕಡಿಮೆ ಆಗಿದೆ. ಆದ್ದರಿಂದ ಗೋದಾಮುಗಳಲ್ಲಿರುವ ದಾಸ್ತಾನು ಕಡಿಮೆ ಆಗುವ ಸಂಭವ ಇಲ್ಲ. ಬಡತನದ ರೇಖೆಗಿಂತ ಕೆಳಗಿರುವ (BPL) ಜನರಿಗೆ ಧಾನ್ಯದ ದರ ಕಡಿಮೆ ಮಾಡಿದರೆ ದಾಸ್ತಾನು ಕಡಿಮೆ ಆಗುವ ಸಂಭವ ಇದೆ.

ಮಾಡಬೇಕಾದುದೇನು? ನಮ್ಮ ದೇಶದ ಎಡ ಪಕ್ಷಗಳು, ಜನಪರ ಸಂಘಟನೆಗಳು 'ಕೂಳಿಗಾಗಿ ಕಾಳು' ಯೋಜನೆಯನ್ನು ಜಾರಿಗೆ ತರಲು ಒತ್ತಾಯಿಸುತ್ತಿವೆ. ಪಶ್ಚಿಮಬಂಗಾಳ, ಕೇರಳ, ತ್ರಿಪುರಗಳಲ್ಲಿ ಈ



ವಿ. ಶ್ರೀನಿವಾಸಪ್ರಸಾದ್

ದೇಶ ಕಂಡ ಅಪೂರ್ವ ಮುತ್ಸದ್ದಿಗಳು!

ಯೋಜನೆಯನ್ನು ತಮ್ಮ ಇತಿಮಿತಿಯೊಳಗೆ ಜಾರಿಗೆ ತಂದು ಯಶಸ್ವಿಯಾಗಿವೆ. 'ಕೂಲಿಗಾಗಿ ಕಾಳು' ಯೋಜನೆಯ ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ನಿರ್ಮಾಣ, ಕೆರೆಗಳ ಹೂಳೆತ್ತುವುದು, ಚಿಕ್ಕ ಆಣೆಕಟ್ಟು, ಕಾಲುವೆ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬಹುದು.

ಗೋದಾಮುಗಳಲ್ಲಿ ಕೊಳೆತು ಹಾಳಾಗುವ ಧಾನ್ಯ, ಗ್ರಾಮಾಂತರ ಪ್ರದೇಶಗಳಲ್ಲಿರುವ ಯುವಜನರಿಗೆ ಶಕ್ತಿಯನ್ನು ನೀಡಬಲ್ಲದು. ಆ ಶಕ್ತಿ ಹೊಸ ಕಾಮಗಾರಿಗಳನ್ನು ಸೃಷ್ಟಿಸಬಲ್ಲದು.

ಇನ್ನೊಂದೆಡೆಯಲ್ಲಿ ರೇಶನ್ ಅಂಗಡಿಗಳಲ್ಲಿ ಆಹಾರ ಧಾನ್ಯಗಳ ದರವನ್ನು ಇನ್ನಷ್ಟು ಕಡಿತಗೊಳಿಸಬೇಕಾಗಿದೆ. ಅದರಲ್ಲೂ ಬಡವರಿಗೆ ದೊರಕುವ ಧಾನ್ಯಗಳ ದರ ಕಡಿಮೆ ಆಗಬೇಕಾಗಿದೆ. ಆಗಮಾತ್ರ ಅನಾವಶ್ಯಕ ದಾಸ್ತಾನನ್ನು ಕಡಿತಗೊಳಿಸಬಲ್ಲದು.

ಕೇಂದ್ರ ಸರಕಾರ ಈ ನೀತಿಯನ್ನು ಜಾರಿಗೊಳಿಸದೆ ಹೋದಲ್ಲಿ, 'ನಿಮಗೆ ಅಧಿಕಾರದಲ್ಲಿ ಮುಂದುವರಿಯುವ ಹಕ್ಕಿಲ್ಲ' ಎಂದು ಸಾರಿಸಾರಿ ಹೇಳಬೇಕಾಗಿದೆ. ಇಲ್ಲವಾದಲ್ಲಿ ಉಗ್ರ ಚಳುವಳಿಯನ್ನು ರೂಪಿಸಬೇಕಾಗಿದೆ.

- ಬಾಲಕೃಷ್ಣ ಶೆಟ್ಟಿ



ತಡೆಗೋಡೆಗಳನ್ನೊಡೆದು

ಸರ್ಕಾರದ ಕಾರ್ಯವಿಮರ್ಶೆ ಎಂಬ 'ವ್ಯವಹಾರ'

ಪುಟ 3 ರಿಂದ

ಮತ್ತೊಂದು ಪರೀಕ್ಷೆಯಲ್ಲಿ ಕೃಷ್ಣ ಪಾಸಾಗಿದ್ದಾರೆ. ಪಾಸ್ ಮಾಡಿದವರು ನಾಡಿನ ಜನರಲ್ಲ, ಅಥವಾ ಜನ ಪ್ರತಿನಿಧಿಗಳೂ ಅಲ್ಲ. ಕೃಷ್ಣರ ಸರ್ಕಾರದ ಹಣೆಬರಹವನ್ನು ನಿರ್ಧರಿಸುವವರು ಹೈಕಮಾಂಡಿನವರು. ಕಳೆದ ವರುಷ ಸರ್ಕಾರದ ಕಾರ್ಯ ವಿಮರ್ಶೆಯೆಂಬ ಮುಖ್ಯಮಂತ್ರಿ ಹಾಗೂ ಮಂತ್ರಿಮಂಡಳದ ಪರೇಡು ನಡೆಸಿ, 'ಜೀವದಾನ' ಮಾಡಿದ್ದಂತೆ ಈಗಲೂ ಆಗಿದೆ. ಎಷ್ಟೋ ಜನ ಸಚಿವರು ತಮ್ಮನ್ನು ಕೈಬಿಡಲಾಗುವುದೇ ಅಥವಾ ಮುಖ್ಯಮಂತ್ರಿ ಬದಲಾಗುವರೋ ಎಂದು ಆತಂಕ ಪಟ್ಟಿದ್ದರು. ಆದರೀಗ ಆ ಆತಂಕ ಇಲ್ಲ. ಆದರೆ ಮೂರು ತಿಂಗಳಿಗೊಮ್ಮೆ ಇನ್ನು ವಿಮರ್ಶೆ ನಡೆಯುವುದು ಎಂಬುದು ಈ ಎಲ್ಲರ ತಲೆಮೇಲೆ ತೂಗುವ ಕತ್ತಿಯಿಟ್ಟು ಹೋದಂತಾಗಿದೆ. ಎಲ್ಲರಿಗೂ ಗೊತ್ತಿರುವಂತೆ ಕಾಂಗ್ರೆಸ್‌ನ ಹೈಕಮಾಂಡ್, ಅದ್ಯಕ್ಷರ ಕೃಪೆಯಿರುವವರೆಗೆ ಮುಂದುವರಿಯಬಹುದು. 'ವ್ಯವಹಾರ'ದಲ್ಲಿ ಏನೊಂದು ವ್ಯತ್ಯಾಸ ಆದರೂ ಗದ್ದುಗೆ ತಪ್ಪಿದ್ದೇ. ಭಿನ್ನಮತೀಯರಿಗೆ ಕುಮ್ಮಕ್ಕು ಇದ್ದದ್ದೇ. ಹೀಗಾಗಿ ಪ್ರತಿದಿನವೂ, ತಿಂಗಳೂ ನಾಯಕರ ಒಲಿಕೆಗೆ ಹಾತೊರೆಯಬೇಕು.

ಕೇಂದ್ರದ ಈ ತಂಡ ವಿಮರ್ಶೆ ಮಾಡಿದ್ದರೂ ಏನು? ಕೃಷ್ಣ ಸರ್ಕಾರ ಎಲ್ಲಾ ರಂಗಗಳಲ್ಲೂ ಅತ್ಯುತ್ತಮ ಕೆಲಸ ಮಾಡಿದರೆ 'ಚಂದ್ರಬಾಬು ನಾಯ್ಡು' ಗಿಂತಲೂ ಎಂದು ಪ್ರಶಸ್ತಿ ನೀಡಿದೆ. (ನಾಯ್ಡು ಅತ್ಯುತ್ತಮವೆಂಬ ಮಾನದಂಡವನ್ನು ಕಾಂಗ್ರೆಸ್ ನಿರ್ಧರಿಸಿಬಿಟ್ಟಿದೆ) ಚುನಾವಣಾ ಪ್ರಣಾಳಿಕೆಯ ಭರವಸೆಯಾದ ಬಡತನ ನಿರ್ಮೂಲನ, ವಸತಿ ನಿರ್ಮಾಣ, ಸ್ವಯಂ ಉದ್ಯೋಗ, ಪಾರದರ್ಶಕ ಆಡಳಿತ, ಅಧಿಕಾರ ವಿಕೇಂದ್ರೀಕರಣ, ಬಂಡವಾಳಹೂಡಿಕೆ, ರೈತರ ಸ್ಥಿತಿಗತಿ, ಉದ್ಯೋಗ ನೀಡಿಕೆ..... ಆಹಾ! ಕೇವಲ ಕೆಲವೇ ಗಂಟೆಗಳಲ್ಲಿ ಎಷ್ಟೊಂದು ವಿಷಯಗಳನ್ನು ವಿಮರ್ಶಿಸಲಾಗಿದೆ. 'ಈ ಸೈಬರ್' ಗಿಂತಲೂ ವೇಗವಲ್ಲವೇ? ಆದರೆ ಇಲ್ಲಿ ರೈತರ ಆತ್ಮಹತ್ಯೆ ಬಗ್ಗೆಗಾಗಲಿ, ಫಸಲಿಗೆ ಬೆಲೆ ಸಿಗದ ಸ್ಥಿತಿ, ಉದ್ಯೋಗ ಕಡಿತ, ಪಡಿತರ ಸಮಸ್ಯೆ,



ಪರೀಕ್ಷೆಯ ವ್ಯವಹಾರಗಳು

ಕಾರ್ಮಿಕ ವಿರೋಧಿ ಕರಾಳ ಕ್ರಮಗಳು, ಬರಗಾಲದ ಭೀಕರ ಛಾಯೆಯೆದುರು ಕೈಚೆಲ್ಲಿ ನಿದ್ದೆ ಮಾಡುವ ಸರ್ಕಾರ... ಇವಾವೂ ಈ ಪರೀಕ್ಷಕರಿಗೆ ಗೋಚರವಾಗಲಿಲ್ಲ. ಇಂತಹ ಘನಘೋರ ಸಮಸ್ಯೆಗಳೇ ಕಾಣದಿದ್ದಲ್ಲಿ, ಅದರತ್ತ ಮೌಲ್ಯಮಾಪನ ಮಾಡದೇ ಹೋದ ಈ ತಂಡದ ತನಿಖೆಗೆ ನೈತಿಕತೆ ಎಷ್ಟು? ಪ್ರಾಮಾಣಿಕತೆ ಏನು ಎಂಬ ಪ್ರಶ್ನೆ ಏಳುತ್ತದೆ. ಹೀಗಾಗಿ ಇದೊಂದು ಬೋಗಸ್ ಸರ್ಕಸ್ ಅಥವಾ ತೆರೆಮರೆಯಲ್ಲಿ ಇನ್ನೇನೋ 'ವ್ಯವಹಾರ ನಡೆದು' ಅದನ್ನು ಮುಚ್ಚಿಕೊಳ್ಳಲು ನಾಟಕವೋ ಎನ್ನಿಸುತ್ತದೆ. ಈಗಾಗಲೇ ಕೃಷ್ಣರ ಸರ್ಕಾರದ ಭಾರೀ ಭ್ರಷ್ಟಾಚಾರಗಳ ಬಗ್ಗೆ ಅನೇಕ ಸಂಗತಿಗಳು ಹೊರಬರುತ್ತಿದ್ದು ಅದರಲ್ಲಿ ಪಾಲು ಪಡೆಯುವ ನಿಯತ್ತಿನ ಬೆದರಿಕೆಯ ಕಸರತ್ತೇ ಇದು ಎಂದು ಜನರಾಡುತ್ತಿದ್ದಾರೆ.

ಅಲ್ಲದೇ ಮನಮೋಹನ್ ಸಿಂಗ್, ಅಂಬಿಕಾಸೋನಿ, ವೇದ ಪ್ರಕಾಶ್‌ರಂತಹವರು ಚುನಾಯಿತ ಸರ್ಕಾರವನ್ನು ಕಾರ್ಯವಿಧಾಸ ವಿಮರ್ಶಿಸಬಹುದೇ? ಎಂಬ ವಿವಾದ ಎದ್ದಿದೆ. ಪಕ್ಷದ ರಾಷ್ಟ್ರ ಸಮಿತಿಯು ಚರ್ಚಿಸುವುದಿದ್ದರೆ ಪಕ್ಷದ ರಾಜ್ಯ ಘಟಕದಲ್ಲೇ ಚರ್ಚಿಸುವುದು, ವಿಮರ್ಶಿಸುವುದು ಸೂಕ್ತ. ಮೂವರು ದೆಹಲಿಯಿಂದ ಬಂದು ಇಲ್ಲಿನ ಮುಖ್ಯಮಂತ್ರಿ, ಅಧ್ಯಕ್ಷರನ್ನು ಕರೆಸಿ ವಿಮರ್ಶಿಸಿ ತೀರ್ಪು-ನೀಡುವುದು ಸರಿಯಾದ ಪರಿಪಾಠವಲ್ಲ.

ಸಾವಿನ ಸರಣಿ

ರಾಜ್ಯದಲ್ಲಿ ಮತ್ತಿಬ್ಬರು ರೈತರ ಬಲಿ

ಮಾಲೂರಿನ ಒಂದು ಇಡೀ ರೈತಕುಟುಂಬ ಸಾಲದ ಬಾಧೆ ತಾಳದೇ ಆತ್ಮಹತ್ಯೆಗೀಡಾದ ಸುದ್ದಿಯ ಬೆನ್ನ ಹಿಂದೆಯೇ ಇಬ್ಬರು ರೈತರು ಜೀವ ಕಳೆದುಕೊಂಡ ದಾರುಣ ಘಟನೆಗಳು ಈ ವಾರದಲ್ಲಿ ನಡೆದಿವೆ. ಗದಗ್ ಜಿಲ್ಲೆಯ ನರಗುಂದದ ರೈತ ಎಲ್ಲಪ್ಪ ಭೀಮಪ್ಪ ಗಾಯಕವಾಡ(52) ಏಳು ಎಕರೆ ಜಮೀನಿದ್ದು ಕೃಷಿಗಾಗಿ ನಾಲ್ಕು ಲಕ್ಷ ಸಾಲಮಾಡಿದ್ದ. ಇದರ ಬಹುಪಾಲು ಖಾಸಗಿ ಧಣಿಗಳದ್ದು. ಫಸಲಿಗೂ ಬೆಲೆ ಇಲ್ಲದೇ ಸಾಲಗಾರರ ಬಾಧೆ ತಾಳಲಾರದೇ ಮಾರಿದ ಜಮೀನಿನ ಹಣವನ್ನು ಪೂರ ಧಣಿಗಳೇ ತೆಗೆದುಕೊಂಡಿದ್ದರಿಂದ ಸಂಸಾರ ಸಾಕಲು ಬೇರೆ ದಾರಿ ಕಾಣದೆ ಈ ರೈತ 6 ರಂದು ನೇಣು ಹಾಕಿಕೊಂಡು ಆತ್ಮಹತ್ಯೆಗೀಡಾಗಿದ್ದಾನೆ.

ಇಂತಹುದೇ ಹೃದಯವಿದ್ರಾವಕ ಘಟನೆ ನಡೆದಿರುವುದು ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಸೂಗೂರು(ಕೆ) ಗ್ರಾಮದ ರೈತ ಶಂಭುಲಿಂಗಪ್ಪ(55) ಎಂಬುವವನದ್ದು: ಆರು ಎಕರೆ ಜಮೀನಿದ್ದರೂ 1.50 ಲಕ್ಷ ಸಾಲ ತೀರಿಸಲ್ಯಾಗದೆ, ಉಪ ಜೀವನಕ್ಕೆ ಚಿಕ್ಕ ಹೋಟೆಲ್ ಇದ್ದರೂ ಸಾಕಾಗದೇ ಕೀಟನಾಶಕ ಕುಡಿದು ಸಾವನ್ನಪ್ಪಿದ್ದಾನೆ. ಈಗ ಕರ್ನಾಟಕದಲ್ಲಿ ಮತ್ತೇ ರೈತರು ಆತ್ಮಹತ್ಯೆಗೆ ಮೊರೆ ಹೋಗುತ್ತಿರುವ ಪ್ರವೃತ್ತಿ ತಲೆದೋರಿದೆ. ರಾಜ್ಯ ಸರ್ಕಾರ-ಕೇಂದ್ರ ಸರ್ಕಾರಗಳು ಕಣ್ಣೆತ್ತಿ ನೋಡುತ್ತಿಲ್ಲ. ಸಾಲದ ಬಾಧೆಯಿಂದ ತಪ್ಪಿಸುತ್ತಿಲ್ಲ. ಇದು ಕೇವಲ ಒಬ್ಬಿಬ್ಬರ ಪ್ರಶ್ನೆಯಲ್ಲ. ಇಡೀ ಸಮುದಾಯದ್ದೇ ಪ್ರಶ್ನೆ. ಸಾಲದ ಪ್ರಶ್ನೆ ವಿರುದ್ಧ ಪ್ರಬಲ ಆಂದೋಲನ ನಡೆಯಬೇಕು.

........ಆರ್ಥಿಕ ನೀತಿಗಳ ವಿರುದ್ಧ ಒಗ್ಗೂಡಿ ಹೋರಾಡಲು ನಿರ್ಧಾರ

ದೆಹಲಿಯಲ್ಲಿ ಜುಲೈ 241 ಪಾರ್ಲಿಮೆಂಟ್ ಚಲೋ, ರಾಜ್ಯದಲ್ಲಿ ರಾಜಧಾನಿ, ಹಾಗೂ ಜಿಲ್ಲೆಗಳಲ್ಲಿ ಮೆರವಣಿಗೆ

ಪುಟ 4 ರಿಂದ

ಮಾಡಲು ಹೊರಟಿದ್ದಾರೆ! ಜವಾಹರಲಾಲ್ ನೆಹರು ಅವರು ಸಾರ್ವಜನಿಕ ರಂಗದ ಉದ್ದಿಮೆಗಳನ್ನು ಆಧುನಿಕ ದೇವಾಲಯಗಳೆಂದು ಬಣ್ಣಿಸಿದ್ದರು. ಆದರೆ ಇಂದು ಸಾರ್ವಜನಿಕ ರಂಗವನ್ನೇ ವ್ಯವಸ್ಥಿತವಾಗಿ ಅಳಿಸಿಹಾಕಲು ಸಂಚು ನಡೆಸಲಾಗುತ್ತಿದೆ. 5,500 ಕೋಟಿ ರೂ. ಬೆಲೆಯ ಬಾಲ್ಕೊ ಕಾರ್ಖಾನೆಯನ್ನು ಕೇವಲ 551 ಕೋಟಿರೂ.ಗಳಿಗೆ ಸ್ಟರ್ ಲೈಟ್ ಕಂಪೆನಿಗೆ ಮಾರಾಟ ಮಾಡಿದಾಗ ಬಾಲ್ಕೊ ಕಾರ್ಮಿಕರು ತಮ್ಮ ಟ್ರೇಡ್ ಯೂನಿಯನ್ ಭಿನ್ನಭಿಪ್ರಾಯಗಳನ್ನು ಬದಿಗಿಟ್ಟು 67 ದಿನಗಳವರೆಗೆ ನಡೆಸಿದ ಹೋರಾಟ ದೇಶದ ಕಾರ್ಮಿಕ ವರ್ಗವನ್ನೇ ಬಡಿದೆಬ್ಬಿಸಿದೆ. ಖಾಸಗೀಕರಣವನ್ನು ತಡೆಯುವಲ್ಲಿ ಬಾಲ್ಕೊ ಕಾರ್ಮಿಕರು ಸೋತಿರಬಹುದು. ಆದರೆ ಅವರು ತಮ್ಮ ಧಿರೋದಾತ್ತವಾದ ಹೋರಾಟದ ಮೂಲಕ ದೇಶದ ಇಡೀ ಕಾರ್ಮಿಕ ವರ್ಗದ ಕಣ್ಣು ತೆರೆಯಿಸಿದ್ದಾರೆ. ಖಾಸಗೀಕರಣದ ದಾಳಿ ರಕ್ಷಣಾ ವಲಯಕ್ಕೂ ತಲುಪಿದೆ. ರಾಷ್ಟ್ರೀಯ ಭದ್ರತೆಗೆ ಬೆದರಿಕೆ ಒಡ್ಡಿದೆ. ಜುಲೈ 23 ಮತ್ತು 24 ರಂದು ರಕ್ಷಣಾ ವಲಯದ ಕಾರ್ಮಿಕರು ನಡೆಸಲು ಉದ್ದೇಶಿಸಿರುವ ಎರಡು ದಿನಗಳ ಮುಷ್ಕರವನ್ನು ಎಲ್ಲ ದೇಶಪ್ರೇಮಿಗಳು ಬೆಂಬಲಿಸಬೇಕೆಂದು ಡಾ। ಪಂಧೆ ಕರೆ ನೀಡಿದರು.

ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧರಾಗಿರಿ

ಆಮದು ವ್ಯಾಪಾರದ ಮೇಲಿನ ಪ್ರಮಾಣಾತ್ಮಕ ಮಿತಿಗಳನ್ನು ತೆಗೆದು ಹಾಕಲಾಗಿದೆ. ವಿದೇಶಗಳಿಂದ ಅಗ್ಗದ ಸರಕುಗಳು ನಮ್ಮ ಮಾರುಕಟ್ಟೆಯನ್ನು ತುಂಬುತ್ತವೆ. ಅಲ್ಲಿಯ ಸರಕುಗಳು ಅಷ್ಟು ಅಗ್ಗವಾಗಿ ಸಿಗುವಂತಾಗಲು ಅವುಗಳಿಗೆ ನೀಡಲಾಗುತ್ತಿರುವ ಸಬ್ಸಿಡಿಯೇ ಕಾರಣ. ನಾವು ನಮ್ಮ ರೈತರಿಗೆ, ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಬ್ಸಿಡಿ ನೀಡುವುದನ್ನು ಒಪ್ಪದ ಅಮೇರಿಕ, ಜಪಾನ್‌ನಂತಹ ರಾಷ್ಟ್ರಗಳು ತಮ್ಮ ಉತ್ಪನ್ನಗಳಿಗೆ ಭಾರೀ ಪ್ರಯಾಣದ ಸಬ್ಸಿಡಿ ನೀಡುವುದು ಯಾವ ನ್ಯಾಯ? ಮುಂದುವರೆದ ರಾಷ್ಟ್ರಗಳು ತಮ್ಮ ಆಮದುಗಳ ಮೇಲಿನ ಪ್ರಮಾಣಾತ್ಮಕ ನಿರ್ಬಂಧಗಳನ್ನು ತೆಗೆದುಹಾಕದೆ ಇರುವಾಗ ನಾವು ಮಾತ್ರ ಪ್ರಮಾಣಾತ್ಮಕ ನಿರ್ಬಂಧಗಳನ್ನು ಏಕೆ ತೆಗೆದುಹಾಕಬೇಕು? ಈ ಕ್ರಮದಿಂದ ನಮ್ಮ ಕೃಷಿ ನಾಶವಾಗುತ್ತಿದೆ. ಚಹ, ರಬ್ಬರ್ ಅಂತಹ ತೋಟದ ಬೆಳೆಗಳಿಗೆ ಭಾರಿ ಹಾನಿತಟ್ಟಿದೆ. ಅದರಂತೆಯೇ ನಮ್ಮ ಜವಳಿ, ಇಂಜನಿಯರಿಂಗ್ ಮೊದಲಾದ ಕೈಗಾರಿಕೆಗಳಿಗೆ ಭಾರೀ ಧಕ್ಕೆಯಾಗಿದೆ.

ನಿರುದ್ಯೋಗ ಸಿಕ್ಕಾಪಟ್ಟೆ ಬೆಳೆಯುತ್ತಿದೆ. ನಗರ ಪ್ರದೇಶದಲ್ಲಿ ಇಂದು 4 ಕೋಟಿ ನಿರುದ್ಯೋಗಿಗಳಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ 8 ಕೋಟಿ ಮೀರಿದೆ. ದೇಶ ತೀವ್ರ ಬಿಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿದೆ. ಮುಂದುವರೆದ ದೇಶಗಳಲ್ಲಿಯೂ ಇಂದು ಬಿಕ್ಕಟ್ಟು ವ್ಯಾಪಕವಾಗುತ್ತಿದೆ. ಅಲ್ಲಿ ಬಿಕ್ಕಟ್ಟು ಹೆಚ್ಚಾದರೆ ಅದರ ಪರಿಣಾಮ ನಮ್ಮ ದೇಶದ ಆರ್ಥಿಕತೆಯ ಮೇಲೆಯೂ ಆಗಲಿದೆ. ಆಗ ನಮ್ಮ ರಫ್ತು ವ್ಯಾಪಾರ ಕುಸಿಯಲಿದೆ. ಆದ್ದರಿಂದ ನಮ್ಮ ಮುಂದೆ ಬಂದು ನಿಂತಿರುವ ಆಪತ್ತು ಸಾಮಾನ್ಯವಾದುದಲ್ಲ. ಇದನ್ನು ತಡೆಯಬೇಕಾದರೆ ನಾವೆಲ್ಲರೂ ಒಂದುಗೂಡಲೇಬೇಕು. ದಾಳಿಗಿಂತ ನಮ್ಮ ಆಂದೋಲನ ಬಲಿಷ್ಠವಾದರೆ ಮಾತ್ರ ನಾವು ಗೆಲ್ಲಲು ಸಾಧ್ಯ. ಆದ್ದರಿಂದ ಅನುಭವದಿಂದ ಮೂಡಿಬಂದ ಈ ಐಕ್ಯತೆಯನ್ನು ಕಾಪಾಡಿಕೊಂಡು ಹೋಗುವುದು ಕಾರ್ಮಿಕ ವರ್ಗದ ಕರ್ತವ್ಯವಾಗಿದೆ.

ಕಾರ್ಮಿಕ ವರ್ಗದ 5 ಪ್ರಮುಖ ಬೇಡಿಕೆಗಳ ಆಧಾರದಲ್ಲಿ ಬೆಳೆದು ಬಂದಿರುವ ಈ ಹೋರಾಟವನ್ನು ಅದು ನಿರ್ಣಾಯಕ ಹಂತಕ್ಕೆ ತಲುಪುವತನಕ ನಾವು ವಿಶ್ರಮಿಸುವಂತಿಲ್ಲ. ಜುಲೈ 24ರಂದು ಸಂಸತ್ ಭವನದ ಎದುರು ನಡೆಯುವ ರ್‍ಯಾಲಿ ಚರಿತ್ರಾರ್ಹವಾಗಬೇಕಾಗಿದೆ. ಅಂದು ದೇಶದ ಎಲ್ಲಾ ರಾಜ್ಯಗಳ ರಾಜಧಾನಿಗಳಲ್ಲಿ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಮಿಕರ ಜಂಟಿ ರಣಕಹಳೆ ಪ್ರತಿಧ್ವನಿಸಬೇಕಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರು ಜುಲೈ 25 ರಂದು ನಡೆಸಲಿರುವ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ನೀಡಬೇಕಾಗಿದೆ. ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳು ಚರ್ಚಿಸಿ ಪ್ರಕಟಿಸುವ ದಿನದಂದು ರಾಷ್ಟ್ರವ್ಯಾಪಿ ಕೈಗಾರಿಕಾ ಮುಷ್ಕರ ಯಶಸ್ವಿಮಾಡಬೇಕಾಗಿದೆ. ದೇಶದ ಸ್ವಾತಂತ್ರ್ಯ, ಸಾರ್ವಭೌಮತೆ ಹಾಗೂ ನಮ್ಮ ಬದುಕಿನ ರಕ್ಷಣೆಗಾಗಿ ನಡೆಯಲಿರುವ ಈ ಚಾರಿತ್ರಿಕ ಹೋರಾಟಕ್ಕೆ ಸಿದ್ಧರಾಗೋಣ ಎಂದು ಡಾ। ಪಂಧೆಯವರು ತಮ್ಮ ಭಾಷಣವನ್ನು ಮುಕ್ತಾಯ ಮಾಡಿದರು.

ಅನಂತರ ಸಿಐಟಿಯುನ ವಿಜೆಕೆ ನಾಯರ್ ಚರ್ಚೆಗಾಗಿ ಕರಡು ಘೋಷಣೆಯೊಂದನ್ನು ಮಂಡಿಸಿದರು. ಎಐಟಿಯುಸಿಯ ಅನಂತ ಸುಬ್ಬರಾವ್ ಅನುಮೋದಿಸಿದರು. ಅಧ್ಯಕ್ಷೀಯ ಮಂಡಳಿಯ ಸದಸ್ಯರಲ್ಲದೆ ಎಐಟಿಯುಸಿಯ ಮಹದೇವನ್, ಬಿಎಂಎಸ್‌ನ ಶೇಷಾದ್ರಿ, ಜೆ.ಎ.ಎಫ್‌ನ ರಂಗದಾಸಪ್ಪ, ಎಲ್.ಐ.ಸಿ.ಯ ನಾಗೇಶ್, ಎಐಟಿಯುಸಿಯ ರಾಧಾ ಸುಂದರೇಶ್, ಮೊದಲಾದವರು ಕರಡು ಘೋಷಣೆಯನ್ನು ಬೆಂಬಲಿಸಿ ಮಾತನಾಡಿದರು. ಘೋಷಣೆಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಆರಂಭದಲ್ಲಿ ಐ.ಎನ್.ಟಿ.ಯು.ಸಿ.ಯ ಎಚ್. ರಾಮಚಂದ್ರ ಸ್ವಾಗತಿಸಿದರು. ಸಿಐಟಿಯುನ ಕೆ.ವಿ. ಶ್ರೀನಿವಾಸ ಕಾರ್ಯಕ್ರಮ ನಿರೂಪಣೆ ಮಾಡಿದರು. ಕೊನೆಯಲ್ಲಿ ಯು.ಟಿ.ಸಿ.ಸಿ.ಯ ಆರ್. ಶಿವಶಂಕರ ವಂದಿಸಿದರು.

ದುಡಿವ ಜನರನ್ನು ಅಣಿನೆರೆಸಿದ ಸಮಾವೇಶ



ಗುಲ್ಬರ್ಗಾದಲ್ಲಿ ಕಾಂ. ಸೂರಿ, ಎಸ್. ಕೆ. ಕಾಂತ

ಗೋದಾನ

ಕಥೆ

"ಆಕಳ ದಾನದ ಕರುಣಾಜನಕ ಸನ್ನಿವೇಶದ ಆನಂತರ ಶಾಸ್ತ್ರಿ, ಅವರ ಮಕ್ಕಳು, ಆಕಳು-ಕರು ಸಹಿತ ಉಲ್ಲಾಸದಿಂದ ನಗುತ್ತಾ ಮಾತನಾಡುತ್ತಾ ತಮ್ಮ ಮನೆ ಕಡೆ ನಡೆದರು. ಅದನ್ನ ನೋಡತ್ತಾ ಗಂಗ್ಯಾ ಮತ್ತು ಅವನ ಕುಟುಂಬ ಕಣ್ಣೀರು ಸುರಿಸುತ್ತಾ ನಿಂತಿತ್ತು...."

ವಿಭಿನ್ನ ಬದುಕಿನ, ವ್ಯಕ್ತಿತ್ವಗಳ ಸಂಘರ್ಷಮಯ ಸನ್ನಿವೇಶಗಳನ್ನು, ವ್ಯವಸ್ಥೆಯೊಂದರ ಕ್ರೂರ ಬೇರು-ಜಾಲಗಳನ್ನು, ತಣ್ಣಗೆ ?ಪ್ರಶ್ನಾರ್ಹ ರೀತಿಯಲ್ಲಿ ಲೇಖಕರು ಮೂಡಿಸಿದ್ದಾರೆ. ಹೈದ್ರಾಬಾದ್ ಕರ್ನಾಟಕದದ್ದೇ ಭಾಷೆಯಿಂದ ಜೀವಂತಿಕೆ ತುಂಬಿದ್ದಾರೆ ಖ್ಯಾತ ಸಾಹಿತಿ ಶಾಂತರಸರವರು.

ಎಡಗೈಯನ್ನು ದೇಹದಿಂದ ತುಸುದೂರ ಎತ್ತಿ ಹಿಡಿದು ಬಲಗೈಯಲ್ಲಿ ತಂಬಿಗೆ ಹಿಡಿದು ಹಳ್ಳದ ತಿರುವಿನ ಮರೆಯಿಂದ ಶಾಸ್ತ್ರಿಗಳು ಲಟಪಟ ಬಂದರು. ಕಾಲಲ್ಲಿಯ ಮೊಚ್ಚೆಗಳು ಹಿಂಬದಿಯಿಂದ ಉಸುಕನ್ನು ಚಿಮ್ಮುತ್ತಿದ್ದವು. ಮೈ ಬೆವರಿ ಹೊದ್ದ ಸೆಲ್ಲೆ ಅಲ್ಲಲ್ಲಿ ಮೈಗೆ ಅಂಟಿಕೊಂಡಿತ್ತು. ನುಣ್ಣಗೆ ಬೋಳಿಸಿದ ತಾಮ್ರದ ತಲೆಯ ನಡುವೆ ಬಿಳಿ ಜುಟ್ಟು ಸಿರಿಪೇಚಿನಂತೆ ಅಲುಗಾಡಿ ಗಾಳಿಯ ದಿಕ್ಕನ್ನು ಸೂಚಿಸುತ್ತಿತ್ತು. ಆಯಾಸಪಡುತ್ತಾ ಶಾಸ್ತ್ರಿಗಳು ಹಳ್ಳದ ದಂಡೆಯನ್ನು ಏರಿದರು. ಅಲ್ಲೇ ದಂಡೆಗಿದ್ದ ಬೇವಿನ ಮರದ ಕೆಳಗೆ ಆಕಳ ಮೇಯಿಸುತ್ತಾ ಗಂಗ್ಯಾ ನಿಂತಿದ್ದ. ತುಂಬು ಮೈಯ ಈಯಲಾದ ಆಕಳು. ಶಾಸ್ತ್ರಿಗಳ ಕಂಗಳು ಆಕಳ ಮೈತುಂಬ ಓಡಾಡಿದುವು. "ಏನ್ ಗಂಗ್ಯಾ, ಆಕಳ ತುಂಬ ಈಯಕಾಗ್ಯಾದಲ್ಲೋ?"

"ಹೌದ್ ದೇವ್ರೆ, ನಾಳೆ ಹಂಪಿ ಉಣ್ಮೆ ಆದ್‌ಮ್ಯಾಲೆ ಈಬೌದು."

"ಹೋರಿಗರ ಈದ್ರೆ ನಿನ್ ದೈವ" ಎಂದು ಶಾಸ್ತ್ರಿಗಳು ಗಂಗ್ಯಾನ ಕಡೆ ನೋಡಿದರು. ಅವನು ಮತ್ತು ಅವನ ಆಕಳು ಗಿಡದ ನೆರಳಲ್ಲಿ ನಿಂತದ್ದು ನೋಡಿ ಶಾಸ್ತ್ರಿಗಳಿಗೆ ಸಿಟ್ಟು ಬಂತು. 'ಬಿಸಲಾಗ ಆಯಾಸಪಟಗಂತ ನಿಂತೀನಿ, ತಾನು ಆಕಡೆ ಸರ್ದು ನೆರಳಿಗೆ ಬರ್‍ರಿ ಅನವಲ್ಲನಲ್ಲ ಈ ಲೋಡಿಮಗ ಗಂಗ್ಯಾ, ಕೀಳು ಜಾತೆವ' ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾ ಮನೆಯ ಕಡೆಗೆ ಕಾಲುಕಿತ್ತರು. ಶಾಸ್ತ್ರಿಗಳು ತುಸು ದೂರ ಹೋಗಿದ್ದರು. "ದೇವ್ರೇ, ದೇವ್ರೇ" ಅನ್ನುತ್ತ ಗಂಗ್ಯಾ ಓಡಿ ಬಂದ. ತಿರುಗಿ ನಿಂತು 'ಏನು?' ಎಂದರು ಶಾಸ್ತ್ರಿಗಳು.

"ನನ್ ದೊಡ್ಮಗ ಅನಿಮ್ಯಾಗ ಆರೇಳು ತಿಂಗಳಿಂದ ಜರಾ ಬುಡವಲ್ಲು, ಉಡುಗ ಸೊರಗಿ ಕಡ್ಯಾಗ್ಯಾನ. ಆ ಸರಕಾರಿ ದವಾಖಾನಿ ಗುಳಿಗಿ ನುಂಗಿ ನುಂಗಿ ಸಾಕಾಯ್ತು. ಸಾವುಕಾರ ಹತ್ರ ಸಾಲ ತಂದು ಏಳೆಂಟು ಸೂಜಿನೂ ಮಾಡಿಸ್ದೆ, ಗುಣಾಗವಲ್ದು. ನಾಳೆ ಆಯ್ತಾರ ಬರ್ತೀನಿ, ತಟಗು ಒತಿಗಿ ತೆಗ್ದು ಏಳ್ರಿ ದೇವ್ರೇ."

"ಈಗ ನೆನಪಾಯ್ತೇನ್ಲೇ ಗಂಗ್ಯಾ ನಮ್ದು? ನಾ ಕೊಡಾ ಔಷಧ ಏನ್ ಕಮ್ಯಾಗ್ಯಾದ? ಸುಳ್ಳೆ ಆ ಸರ್ಕಾರಿ ಡಾಕ್ಟರತ್ರ ಹೋಗಿ ಕೇಳಿದಷ್ಟು ರೊಕ್ಕ ಕೊಟ್ಟು ಸಾಯ್ತೀರಿ. ನಿನ್ ಮಗನಿಗೆ ಕ್ಷಯಾ ಆಗ್ಯಾದಂತನಸ್ತದ. ನಾಳೆ ಆಯ್ತಾರ ಬಾ, ಅಂತ್ರ ಕಟ್ತೀನಿ; ನೀರ್ ಮಂತ್ರಿಸಿ ಕೊಡ್ತೀನಿ. ಒಂದೀಟು ಲೇಹ್ಯಾನೂ ಕೊಡ್ತೀನಿ; ಇದರಾಗ ಬಂಗಾರದ ಅದುರು ಹಾಕಿರ್ತದ, ನೋಡುವಂತಿ, ಒಂತಿಂಗಳದಾಗ ಹನಿಮ್ಯಾ ಹೆಂಗಾಗ್ತಾನ? ಎಲ್ಲಾ ಕೂಡಿ ಹದಿನೈದು ರೂಪಾಯಿ ಆಗ್ತದ; ತರದು ಮರಿಬ್ಯಾಡ" ಎಂದು ಶಾಸ್ತ್ರಿಗಳು ಮನೆ ದಾರಿ ಹಿಡಿದರು.

ಊರಿಗೆ ಸರ್ಕಾರಿ ಆಸ್ಪತ್ರೆ ಬರುವುದಕ್ಕಿಂತ ಮುಂಚೆ ಜನರಿಗೆ ಶಾಸ್ತ್ರಿಗಳೇ ದೇವ ಧನ್ವಂತರಿಯಾಗಿದ್ದರು. ಸುತ್ತು ಎಂಟು ಹಳ್ಳಿಯಲ್ಲಿ ಅವರ ಜ್ಯೋತಿಷ್ಯ ಪ್ರಸಿದ್ಧ. ಜ್ಯೋತಿಷ್ಯ ಕೇಳಲು ಬಂದವರಿಗೆ ಔಷಧವನ್ನೂ ಕೊಟ್ಟು ಕಳಿಸುತ್ತಿದ್ದರು. ಅದೂ ಇದೂ ಆಗಿದೆ ಎಂದು ಹೇಳಿ ಔಷಧ ಕೇಳಲು ಬಂದವರಿಗೆ ಜೋತಿಷ್ಯವನ್ನೂ ಹೇಳುತ್ತಿದ್ದರು; ಗ್ರಹಚಾರ ನೆಟ್ಟಗಿಲ್ಲ, ಆದಕ್ಕೇ ಈ ಜಡ್ಡು ಜಾಪತ್ರಿ ಎಂದು. ಇವೆರಡಲ್ಲದೆ ಎಲ್ಲರಿಗೂ ನೀರು ಮಂತ್ರಿಸಿ ಕೊಡುವುದು ಅವರ ವೈಶಿಷ್ಟವಾಗಿತ್ತು. ಆ ನೀರನ್ನು ಕುಡಿದರೆ ಎಂಥ ರೋಗವಿದ್ದರೂ ವಾಸಿಯಾಗುವುದು, ಎಂಥ ಗ್ರಹಚಾರವಿದ್ದರೂ ಬಿಟ್ಟು ಹೋಗುವುದು ಎಂದು ವದಂತಿ ಹಬ್ಬಿತ್ತು.

ಶಾಸ್ತ್ರಿಗಳು ಮನೆ ಮುಟ್ಟಿ ಹೊಸ್ತಿಲ ಒಳಗೆ ಕಾಲು ಹಾಕಿದರು. ಹೆಂಡತಿಯ ವಟಗುಟ್ಟುವಿಕೆ ಪ್ರಾರಂಭವಾಯ್ತು. "ಬ್ಯಾಸ್ಗಿ ಸಮೀಪ್ ಬಂತು. ಮನೆ ತುಂಬ ಮಕ್ಳು ಒಣದು ತಿನ್ಬೇಕೇನು? ಒಂದೀಟು ಹೈನ ಬ್ಯಾಡೇನು? ಹ್ವಾದ ವರ್ಷನೂ ಹಿಂಗೇ ಮಾಡಿದ್ರಿ; ಬ್ಯಾಸಿಗ್ಯಾಗ ಮುಕ್ಳು ಹೈನಿಲ್ದ ಒಣದು ತಿಂದು ಹೈರಾಣಾದ್ವು. ಈ ವರ್ಷವೂ ಹಂಗಾಗ್ಬಾರ್ದು, ಒಂದ್ ಈದ ಎಮ್ಮೇನೋ ಆಕಳನೋ ತರ್‍ರಿ ಅಂತ ತಿಂಗಳದಿಂದ ಬಡಕಂತೀನಿ, ಅದು ನಿಮ್ಮ ಕಿವ್ಯಾಗ ಬಿದ್ರಲ್ಲ..."



ಥಟ್ಟನೆ ಶಾಸ್ತ್ರಿಗಳಿಗೆ ಗಂಗ್ಯಾನ ಆಕಳು ನೆನಪಾಯ್ತು; ತುಂಬಿ ಈಯಲಾದ ಆಕಳು. ಆದಿತ್ಯವಾರ 15 ರೂಪಾಯಿ ಶಾಸ್ತ್ರಿಗಳ ಮುಂದಿಟ್ಟು, ಗಂಗ್ಯಾ ಮಗನಿಗೆ ಅಂತ್ರ ಕಟ್ಟಿಸಿದ. ಶಾಸ್ತ್ರಿಗಳು ಲೇಹ್ಯ ಕೊಟ್ಟರು; ನೀರು ಮಂತ್ರಿಸಿಕೊಟ್ಟರು. ಇಷ್ಟಲ್ಲದೇ ಒಂದು ವ್ರತವನ್ನೂ ಹೇಳಿದರು.

"ಗಂಗ್ಯಾ ನಿನ್ ಮಗ ಐದ್ ಶನಿವಾರ ವ್ರತಾ ಮಾಡ್ಬೇಕು. ಏನಪಾ ಅಂದ್ರೆ, ಕರೇ ಎಳ್ಳು, ಒಂದೀಟು ಕರೇದಾರ, ಹತ್ ಪೈಸೆ ಕೂಡ್ಸಿ ಐದು ಶನಿವಾರ ಹನುಮಂತ ದೇವ್ರ ಮುಂದಿಟ್ ಬರ್‌ಬೇಕು; ಒಂದೇರಡ್ ವಾರ ತಿರಗದರಾಗ ನೋಡು, ಹನಿಮ್ಯಾ ಹ್ಯಂಗಾಗ್ತಾನ? ಜಡ್ಡು ಬುಟ್ಟು ಮೈ ತುಂಬಿಕೆಂತಾನ."

ಇನ್ನೂ ಮೂರು ಶನಿವಾರ ಉಳಿದಿದ್ದುವು; ಹನಿಮ್ಯಾ ಅವುಗಳನ್ನು ಪೂರ್ತಿ ಮಾಡದೆ ಈ ಲೋಕ ಬಿಟ್ಟು ಹೋದ.

ಏಳೆಂಟು ದಿನ ಆಗಿರಬೇಕು, ಹನಿಮ್ಯಾ ಸತ್ತು. ಶಾಸ್ತ್ರಿಗಳ ಮನೆ ಕಸ ಮುಸುರೆ ಮಾಡುವ ರಂಗಮ್ಮ, "ಹನಿಮ್ಯಾ ಸತ್ ವ್ಯಾಳ್ಯಾ ಬೇಸಿಲ್ಲಂತ, ಶಾಸ್ತ್ರಿಗಳು ಹೇಳತಿದ್ರು. ಸುಮ್ನೆ ಯಾಕ್ ಕುಂತಿ? ಶಾಸ್ತ್ರಿಗಳನ್ನು ಕೇಳಿ ಏನಾದ್ರೂ ಮಾಡು" ಎಂದಳು, ಗಂಗ್ಯಾನಿಗೆ ಅವನ ಮನೆತನಕ ಹೋಗಿ.

ಗಂಗ್ಯಾಗ ಚಿಂತಿ ಬಿತ್ತು. ದೊಡ್ಡ ಮಗ ಸತ್ತದ್ದೊಂದು, ವ್ಯಾಳ್ಯಾ ನೆಟ್ಟಗಿಲ್ಲದ್ದೊಂದು. ಕಾಲೆಳೆದುಕೊಂಡು ಶಾಸ್ತ್ರಿಗಳ ಮನೆಗೆ ಬಂದ.

ಹೊತ್ತಿಗಿ ತೆಗೆದು ಶಾಸ್ತ್ರಿಗಳು ಹೇಳಿದರು, "ನೋಡಪಾ ಗಂಗಣ್ಣಾ, ನಿನಗ ವ್ಯಾಳ್ಯಾ ಬೇಸಿಲ್ಲ; ಬಲಾಚಾರ ಇಲ್ಲ. ಕಷ್ಟದ ಕಾಲ. ಹನಿಮ್ಯಾ ಸತ್ ಮುಹೂರ್ತ ಚೆನ್ನಾಗಿಲ್ಲ. ಏನಾದ್ರೂ ಶಾಂತಿ ಮಾಡಸ್ಬೇಕು."

"ಏನ್ ಮಾಡಸ್ಬೇಕು ದೇವ್ರೇ?"

"ದೇವ್ರ ಪೂಜೆ ಮಾಡಸ್ಬೇಕು, ನೂರಾರು ಜನ್ರಿಗೆ ಊಟ ಮಾಡಸ್ಬೇಕು. ಮತ್ತೆ ಆರ್ ತಿಂಗಳತನಕ ಮನೆ ಬಿಡ್‌ಬೇಕು."

"ಇದೆಲ್ಲಾ ನನ್ ಕೈಯಿಂದ ಎಂಗಾಗ್ತದ ದೇವ್ರೇ? ಏನಿಲ್ಲಂದ್ರೂ ಐದಾರ್ ನೂರಾದ್ರೂ ಬೇಕು. ಮನೆ ಬುಟ್ಟು ಎಲ್ಲಿರ್ಲಿ?" ದೈನ್ಯದಿಂದ ನುಡಿದ ಗಂಗ್ಯಾ.

"ನಿನ್ ಕಷ್ಟ ಹೇಳಿಕಂತ ಕುಂತ್ರೆ ಗ್ರಹಚಾರ ಕೇಳ್ತದೇನೋ?"

"ಅದೇನು ಖರೆ. ಅದ್ರೆ ಬೇರೆ ಏನಾದ್ರೂ ಇಲ್ಲೇನ್ ದೇವ್ರೇ? ನನ್ನ ಹೈಸೆತ್ತಿನಲ್ಲಿ ಅಗಂತಾದ್ದು."

"ಯಾಕಿಲ್ಲ? ಶಾಸ್ತ್ರದಾಗ ಬೇಕಾದಷ್ಟು ದಾರಿ ಅವ. ನೋಡಪಾ ಗಂಗಣ್ಣಾ, ಎಲ್ಲಕ್ಕಿಂತ ದೊಡ್ ಶಾಂತಿ ಅಂದ್ರ ಈದ ಆಕಳನ್ನು ಕರಸಹಿತ ದಾನ ಕೊಡದು. ಹ್ಯಂಗಿದ್ರೂ ನಿನ್ ಮನ್ಯಾಗ ಈದ ಆಕಳ ಆದ. ಅದನ್ನ ದಾನ ಮಾಡಿದ್ರೆ ದೇವ್ರ ಪೂಜೆ ಮಾಡಸದು ಬೇಕಿಲ್ಲ, ಉಣಸದು ಬೇಕಿಲ್ಲ, ಮನೆ ಬಿಡದು ಬೇಕಿಲ್ಲ."

"ಈದ ಅಕ್ಯೇನೂ ಮನ್ಯಾಗಾದ ದೇವ್ರೇ, ಅದ್ರೆ ಈ ಬ್ಯಾಸಿಗ್ಯಾಗ ಮಕ್ಳಳೀಟು ಐನ ಉಣತಿದ್ವು. ಅದನ್ನ ಕೊಟ್ರೆ ಅವ್ರ ಬಾಯಾಗ ಮಣ್ಣಾಕಿದಂಗ" ಎಂದ ಗಂಗ್ಯಾ.

"ಅದನ್ನ ದಾನ ಕೊಡದಿದ್ರೆ ನೀವು ಮಣ್ಣಾಗ ಸೇರ್‌ಬೇಕಾಗ್ತದ. ನೆನಪಿಡು ಸತ್ ಮುಹೂರ್ತ ಕೆಟ್ಟದು; ಮೃತ್ಯುಯೋಗ ಆದ. ಮೂರು ಜಾನುವಾರು, ಇಬ್ಬರು ಮನಿಸ್ಯಾರು ಖಂಡಿತ ಸಾಯ್ತಾರ."

ಗಂಗ್ಯಾನ ಎದೆ ಧಸಕ್ಕೆಂದಿತು. ಗೋದಲೆಗೆ ಹೊಂದಿರುವ ಪಡಸಾಲೆ ಜಗ್ಗಿದ್ದು ನೆನಪಾಯ್ತು. ಮಳೆಗಾಲ್ದಾಗ ಬಿದ್ರೆ? ಅಲ್ಲೇ ಮಕ್ಳುಂಬದು, ಅಲ್ಲೇ ದನ ಕಟ್ಟದು. ಗಂಗ್ಯಾನ ಮನಸ್ಸಿನಲ್ಲಿ ಮೂಡಿದ ವಿಚಾರವನ್ನೇ ಶಾಸ್ತ್ರಿಗಳು ಹೇಳಿದರು. "ನಿನ್ ಮನೆ ಹಳೇದು, ಅಂಕಣ ಪಟ್ಯಾಗ ಜಗ್ಯದಂತ ರಂಗವ್ವ ಹೇಳತಿದ್ಲು ಮಳೆಗಾಲ್ದಾಗ ಬಿತ್ತಂದ್ರ"

"ಆಕಳ ದಾನ ಮಾಡಿದ್ರೆ ಮನೆ ಬುಳಂಗಿಲ್ಲೇನ್ ದೇವ್ರೆ?"

"ಥೂ ಬುದ್ದಿಗೇಡಿ ಲೋಡಿ ಮಗ್ನೆ, ಎಂಥಾ ಮಾತ್ ಕೇಳ್ತಿ? ಗೋದಾನ ಅಂದ್ರೆ ಏನ್ ತಿಳಕಂಡಿದ್ದಿ? ಬರಾ ಸಾವನ್ನ ದೂರ್ ಮಾಡ್ತದ; ಬುಳಾ ಮನ್ನೆನ್ನ ಎತ್ತಿ ಹಿಡಿತ್ಯದ. ಕಷ್ಟನ್ನ ಹಂಗ ಸರಿಸಿ ಬಿಡ್ತದ. ಏನ್ ತಿಳ್ದಿದ್ದಿ?"

"ಆಗ್ಲಿ ದೇವ್ರೇ, ಆಕಳ ದಾನ ಮಾಡ್ತೀನಿ. ಯಾರಿಗೆ ಮಾಡ್ಬೇಕು?"

"ನನ್ ದೊಡ್ಮಗ ರಾಮಣ್ಣಗ ಮಾಡಲ್ಲ; ಯಾರಿಗ್ಯಾಕ ಮಾಡ್ತಿ? ರಾಮಣ್ಣಗ ಬರ್ಲಾರ್ದ ಮಂತ್ರ ಅಲ್ಲ. ಇಂತದರಾಗ ಅವಾ ಪಕ್ಕಾ ಹುಷ್ಯಾರಿ."

ಶನಿವಾರ ಬೆಳಿಗ್ಗೆ ಹನುಮಂತ ದೇವರ ಗುಡಿಯ ಮುಂದೆ ಗೋದಾನ ನಡೆಯಿತು. ಆಕಳನ್ನು, ಅದರ ಹೋರಿಗರುವನ್ನು ಸ್ವಚ್ಛ ಮೈದೊಳೆದು ಗಂಗ್ಯಾ ತನ್ನ ಹೆಂಡತಿ ಮಕ್ಕಳೊಂದಿಗೆ ಗುಡಿಗೆ ಬಂದ. ಹನುಮಂತ ದೇವರ ಪೂಜೆ ನಡೆಯಿತು. ಗೋಪೂಜೆಯಾಯಿತು. ಶಾಸ್ತ್ರೋಕ್ತವಾಗಿ ಗೋದಾನ ಕಾರ್ಯಕ್ರಮ ನಡೆಯಿತು. ಬರೇ ಆಕಳ ದಾನ ಮಾಡಬಾರದೆಂದು ಗಂಗ್ಯಾನಿಂದ ಐದು ರೂಪಾಯಿ ಬಂದಗಳನ್ನೂ ಬಿಚ್ಚಲಾಯಿತು.

ಶಾಸ್ತ್ರಿಗಳ ದೊಡ್ಡ ಮಗ ಆಕಳ ಹಗ್ಗ ಹಿಡಿದುಕೊಂಡು ಮನೆ ದಾರಿ ಹಿಡಿದ; ಇನ್ನೊಬ್ಬ ಮಗ ಹೋರಿಗರುವನ್ನು ಎತ್ತಿ ಎದೆಗವಚಿಕೊಂಡು ಅಣ್ಣನ ಹಿಂದೆ ನಡೆದ. ಇನ್ನುಳಿದ ನಾಲ್ಕು ಮಕ್ಕಳು ಮತ್ತು ಶಾಸ್ತ್ರಿಗಳು ಅವರ ಸುತ್ತುವರಿದು ನಡೆದರು. ಗಂಗ್ಯಾನ ಸಣ್ಣ ಮಗ, "ಆ ಕರ ನಂದು ಒಯ್ ಬ್ಯಾಡ" ಎಂದು ಅಳತೊಡಗಿದ; ಕಸಿದುಕೊಳ್ಳಲು ಹೋದ. ಗಂಗ್ಯಾ ಅವನನ್ನು ಹಿಂದಕ್ಕೆಳೆದುಕೊಂಡ.

ಶಾಸ್ತ್ರಿ, ಅವರ ಮಕ್ಕಳು, ಆಕಳು ಕರು ಸಹಿತ ಉಲ್ಲಾಸದಿಂದ ನಗುತ್ತ ಮಾತಾಡುತ್ತ ತಮ್ಮ ಮನೆಯ ಕಡೆಗೆ ನಡೆದರು. ಅದನ್ನು ನೋಡುತ್ತ ಗಂಗ್ಯಾ ಮತ್ತು ಅವನ ಕುಟುಂಬ ಕಣ್ಣೀರು ಸುರಿಸುತ್ತ ನಿಂತಿತ್ತು.

○

ಬ್ರಿಟನ್‌ನಲ್ಲಿ ಲೇಬರ್ ವಿಜಯ

ಬದಲಾಗುತ್ತಿರುವ ಬ್ರಿಟಿಷ್ ರಾಜಕೀಯ ವಾತಾವರಣ

ಶರತ್‌ಚಂದ್ರ


ಇತ್ತೀಚೆಗೆ ಬ್ರಿಟನ್‌ನಲ್ಲಿ ನಡೆದ ಚುನಾವಣೆಯಲ್ಲಿ ಲೇಬರ್ ಪಕ್ಷ ವಿಜಯ ಪಡೆದು ಎರಡನೇ ಬಾರಿ ಆಯ್ಕೆಯಾಗಿದೆ. ಲೇಬರ್ ಸತತ ಎರಡನೇ ಬಾರಿಗೆ ಆಯ್ಕೆಯಾಗುತ್ತಿರುವುದು ಇದೇ ಮೊದಲ ಸಲವಂತೆ. ಆದರೆ ಈ ಚುನಾವಣೆಗಳು ಬ್ರಿಟಿಷ್ ರಾಜಕೀಯ ವಾತಾವರಣದ ತೀವ್ರ ಬದಲಾವಣೆಗಳನ್ನು ಎತ್ತಿತೋರಿಸಿದೆ. ಲೇಬರ್ ವಿಜಯ ತನ್ನ ಬೆಂಬಲ ಉಳಿಸಿ ಅಥವಾ ಬೆಳೆಸಿ ಸಾಧಿಸಿಲ್ಲ. 80 ವರ್ಷಗಳಲ್ಲೇ ಅತ್ಯಂತ ಕನಿಷ್ಟ ಮತದಾನ, ಮತದಾರನ ನಿರ್ಲಕ್ಷ್ಯ ತೀವ್ರವಾಗಿ ಕಂಡು ಬಂದ ಚುನಾವಣೆ ಇದು. ಟೋನಿ ಬ್ಲೇರ್‌ರ 'ಹೊಸ ಲೇಬರ್' ಘೋಷಣೆ ಅಡಿಯಲ್ಲಿ ದಶಕಗಳಿಂದ ಕಾರ್ಮಿಕ ವರ್ಗ ಗೆದ್ದುಕೊಂಡ ಕಲ್ಯಾಣ ರಾಜ್ಯ ಮತ್ತು ಸಾರ್ವಜನಿಕ ಸೇವೆಗಳನ್ನು ಖಾಸಗೀಕರಿಸಿ ಕಾರ್ಮಿಕ ವರ್ಗದಿಂದ ದೂರ ಹೋಗುತ್ತಿದೆ. ಈ ಚುನಾವಣೆಯಲ್ಲಿ ಕಂಡುಬಂದ ಬದಲಾಗುತ್ತಿರುವ ಬ್ರಿಟಿಷ್ ರಾಜಕೀಯ ವಾತಾವರಣದ ಬಗ್ಗೆ ಬೆಳಕು ಚೆಲುತ್ತದೆ ಈ ಲೇಖನ.

ಬ್ರಿಟನ್‌ನಲ್ಲಿ ನಡೆದ ಚುನಾವಣೆಯಲ್ಲಿ ಲೇಬರ್ ಪಕ್ಷ ಎರಡನೇ ಬಾರಿ ಆರಿಸಿ ಬಂದಿದೆ. ಹತ್ತಿರ ಹತ್ತಿರ ಮೂರನೇ ಎರಡು ಬಹುಮತ ಸಾಧಿಸಿದೆ ಪಾರ್ಲಿಮೆಂಟಿನಲ್ಲಿ. ಸತತವಾಗಿ ಎರಡನೇ ಬಾರಿ ಲೇಬರ್ ಚುನಾಯಿತವಾಗುತ್ತಿರುವುದು ಇದೇ ಮೊದಲನೇ ಬಾರಿಯಂತೆ. 659 ಸೀಟಿನ ಪಾರ್ಲಿಮೆಂಟಿನಲ್ಲಿ ಲೇಬರ್‌ಗೆ 167 ಸೀಟುಗಳ ಬಹುಮತ ಪಡೆದಿದೆ. ಲೇಬರ್ ಶೇಕಡಾ 42 ಮತ ಪಡೆದಿದೆ. ಟೋರಿ ಶೇ 33,ಲಿಬರಲ್ ಶೇ 19 ಮತಗಳನ್ನು ಪಡೆದಿದೆ. ಮೊದಲ ನೋಟಕ್ಕೆ ಇವೆಲ್ಲಾ ಲೇಬರ್‌ಗೆ ಭಾರಿ ವಿಜಯ ಬಂದಂತೆ ಕಾಣಬಹುದು. ಆದರೆ ಚುನಾವಣೆಯ ಇನ್ನಷ್ಟು ವಿವರಗಳನ್ನು ನೋಡಿದರೆ ಲೇಬರ್ ವಿಜಯ ಅಷ್ಟು ಅಭೂತಪೂರ್ವವಾಗಿ ಕಾಣುವುದಿಲ್ಲ. ಮಾತ್ರವಲ್ಲ ಬ್ರಿಟಿಷ್ ರಾಜಕೀಯ ವಾತಾವರಣ ತೀವ್ರವಾಗಿ ಬದಲಾಗುತ್ತಿರುವುದು ಕಂಡುಬರುತ್ತದೆ.

ಈ ಚುನಾವಣೆಯಲ್ಲಿ ಮತದಾನದ ಶೇಕಡಾವಾರು ಕಳೆದ 80 ವರ್ಷಗಳಲ್ಲೇ ಅತ್ಯಂತ ಕನಿಷ್ಟವಾಗಿತ್ತು. ಹಿಂದೆ ಬ್ರಿಟಿಷ್ ಮತದಾನದ ಶೇಕಡಾವಾರು 70 ರಿಂದ 80 ರ ಸುಮಾರು ಇದ್ದರೆ, ಈ ಚುನಾವಣೆಯಲ್ಲಿ ಶೇಕಡಾ 72 ಮತದಾನವಾಗಿತ್ತು. ಲೇಬರ್ ಒಟ್ಟು ಮತದಾರರ ಶೇಕಡಾ 25 ಮತ ಪಡೆದರೆ ಸುಮಾರು ಶೇಕಡಾ 30 ಮತದಾರರು ಮತ ಚಲಾಯಿಸಲಿಲ್ಲ. ಗೆದ್ದ ಪಕ್ಷ ಇಷ್ಟು ಕಡಿಮೆ ಮತ ಪಡೆಯುವುದು, ಮತ ಚಲಾಯಿಸದವರ ಸಂಖ್ಯೆ ಗೆದ್ದ ಪಕ್ಷ ಮತದಾರರಿಗಿಂತ ಜಾಸ್ತಿ ಇರುವ ಈ ವಿಚಿತ್ರ ಪರಿಸ್ಥಿತಿ ಇದೇ ಮೊದಲು. 1918 ರ ನಂತರ ಅಂದರೆ ಕಳೆದ 83 ವರ್ಷಗಳಲ್ಲಿ ಇದು ಅತ್ಯಂತ ಕಡಿಮೆ ಮತದಾನದ ಚುನಾವಣೆ. ಇದು ಮಾತ್ರವಲ್ಲ ಲೇಬರ್ ಪಕ್ಷದ ಮತಗಳು 1997 ರ ಚುನಾವಣೆಗಿಂತ 30 ಲಕ್ಷ ಕಡಿಮೆಯಾಗಿದೆ. 1992 ರಲ್ಲಿ ಲೇಬರ್ ಪಕ್ಷ ಸೋತಾಗ ಪಡೆದ ಮತಗಳಿಗಿಂತಲೂ 8 ಲಕ್ಷ ಕಡಿಮೆ.

ಮತದಾರನ ನಿರ್ಲಕ್ಷ್ಯ?

ಅತ್ಯಂತ ಕಡಿಮೆ ಮತದಾನ ಮತ್ತು ಲೇಬರ್ ಮತಗಳು ಕಡಿಮೆಯಾಗಿರುವುದು - ಇವೆರಡು ಬ್ರಿಟಿಷ್ ರಾಜಕಾರಣದಲ್ಲಿ ತೀವ್ರ ಬದಲಾವಣೆಗಳ ಪ್ರತೀಕ. 1918 ರ ಚಾರಿತ್ರಿಕ ಕನಿಷ್ಠ ಮತದಾನಕ್ಕಿಂತ ಕಡಿಮೆ ಮತದಾನ ಗಂಭೀರ ಬೆಳವಣಿಗೆ. ಹೆಚ್ಚಿನ ಕಾರ್ಮಿಕರು ಬಹುಸಂಖ್ಯಾತರಾಗಿರುವ ನಗರ ಪ್ರದೇಶಗಳಲ್ಲಿ ಅತ್ಯಂತ ಹೆಚ್ಚಿನ ಮತದಾನದ ಕುಸಿತ ಕಂಡುಬಂದಿದೆ. ಲೇಬರ್ ಕೋಟೆಯಾದ ಲಿವರ್‌ಪೂಲ್ ಅತ್ಯಂತ ಕಡಿಮೆ ಮತದಾನ ಕಂಡ ಪ್ರದೇಶ(ಕೇವಲ ಶೇಕಡಾ 34) ಏಕೆಂದರೆ 1918 ರ ಕನಿಷ್ಟ ಮತದಾನ ಅತ್ಯಂತ ವಿಶಿಷ್ಟ ಸನ್ನಿವೇಶದಲ್ಲಿ ಆಗಿರುವುದು. 1918 ರಲ್ಲಿ ಮೊದಲ ಬಾರಿಗೆ ಪುರುಷರ ವಿಭಾಗ ಮತ್ತು ಕೆಲವು ಮಹಿಳೆಯರಿಗೆ ಮತದಾನದ ಹಕ್ಕು ಸಿಕ್ಕಿತ್ತು. ಇದಲ್ಲದೆ ಮೊದಲ ಮಹಾಯುದ್ಧದಿಂದಾಗಿ ಹಲವರು ವಲಸೆ ಹೋಗಿದ್ದರು. ಇಂತಹ ವಿಶಿಷ್ಟ ಸನ್ನಿವೇಶದಲ್ಲಿ ಆದ ಕನಿಷ್ಟ ಮತದಾನದ ಹಂತಕ್ಕೆ ಈಗಿನ ಸಾಮಾನ್ಯ ವಾತಾವರಣದಲ್ಲಿ ಮತದಾನ ಕುಸಿಯುವುದು ಗಂಭೀರ ಬೆಳವಣಿಗೆ ಅಲ್ಲವೇ? ಇದಕ್ಕೆ ಬೂರ್ಜ್ವಾ ವೀಕ್ಷಕರ ಸಮಜಾಯಿಷಿ - ಈ ಚುನಾವಣೆಯಲ್ಲಿ ಲೇಬರ್ ವಿಜಯ ನಿಶ್ಚಿತವಾದದ್ದರಿಂದ ಹಲವು ಮತದಾರರು ಮತದಾನದ ಗೋಜಿಗೆ ಹೋಗಲಿಲ್ಲ. ಇದು ಶೇಕಡಾ 12 ರಷ್ಟು ಮತಕುಸಿತಕ್ಕೆ ವಿವರಣೆ ಕೊಡುವುದಿಲ್ಲ. ಒಂದು ನಿರ್ದಿಷ್ಟ ಜನವಿಭಾಗದಲ್ಲಿ ಈ ಪ್ರಜಾಪ್ರಭುತ್ವ ನಮಗಲ್ಲ, ಎಲ್ಲಾ ಪಕ್ಷಗಳ ನೀತಿ ಒಂದೇ, ಅವರು ಉಳ್ಳವರ ಪರ - ಎಂಬ ಭಾವನೆ ಬಂದಾಗ ಮಾತ್ರವೇ ಈ ರೀತಿ ದೊಡ್ಡ ಪ್ರಮಾಣದಲ್ಲಿ ಮತದಾನದಲ್ಲಿ ಕುಸಿತ ಕಂಡುಬರುತ್ತದೆ. ಇದು ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ ಮತದಾನದ ಸಮೀಕ್ಷೆಯಿಂದ ತಿಳಿಯುತ್ತದೆ. ಅಮೆರಿಕದಲ್ಲಿ ಇದು ಸ್ಪಷ್ಟವಾಗಿ ಕಂಡುಬಂದಿದೆ. ಹೆಚ್ಚು ಕಡಿಮೆ ಒಂದೇ ಧೋರಣೆಯ ಎರಡು ಪಕ್ಷ ಪದ್ಧತಿ ಜಾರಿಗೆ ಬಂದು, ಎರಡೂ ಜನಸಾಮಾನ್ಯರ ಹಿತಾಸಕ್ತಿಗಳನ್ನು ನಿರ್ಲಕ್ಷಿಸಲು ಆರಂಭಿಸಿದ ನಂತರ ಮತದಾನದಲ್ಲಿ ತೀವ್ರ ಕುಸಿತ ಕಂಡು ಬಂದಿದೆ. ಬ್ರಿಟನ್ ನಲ್ಲೂ ಇದೇ ರೀತಿಯ ಬೆಳವಣಿಗೆ ಆರಂಭವಾಗಿರುವುದೇ ಮತದಾನದ ಕುಸಿತಕ್ಕೆ ಮುಖ್ಯ ಕಾರಣ. 18 ವರ್ಷಗಳ ಜನ-ವಿರೋಧಿ ಟೋರಿ ಪಕ್ಷದ ಆಡಳಿತ ಬ್ರಿಟಿಷ್ ಕಾರ್ಮಿಕವರ್ಗ ಹೋರಾಟಗಳಿಂದ ಗೆದ್ದುಕೊಂಡಿದ್ದ ಕಲ್ಯಾಣ ರಾಜ್ಯ ಮತ್ತು ಸಾರ್ವತ್ರಿಕ ಸೇವೆಗಳಿಗೆ ದೊಡ್ಡ ಪ್ರಮಾಣದಲ್ಲಿ ಕತ್ತರಿ ಹಾಕಿತ್ತು. ಹಲವನ್ನು ಕಿತ್ತು ಹಾಕುವುದರಲ್ಲಿತ್ತು. ಆ ಅಪಾಯ ಕಂಡ ಬ್ರಿಟಿಷ್ ಜನತೆ ಲೇಬರ್ ಪಕ್ಷವನ್ನು ಆರಿಸಿತ್ತು. ಲೇಬರ್ ಪಕ್ಷ ಕಲ್ಯಾಣ ರಾಜ್ಯ ಮತ್ತು ಸಾರ್ವತ್ರಿಕ ಸೇವೆಯ ಕಡಿತವನ್ನು ಹಿಂದೆಗೆಯುವ, ಅದನ್ನು ವಿಸ್ತರಿಸುವ ಭರವಸೆ ನೀಡಿತ್ತು. ಆದರೆ ಅಧಿಕಾರಕ್ಕೆ ಬಂದ ಮೇಲೆ ಆ ಬಗ್ಗೆ ಏನೂ ಮಾಡಲಿಲ್ಲ. ಮಾರುಕಟ್ಟೆ ಆರ್ಥಿಕದ ಮಂತ್ರ ಜಪಿಸುತ್ತಾ ಟೋರಿಯ ಜನ-ವಿರೋಧಿ ನೀತಿಗಳನ್ನು ಇನ್ನಷ್ಟು ಜೋರಾಗಿ ಮುಂದುವರೆಸಿತ್ತು. ಸಾಮಾಜಿಕ ಅಸಮಾನತೆಯನ್ನು ತೊಡೆದು ಹಾಕುವುದಕ್ಕೆ ಏನೂ ಮಾಡಲಿಲ್ಲ ಮಾತ್ರವಲ್ಲ, ಅದನ್ನು ಇನ್ನಷ್ಟು ಹೆಚ್ಚು ಮಾಡಿತ್ತು. ಈ ನೀತಿ ಕಾರ್ಮಿಕವರ್ಗದ ದೊಡ್ಡ ವಿಭಾಗಕ್ಕೆ ಚುನಾವಣೆಯಲ್ಲಿ ಯಾವುದೇ ಆಯ್ಕೆಗೆ ಅವಕಾಶವಿಲ್ಲದಂತೆ ಮಾಡಿತ್ತು. ಕಾರ್ಮಿಕವರ್ಗದ ಜನ ತೀವ್ರ ಕಾರ್ಮಿಕವಿರೋಧಿ ಟೋರಿ ಪಕ್ಷಕ್ಕೆ ಎಂದ ಮತ ನೀಡುವುದಿಲ್ಲ.




ಟೋರಿ ನೀತಿಗಳನ್ನೇ ಅನುಸರಿಸುತ್ತಿರುವ ಲೇಬರ್‌ಗೂ ಯಾಕೆ ಮತ ನೀಡಬೇಕು? ಎಂದು ಎದ್ದ ಪ್ರಶ್ನೆಗೆ ಹಲವು ಮತದಾರರು ಕಂಡುಕೊಂಡ ಉತ್ತರ ಮತದಾನವೇ ಮಾಡದಿರುವುದು.

ಇದು ಮತದಾನದ ಕುಸಿತಕ್ಕೆ ನಿಜವಾದ ಕಾರಣ ಎಂಬುದಕ್ಕೆ ಎರಡು ಸ್ಪಷ್ಟ ನಿದರ್ಶನಗಳಿವೆ. ಲಿಬರಲ್ ಪಕ್ಷ ಈ ಚುನಾವಣೆಯಲ್ಲಿ ಮತದಾನ (ಸುಮಾರು ಶೇಕಡಾ 2) ಹೆಚ್ಚಿಸಿಕೊಂಡ ಏಕಮಾತ್ರ ಪಕ್ಷ. ಹಿಂದೆ ಲೇಬರ್ ಮತ್ತು ಟೋರಿಯ ಮಧ್ಯದ ಹಾದಿ ತುಳಿಯುವುವ ಪಕ್ಷವಾಗಿತ್ತು ಲಿಬರಲ್ ಪಕ್ಷ. ಈ ಬಾರಿಯ ಚುನಾವಣೆಯಲ್ಲಿ ಲಿಬರಲ್ ಪಕ್ಷ ಕಲ್ಯಾಣಯೋಜನೆಗಳ ಮತ್ತು ಸಾರ್ವಜನಿ ಸೇವೆಗಳನ್ನು ರಕ್ಷಿಸುವುದು, ಬೆಳೆಸುವುದು ತನ್ನ ಧೋರಣೆ ಎಂದು ಘೋಷಿಸಿತ್ತು. ಈ ಘೋಷಣೆಯಿಂದಲೇ ಲಿಬರಲ್ ಪಕ್ಷ ಬಹುಪಾಲು ಲೇಬರ್ ಮತಗಳನ್ನು ಗಳಿಸಿದೆ ಎಂದು ವೀಕ್ಷಕರ ಅಭಿಪ್ರಾಯ. ಲೇಬರ್ ಸುಮಾರು ಶೇಕಡಾ 2 ಮತ ಕಳೆದುಕೊಂಡಿತ್ತು. ಇದಲ್ಲದೆ ಎರಡು ಕ್ಷೇತ್ರಗಳಲ್ಲಿ (ಸ್ವತಂತ್ರ ಪಕ್ಷೇತರ ಅಭ್ಯರ್ಥಿಗಳು ಗೆದ್ದ ಕ್ಷೇತ್ರಗಳು) ಮತದಾನದ ಕುಸಿತ ಕಂಡು ಬರಲಿಲ್ಲ. ಸಾರ್ವಜನಿಕ ವೈದ್ಯಕೀಯ ಸೇವೆಗಳಲ್ಲಿ ಕಡಿತ ವಿರೋಧಿಸಿ ದೊಡ್ಡ ಚಳುವಳಿ ಮಾಡಿದ ವೈದ್ಯರು ಸ್ಪರ್ಧಿಸಿದ ಈ ಕ್ಷೇತ್ರಗಳಲ್ಲಿ ಮತದಾನ ಕುಸಿತ ಇರಲಿಲ್ಲ, ಮಾತ್ರವಲ್ಲ ಸ್ವತಂತ್ರ ಅಭ್ಯರ್ಥಿಗಳು ಗೆದ್ದ ಕ್ಷೇತ್ರಗಳೂ ಆಗಿದ್ದವು. ಅರ್ಥಪೂರ್ಣ ಚುನಾವಣಾ ವಿಷಯಗಳು. ಇದ್ದರೆ, ಜನ-ಪರ ಧೋರಣೆ ಇರುವ ಅಭ್ಯರ್ಥಿಗಳಿದ್ದರೆ ಮತದಾನದಲ್ಲಿ ಕುಸಿತ ಇರುವುದಿಲ್ಲ ಎಂಬುದು ಇದರ ಅರ್ಥ.

ಕಾರ್ಮಿಕರ ಜತೆ ಸಂಬಂಧ ಕಡಿದುಕೊಂಡ 'ಹೊಸಲೇಬರ್'

ಈ ಚುನಾವಣೆಯಲ್ಲಿ ಕಂಡ ಇನ್ನೂ ಗಂಭೀರ ಬೆಳವಣಿಗೆಯೆಂದರೆ, ಟೋನಿ ಬ್ಲೇರ್‌ರ 'ಹೊಸ ಲೇಬರ್' ಪಕ್ಷ, ಕಾರ್ಮಿಕರ ಪಕ್ಷವಾಗಿದ್ದ 'ಹಳೆ ಲೇಬರ್' ಪಕ್ಷಕ್ಕಿಂತ ಪೂರ್ಣ ಬೇರೆಯ ಪಕ್ಷವಾಗಿ ಹೊಮ್ಮಿರುವುದು ಇದು 70 ರ ದಶಕದಿಂದ ಆರಂಭವಾದ ಪ್ರಕ್ರಿಯೆಯ ಫಲ. ಟೋನಿ ಬ್ಲೇರ್‌ರ 'ಹೊಸ ಲೇಬರ್' ಪಕ್ಷಕ್ಕೆ ಬೂರ್ಜ್ವಾ ವರ್ಗದ ಅತ್ಯಂತ ಕಟ್ಟಾ ಬೆಂಬಲಿಗರೂ, ಪ್ರತಿನಿಧಿಗಳೂ ಆದ ಪತ್ರಿಕೆಗಳೂ, ಸಂಸ್ಥೆಗಳು ಭಾರಿ ಬೆಂಬಲ-ಪ್ರಚಾರ ನೀಡಿದ್ದು ಇದನ್ನು ಎತ್ತಿ ತೋರಿಸುತ್ತದೆ. ಈ ಬೆಂಬಲ 1997 ರಿಂದ ಇನ್ನಷ್ಟು ಹೆಚ್ಚಿದೆ. ಅಂದರೆ ಆಳುವ ವರ್ಗಗಳು 'ಹೊಸಲೇಬರ್' ಪಕ್ಷಕ್ಕೆ ತಮ್ಮ ಹಿತಾಸಕ್ತಿಗಳನ್ನು ಕಾಪಾಡುವ, ಜನಸಾಮಾನ್ಯರನ್ನು 'ಹತೋಟಿ'ಯಲ್ಲಿಡುವ ಶಕ್ತಿ ಇದೆ ಎಂದು ಕಂಡುಕೊಂಡಿದ್ದರೆ, ಜನಸಾಮಾನ್ಯರು ದ್ವೇಷಿಸುವ ಟೋರಿ ಪಕ್ಷಕ್ಕಿಂತ ಹೆಚ್ಚು 'ಸುಖಕರವಾಗಿ' ಹೊಸ ಲೇಬರ್ ಪಕ್ಷ ತಮ್ಮ ಹಿತಾಸಕ್ತಿಗಳನ್ನು ಕಾಪಾಡಬಲ್ಲದು ಎಂದು ಕಂಡು ಕೊಂಡಿದ್ದಾರೆ. ಹೊಸ ಲೇಬರ್ ನೀತಿಗಳು ಉಚ್ಚ ಮಧ್ಯಮವರ್ಗದ ದೊಡ್ಡ ವಿಭಾಗವನ್ನು ಗೆದ್ದುಕೊಳ್ಳುವುದರಲ್ಲಿ ಸಫಲವಾಗಿದೆ. ಟೋನಿ ಬ್ಲೇರ್‌ರ 'ಹೊಸ ಲೇಬರ್' ಅಮೆರಿಕದ 'ಡೆಮೊಕ್ರಾಟಿಕ್' ಪಕ್ಷದಂತೆ ಕಂಡುಬರುತ್ತಿದೆ. ಇದು ಬ್ಲೇರ್‌ರ ಉದ್ದೇಶ-ಮಾದರಿ ಸಹ.

ಚಾರಿತ್ರಿಕವಾಗಿ ಟ್ರೇಡ್ ಯೂನಿಯನ್‌ಗಳ ರಾಜಕೀಯ ವಿಭಾಗವಾಗಿ ಲೇಬರ್ ಪಕ್ಷ ಹುಟ್ಟಿತ್ತು, ಸಂಘಟನಾತ್ಮಕವಾಗಿಯೂ ಲೇಬರ್ ಪಕ್ಷದಲ್ಲಿ ಟ್ರೇಡ್ ಯೂನಿಯನ್‌ಗೆ ನೇರ ನಿಯಂತ್ರಣ ಇತ್ತು, 1970 ರ ದಶಕದಲ್ಲಿ ತಂದ ಸಂಘಟನಾತ್ಮಕ ಬದಲಾವಣೆಗಳ ನಂತರ, ಈ ನಿಯಂತ್ರಣ ಹೋಗಿತ್ತು. ಆಗಿನಿಂದ ಲೇಬರ್ ಪಕ್ಷ ಕಾರ್ಮಿಕ ವರ್ಗದಿಂದ, ಟ್ರೇಡ್ ಯೂನಿಯನ್‌ಗಳ ಧೋರಣೆಯಲ್ಲಿಯೂ, ಕಾರ್ಯಕ್ರಮದಲ್ಲಿಯೂ ದೂರ ಸರಿಯುತ್ತಾ ಬಂದಿದೆ. ಹೆಚ್ಚಿನ ಮತ



ಪಡೆಯುವ, ಆಳುವ ವರ್ಗಗಳಲ್ಲಿ ಸಂಪ್ರೀತಿಗೊಳಿಸುತ್ತಾ ಬಲಿಯುತ್ತಾ ಬಂದಿದೆ. ಬ್ಲೇರ್ ಮತ್ತು ಹೊಸ ಲೇಬರ್ ಸಾಮಾಜಿಕ ಅಸಮಾನತೆ ಕಡಿಮೆ ಮಾಡುವ, ಸಾರ್ವಜನಿಕ ಕಲ್ಯಾಣ, ಸೇವೆಗಳನ್ನು ರಕ್ಷಿಸುವ ಮಾತಾಡಿದರೂ ಅದು 'ನಾಟಕ' ಎಂದೂ ಈಗ ಎಲ್ಲರಿಗೂ ಗೊತ್ತಾಗಿದೆ. ಮಾರುಕಟ್ಟೆ ಆರ್ಥಿಕವನ್ನು ಇನ್ನಷ್ಟು ಜೋರಾಗಿ ತರಲು ಇದು ಸಕ್ಕರೆ ಪಾಕ ಮಾತ್ರ ಎಂದು ಗೊತ್ತಾಗಿದೆ.

ಫ್ಯಾಸಿಸ್ಟ್ ಪಕ್ಷಗಳ ಉದಯ

ಸದ್ಯಕ್ಕೆ ಬ್ಲೇರ್‌ರ 'ಹೊಸ ಲೇಬರ್'ಗೆ ಸಾಮಾಜಿಕ, ರಾಜಕೀಯ ವಿರೋಧ ನಿಷ್ಕ್ರಿಯವಾಗಿದೆ. ಮತದಾನದಲ್ಲಿ ನಿರ್ಲಕ್ಷ ಮೂಲಕ ವಿರೋಧ ಕಂಡಿದೆ. ಆದರೆ ಇತರ ಮಹತ್ವದ, ಗಂಭೀರ ಬೆಳವಣಿಗೆಗಳಿಗೂ ಅದು ಎಡೆ ಮಾಡಿಕೊಡುವ ಸೂಚನೆಗಳಿವೆ. ಟೋರಿ-ಲೇಬರ್‌ಗಳ ಸಮಾನ ಧೋರಣೆ ಮತ್ತು ತೀವ್ರ ಆರ್ಥಿಕ ಬಿಕ್ಕಟ್ಟು -ಅಸಮಾನತೆಗಳು ರೊಚ್ಚಿಗೆದ್ದ ಜನ ಜನಾಂಗವಾದಿ ಫ್ಯಾಸಿಸ್ಟ್ ಪಕ್ಷಗಳಿಗೆ ಮಾರುಹೋಗುವ ಸೂಚನೆಗಳಿವೆ. ಫ್ಯಾಸಿಸ್ಟ್ ಒಲವಿನ ಬಿಳಿ ಜನಾಂಗೀಯವಾದಿ ಬ್ರಿಟಿಷ್ ನ್ಯಾಶನಲ್ ಪಕ್ಷ ತನ್ನ ಮತಗಳಿಕೆ ಹಲವು ಪ್ರದೇಶಗಳಲ್ಲಿ ಗಮನಾರ್ಹವಾಗಿ ಹೆಚ್ಚಿಸಿಕೊಂಡಿದೆ. ಅದೇ ಪ್ರದೇಶಗಳಲ್ಲಿ ಚುನಾವಣೆಗಳ ಮೊದಲೂ, ನಂತರವೂ ಜನಾಂಗೀಯ-ಗಲಭೆಗಳು (ಬಿಳಿಯರು ಮತ್ತು ಏಶ್ಯನ್ನರ ನಡುವೆ) ನಡೆದವು ಎಂದು ನೆನಪಿಸಿಕೊಂಡರೆ ಬೆಳವಣಿಗೆ ಗಂಭೀರತೆ ಗೊತ್ತಾಗುತ್ತದೆ.


ಲೇಬರ್ 'ಎಡಮುಖ' ಬಯಲಾಗಿರುವುದರಿಂದ ಇದು ನಿಜವಾದ ಎಡಪಕ್ಷಗಳಿಗೆ ಹೊಸ ರಾಜಕೀಯ ಅವಕಾಶ ಸಹ ಒದಗಿಸಿದೆ. ಚುನಾವಣೆಗಳಲ್ಲಿ, ಮತಗಳಲ್ಲಿ (ಲೇಬರ್ ಪ್ರಭಾವ ದಟ್ಟವಾಗಿದ್ದರಿಂದ) ಈವರೆಗೆ ಕಂಡು ಬಂದ ಆದರೆ ಪ್ರಬಲವಾದ ಬೇರು ಇರುವ ಎಡ ಚಳುವಳಿ ಈ ಅವಕಾಶವನ್ನು ಬಳಸಿಕೊಳ್ಳಬೇಕು. ಈ ಚುನಾವಣೆಯಲ್ಲಿ ಹಲವುಎಡ ಪಕ್ಷಗಳು ಒಂದು ಐಕ್ಯರಂಗ ಕಟ್ಟಿಕೊಂಡಿದ್ದವು. ಅದನ್ನು ಮುಂದುವರಿಸಿ ಎಡ-ಪರ್ಯಾಯ ಒದಗಿಸುವುದು ಸಾಧ್ಯವಾದರೆ ದೀರ್ಘ ಹೋರಾಟದ ಚರಿತ್ರೆ ಇರುವ ಅತ್ಯಂತ ತಿಳಿಯದಾದ ಕಾರ್ಮಿಕವರ್ಗ ಅದನ್ನು ಬೆಂಬಲಿಸುವ ಒಳ್ಳೆಯ ಸಾಧ್ಯತೆಗಳು ಇವೆ.

ಪುಸ್ತಕ ವಿಮರ್ಶೆ

ಕೋಮುವಾದದ ರಾಜಕೀಯ

ಕೋಮುವಾದದ ರಾಜಕೀಯವನ್ನು ಸೈದ್ಧಾಂತಿಕ ಎಳೆಗಳನ್ನು ಗುರುತಿಸಿರುವ ಲೇಖಕರು ನಿರ್ದಿಷ್ಟವಾಗಿ ಸುರತ್ಕಲ್‌ನ ಕೋಮು ಗಲಭೆಯನ್ನು ಆಳವಾಗಿ, ವಿವರವಾಗಿ ವಿಶ್ಲೇಷಿಸಿದ್ದಾರೆ. ಇದು ಅತ್ಯಂತ ಶ್ಲಾಘನೀಯಕಾರ್ಯ. ಈ ಕೃತಿ ಎಲ್ಲ ದೃಷ್ಟಿಯಿಂದಲೂ ಗಮನಾರ್ಹ.

ಜಿ.ರಾಜಶೇಖರ, ಕೆ.ಫಣಿರಾಜ ಮತ್ತು ಮಹ್ಮದ್ ಕಟ್ಪಾಡಿ ಈ ಮೂವರೂ ನಾಡಿನ ಖ್ಯಾತ ಬರಹಗಾರರು ನಮ್ಮ ಸಂದರ್ಭದ ಬಹುಮುಖ್ಯ ಸಮಸ್ಯೆಯಾದ ಕೋಮುವಾದ ಮತ್ತು ಮೂಲಭೂತವಾದದ ಅಪಾಯದ ಕುರಿತು ಆಳವಾದ ಕಾಳಜಿ ಉಳ್ಳವರು. ಅಂಥ ಕಳಕಳಿ ಮತ್ತು ಅಂಥ ಸಮಸ್ಯೆಯಲ್ಲಿ **ಯಾವ ರೀತಿಯಲ್ಲೂ ಭಾವೋದ್ರೇಕಕ್ಕೆ ಎಡೆಯಾಡದಂತಹ ಮತ್ತು ವಸ್ತುನಿಷ್ಠತೆಗೆ ಎರವಾಗದಂತಹ ಭಾಷೆಯ ಹದ ಅವರ ವಿಶ್ಲೇಷಣೆಯ ರೀತಿ ಅಂಥ ವೈಚಾರಿಕತೆಯ ಒಂದು ಪ್ರತಿಕ್ರಿಯೆಯೇ ಪ್ರಸ್ತುತ ಪುಸ್ತಕ 'ಕೋಮುವಾದದ ರಾಜಕೀಯ'**



ಇದರ ಮೊದಲ ಭಾಗದಲ್ಲಿ ಕೋಮುವಾದದ ಅರ್ಥ ವಿವರಣೆಯಿದೆ. "ರಾಜಕೀಯ ಅಧಿಕಾರಕ್ಕಾಗಿ ಒಂದು ಧರ್ಮದ ಅನುಯಾಯಿಗಳನ್ನು ಇನ್ನೊಂದು ಧರ್ಮದವರ ವಿರುದ್ಧ ಎತ್ತಿ ಕಟ್ಟುವುದು ಮತ್ತು ಬಹುಸಂಖ್ಯಾತರ ಸಂಸ್ಕೃತಿಗೆ ಅಲ್ಪಸಂಖ್ಯಾತರು, ಹೊರಗಿನವರು ಎಂದು ವಾದಿಸಿ ಅವರ ಬಗ್ಗೆ ದ್ವೇಷ, ತಿರಸ್ಕಾರಗಳನ್ನು ಬೆಳೆಸುವುದು ಕೋಮುವಾದ. ತನ್ನ ಧರ್ಮದ ಕಟ್ಟುಪಾಡುಗಳಿಗೆ ಮತ್ತು ಪವಿತ್ರ ಗ್ರಂಥಗಳಿಗೆ ಆ ಧರ್ಮಕ್ಕೆ ಸೇರಿದ ಪ್ರತಿಯೊಬ್ಬನು ತಲೆಬಾಗಬೇಕು ಎಂದು ಒತ್ತಾಯಿಸುವುದು ಮೂಲಭೂತವಾದ ಎಂದು ಹೇಳುತ್ತಾರೆ. ಕುರಾನಿನಲ್ಲಿ ಭರವಸೆ ಹೊಂದಿರದ ಜಿನ್ನಾ, ಹಿಂದು ಧಾರ್ಮಿಕ ಆಚರಣೆಯಲ್ಲಿ ನಂಬಿಕೆ ಇಲ್ಲದ ಅಡ್ವಾಣಿಯವರು ಕರಾರುವಾಕ್ಕಾಗಿ ಮೂಲಭೂತವಾದಿಗಳಲ್ಲದಿದ್ದರೂ ಕೋಮುವಾದವನ್ನು ಪರಿಣಾಮಕಾರಿಯಾಗಿ ಬೆಳೆಸಿದ ಪರಿಯ ವಿವರಗಳು ಇಲ್ಲಿವೆ.

ಕೋಮುವಾದ ಇಲ್ಲಿ ಬೆಳೆದು ಬಂದ ಬಗೆಯನ್ನೇ ಕರಾರುವಾಕ್ಕಾಗಿ ವಿವರಿಸಿದ್ದಾರೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲೇ ಹಿಂದೂ ರಾಷ್ಟ್ರವಾದಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಪೂರ್ತಿ ಮತನಿರಪೇಕ್ಷಿತ (ಸೆಕ್ಯುಲರ್) ಆದ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾದುದನ್ನು ವಿವರಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಕೆಳಜಾತಿ ಮತ್ತು ಮಹಿಳೆಯರಿಂದ ತಮ್ಮ ಹಕ್ಕು ಬಾಧ್ಯತೆಗಾಗಿ, ತಮ್ಮ ಮೇಲೆ ಹಿಂದೂವಾದಿಗಳಿಂದ ಆಗುತ್ತಿರುವ ಶೋಷಣೆಗೆ ವಿರುದ್ಧವಾಗಿ ಚಳುವಳಿ ನಡೆಯುತ್ತಿರುವಾಗಲೇ ಆರ್.ಎಸ್.ಎಸ್. ಸ್ಥಾಪನೆಯಾದುದು ಒಂದು ಬ್ರಾಹ್ಮಣ ಸಂಘಟನೆಯಾಗಿ, ಕೆಳಜಾತಿಗಳು ಮೇಲು ಜಾತಿಗಳ ವಿರುದ್ಧ ತಿರುಗಿಬೀಳುವುದನ್ನು ನೋಡಿದರೆ ಮುಸ್ಲಿಂ ವಿಷ ಸರ್ಪಗಳನ್ನು ಸವರಿ ಹಾಕಲಿಕ್ಕೆ ಕೆಳ ಜಾತಿಯವರ ಸಹಕಾರ ನಿರೀಕ್ಷಿಸುವ ಹಾಗಿಲ್ಲ. ಈ ಕಾರಣದಿಂದ ನಾವು ಯಾರನ್ನು ನಂಬಿಕೂಡದೆ ಸ್ವಂತ ತಯಾರಿ ಮಾಡಿಕೊಳ್ಳಬೇಕಾಗಿದೆ. ಆರ್.ಎಸ್.ಎಸ್. ನೇತಾರ ಹೆಡ್ಗೆವಾರ ಹೇಳಿರುವುದನ್ನು ವಿವರಿಸಿದ್ದಾರೆ. ಇವರು ಭಾರತದ ಬಹುಮುಖಿ ಸಂಸ್ಕೃತಿಯನ್ನು ಗೌರವಿಸಿದ್ದಿಲ್ಲ ಎಂದು ಹೇಳುತ್ತಾರೆ. ಆದರೂ ಸಹ ಹಿಂದೂಗಳೆಲ್ಲರೂ ಕೋಮುವಾದಿಗಳಲ್ಲ. ಅವರಿಗೆ ಜೀವನಾನುಭವ, ಅವರದೇ ಆದ ಜನಪದ ತಾಳ್ಮೆಯಿದೆ. ಆದ್ದರಿಂದಲೇ ಹಿಂದುತ್ವವಾದಿಗಳು ಅಧಿಕಾರ ಹಿಡಿಯಲು ಎಪ್ಪತ್ತು ವರ್ಷ ಕಾಯಬೇಕಾಯಿತು ಎಂದು ಹೇಳಿದ್ದಾರೆ.

ಈ ಮಧ್ಯೆ ಆರ್.ಎಸ್.ಎಸ್. ಮತ್ತದರ ಸಂಘ ಪರಿವಾರ ಬೆಳೆದು, ಬಿಜೆಪಿ ಅಧಿಕಾರ ಹಿಡಿಯಲು ಪ್ರಬಲವಾಗುವಷ್ಟು ಅವಕಾಶವನ್ನು ಕೊಟ್ಟ ಕಾಂಗ್ರೆಸ್ಸಿನ ಕಾರ್ಯದ ವಿವರ ಇದೆ. ನೆಹರು ಮತ್ತು ಲಾಲ ಬಹದ್ದೂರ ಶಾಸ್ತ್ರಿಗಳ ನಂತರ ಅಂದರೆ ಇಂದಿರಾಜಿಯವರ ಆಡಳಿತ ಕಾಲದಲ್ಲಿ ಹೇಗೆ ಕೋಮುವಾದವನ್ನು ಬೆಳೆಸಲಾಯಿತು. ಇದೇ ಸರಿಯೆದು ತಿಳಿದ ತಪ್ಪು ಹಾದಿ ಎಂದಿದ್ದಾರೆ. ಹಾಗೆಯೇ ಪ್ರಸ್ತುತ ಸಂದರ್ಭದಲ್ಲಿ ಇತರ ಪಕ್ಷಗಳ ಕೋಮುವಾದ ಗುಣವನ್ನು ಹೇಳಿದ್ದಾರೆ. ಇಂದು ನಿಜವಾಗಿ ಕೋಮುವಾದಿಗಳಲ್ಲದವರೂ, ಬಿಜೆಪಿ ಅಲ್ಲದವರೂ ಸಹ ಮುಸ್ಲಿಂ ಎಂದರೆ ಕೊಬ್ಬಿ ಹೋದವರು, ಒಂದು ಗುಂಪು, ಹಿಂದುಗಳನ್ನು ಕೆಣಕುವವರು ಎಂಬ ನಂಬಿಕೆಯನ್ನು ತಳೆದಿರುವಂತೆ ಮಾಡುವಲ್ಲಿ ಆರ್.ಎಸ್.ಎಸ್. ಮತ್ತು ಬಿಜೆಪಿಗಳು ಬೆಳೆಸಿದ ಮಾನವಶಾಸ್ತ್ರವನ್ನು ಚೆನ್ನಾಗಿ ವಿವರಿಸಿದ್ದಾರೆ. ಆರ್.ಎಸ್.ಎಸ್. ನವರ ಹಿಟ್‌ಲಿಸ್ಟ್‌ನಲ್ಲಿ ಮೊದಲ ವೈರಿಗಳು ಕಮ್ಯುನಿಸ್ಟರು, ಎರಡನೆಯವರು ದಲಿತರ ಹಕ್ಕುಗಳಿಗಾಗಿ ಹೋರಾಡುವವರು, ವಿಚಾರವಾದಿಗಳು, ಸಮಾಜವಾದಿಗಳು ಮತ್ತು ಸಮಾನತೆಗಾಗಿ ಹೋರಾಡುವ ಮಹಿಳೆಯರು ಎಂದಿದ್ದಾರೆ.

ಎರಡನೇ ಭಾಗ 'ಅನುಬಂಧ'ದಲ್ಲಿ ದಕ್ಷಿಣ ಕನ್ನಡದ ಸುರತ್ಕಲ್‌ನಲ್ಲಿ 1998-99ರಲ್ಲಿ ನಡೆದ ಕೋಮುಗಲಭೆಯ ವಸ್ತುನಿಷ್ಠ ವಿವರಗಳಿವೆ. ಇದು ಹಿಂದಿನ ನಿವಾರಣೆಗೆ ಉಜ್ವಲ ಉದಾಹರಣೆಗಾಗಿ ಮೂಡಿಬಂದಿದೆ. ಸ್ವತಃ ಲೇಖಕರು ಗಲಭೆಯಲ್ಲಿ ಹಲ್ಲೆಗೊಳಗಾದವರ ಮನೆಗೆ (ಇವರಲ್ಲಿ ಹಿಂದು ಮತ್ತು ಮುಸ್ಲಿಂ ಎರಡೂ ಇವೆ) ಭೇಟಿ ನೀಡಿ ವಸ್ತುಸ್ಥಿತಿಯನ್ನು ಪರಿಶೀಲಿಸಿದ್ದಾರೆ. ಹಾಗೆಯೇ ಬೇರೆ ಬೇರೆ ಮುಖಂಡರಿಗೆ ಭೇಟಿಯಾಗಿ ಚರ್ಚಿಸಿದ್ದಾರೆ. ಇಲ್ಲಿ ಹಲ್ಲೆಗೊಳಗಾಗಿ ಸತ್ತವರು ಹಿಂದೂ ಒಂದಾದರೆ ಮುಸ್ಲಿಮರು ಏಳು. ಆಸ್ತಿ ಕಳೆದುಕೊಂಡವರು ಹಿಂದೂ 34 ಆದರೆ ಮುಸ್ಲಿಂ 94, ಕ್ರಿಶ್ಚಿಯನ್ 2. ಹಲ್ಲೆಗೊಳಗಾದ ಮುಸ್ಲಿಮರಲ್ಲಿ ಮಕ್ಕಳು, ಮುದುಕರೂ ಸೇರಿದ್ದಾರೆ. ನಿನ್ನೆ ಸಂಜೆಯವರೆಗೆ ತೀರ ಆತ್ಮೀಯರಂತಿದ್ದ ಎರಡೂ ಕೋಮಿನವರು ಮುಂಜಾನೆಯೇ ವೈರಿಗಳಾಗಿದ್ದಾರೆ. ಅಸಾಹಯಕ ಮುಸ್ಲಿಮರನ್ನು ನಾಶಮಾಡಿದ್ದರೆ ಅದರ ಪ್ರತಿಕ್ರಿಯೆಯಾಗಿ ಮುಸ್ಲಿಮ ಹಿಂಸೆಯೂ ನಡೆದಿದೆ. ಆದರೆ ಗಲಭೆ ಮುಸ್ಲಿಮರಿಂದ ಎನ್ನುವ ಸಂಘ ಪರಿವಾರದವರ ಮಾತಿನ ಸುಳ್ಳನ್ನು ವಿಶ್ಲೇಷಣೆಗೊಳಪಡಿಸಿದೆ. ಈ ಮಧ್ಯೆ ಮುಸ್ಲಿಮರನ್ನು ಬದುಕುಳಿಸಿದ ಹಿಂದುಗಳ ಸಂದರ್ಶನವೂ ಇದೆ. ಈ ದಾಂಧಲೆಯನ್ನು ವೀರತ್ವದಿಂದ ತಡೆದ ಮೊಗವೀರ ವೀರ ಹರೀಶ ಮಿತ್ರನ್ ಬಗ್ಗೆ ಇದೆ.

"ಆಧುನಿಕ ಸಮಾಜವೊಂದರ ಸ್ವಾತಂತ್ರ್ಯದ ಕಲ್ಪನೆಯನ್ನು ಅರ್ಥ ಮಾಡಿಕೊಳ್ಳಲು ಬುದ್ಧ, ಏಸು, ಪೈಗಂಬರರು ನಮಗೆ ನೆರವಾಗುವುದಿಲ್ಲ. ನಾವು ಅವರ ತುಂಡುಗಳಾಗುವ ಅವಶ್ಯಕತೆಯೂ ಇಲ್ಲ. ಸಾಮಾನ್ಯ ಪ್ರಜೆಯಾಗಿ ನಾವು ಹೇಗಿರಬೇಕೆಂದು ಯೋಚಿಸಿದರೆ ಸಾಕು" ಎಂಬ ಮಾತು ನಮಗೆ ಅಪ್ಯಾಯಮಾನವಾಗಿದೆ. ಈ ವಿಚಾರವನ್ನು ಪ್ರತೀ ನಾಗರೀಕರೂ ಗಂಭೀರವಾಗಿ ಗ್ರಹಿಸಬೇಕಿದೆ. ನಿಷ್ಕ್ರಿಯರಾದರೆ ತೆರಬೇಕಾದ ಬೆಲೆಗೆ ಮಿತಿ ಇರಲಾರದು. ಇದು ಇದನ್ನು ಪುಸ್ತಕ ಮನದಟ್ಟು ಮಾಡುತ್ತದೆ. ಇಂತಹ ಒಂದು ಪುಸ್ತಕ ಮನದಟ್ಟು ಮಾಡುತ್ತದೆ. ಇಂತಹ ಒಂದು ಪುಸ್ತಕ ದ.ಕ.ದ ಸೆಕ್ಯುಲರ್ ಆದ ಲೇಖಕರ ಎಚ್ಚೆತ್ತ ಪ್ರಜ್ಞೆಗೆ ಸಾಕ್ಷಿಯಾಗಿದೆ. ಭಟ್ಕಳದ ಕೋಮುಗಲಭೆಯ ಕುರಿತು ಇಂಥದ್ದೊಂದು ವಿಶ್ಲೇಷಣೆಯನ್ನು ಉತ್ತರ ಕನ್ನಡದವರಾದ ನಾವು ಮಾಡಲಿಲ್ಲವಲ್ಲಾ ಎಂಬ ವಿಷಾದ ನನ್ನದು.

ಡಾ|| ಆರ್.ವಿ.ಭಂಡಾರಿ

ಲೇಖಕರು:
ಜಿ.ರಾಜಶೇಖರ್, ಕೆ.ಫಣಿರಾಜ.ಮತ್ತು ಮಹಮದ್ ಕಟ್ಪಾಡಿ
ನವಕರ್ನಾಟಕ ಪ್ರಕಾಶನ,
ವರ್ಷ - 2000,
ಪುಟ 96
ಬೆಲೆ 25 ರೂ.

ನೆರೂದ ಮತ್ತು ರೂಪಕ

ಚಿಲಿ ಕವಿ ಪಾಬ್ಲೊ ನೆರೂದ, ತನ್ನ ದೇಶದಿಂದ ಬಹಿಷ್ಕರಿಸಲ್ಪಟ್ಟು ಸ್ಪೇನ್‌ನಲ್ಲಿ ಇದ್ದಾಗ, ಆತ ಅಜ್ಞಾತನಾಗಿ ವಾಸಿಸುತ್ತಿದ್ದ ಪುಟ್ಟ ಹಳ್ಳಿಯ ಅಂಚೆ ಕಛೇರಿಗೊಂದು ಸಮಸ್ಯೆ ಬಂತು. ಹಳ್ಳಿಯಿಂದ ದೂರ ಒಂದು ಸಣ್ಣ ನಡುಗಡ್ಡೆಯಲ್ಲಿ ಇದ್ದ ನೆರೂದನ ಹೆಸರಿಗೆ ಬರುವ ಭರಪೂರ ಕಾಗದಗಳನ್ನು ಅವನಿಗೆ ತಲುಪಿಸುವುದೇ ಒಂದು ತಲೆಬೇನೆಯಾಯಿತು. ಸ್ವಂತ ಸೈಕಲ್ ಹೊಂದಿರುವ



ವ್ಯಕ್ತಿಯೊಬ್ಬನನ್ನು ಇದಕ್ಕೆಂದೇ ನೇಮಿಸಲಾಯಿತು. ಆ ಅಂಚೆಪೇದೆ ಪ್ರತಿದಿನ ಎಷ್ಟೋ ಹೊತ್ತು ಸೈಕಲ್ ತುಳಿದು, ಹೊಳೆ ದಾಟಿ, ನೆರೂದನಿಗೆ ಅವನ ಅಭಿಮಾನಿಗಳ ಪತ್ರಗಳನ್ನು ತಲುಪಿಸುತ್ತಿದ್ದ. ಕವಿಯೊಬ್ಬನನ್ನು ಪ್ರಥಮ ಬಾರಿಗೆ ನೋಡಿದ ಆತ ಕೌತುಕದಿಂದಲೇ ಕವಿಗೆ ಸಮೀಪನಾದ. ತನ್ನನ್ನು ಅಕ್ಕರೆಯಿಂದ ಬರಮಾಡಿಕೊಳ್ಳುತ್ತಿದ್ದ ನೆರೂದನನ್ನು ಒಮ್ಮೆ ಭಯ ಭಕ್ತಿಯಿಂದ ಆತ, "ರೂಪಕ ಅಂತಾರಲ್ಲ ಸಾರ್, ಹಾಗಂದರೇನು?" ಎಂದ. ಅದಕ್ಕೆ ನೆರೂದ, "ನಾನು ಆಕಾಶ ಅಳುತ್ತದೆ ಎಂದರೆ ನಿನಗೇನನಿಸುತ್ತದೆ?" ಎಂದ. ಅಂಚೆಯವ, "ಮಳೆ" ಎಂದ. "ಸರಿ, ಇದೇ ರೀತಿ ನಮ್ಮೊಳಗಿನ ತಳಮಳಕ್ಕೆ ಈ ಸಮುದ್ರ ರೂಪಕವಾಗಬಹುದು. ನಿನ್ನ ಒಂಟಿತನಕ್ಕೆ ಆ ಮರ ರೂಪಕವಾಗಬಹುದು" ಎಂದು ನೆರೂದ ವಿವರಿಸಿದ. ಎಲ್ಲವನ್ನೂ ತಿಳಿಯುತ್ತ ಕುಳಿತ ಅಂಚೆಪೇದೆ ಕೊನೆಗೆ ಅಳುಕಿನಿಂದಲೇ ಕೇಳಿದ, "ಹಾಗಾದರೆ... ನೀವು, ನಾನು ಈ ಜಗತ್ತು ಇದೆಲ್ಲ ಯಾವುದಕ್ಕೆ ರೂಪಕ?" ನೆರೂದ ವಿಸ್ಮಯದಿಂದ ಅವನನ್ನೇ ನೋಡುತ್ತ ಕೂತ.

ನೆರೂದ ಮತ್ತು ಈ ಅಂಚಿ ಪೇದೆಯ ನಂಟನ್ನು ಚಿತ್ರಿಸುವ **'ಎಲ್‌ಪೋಸ್ಟಿನೋ'** ಚಿತ್ರಕ್ಕೆ ಕಳೆದ ಬಾರಿಯ ಆಸ್ಕರ್ ಪುರಸ್ಕಾರ ಬಂತು. ಈ ಚಿತ್ರ ಆಗಾಗ **'ಸ್ಟಾರ್ ಮೂವಿಸ್'** ಚಾನಲ್‌ನಲ್ಲಿ ಬರುತ್ತದೆ ತಪ್ಪಿಸಿಕೊಳ್ಳಬೇಡಿ.

- ಕೃಪೆ: 'ಭಾವನ' ಮಾಸಿಕ

ಅಮಿತೋತ್ಸವ! ಹಲವು ಹುನ್ನಾರಗಳ ನಡುವೆಯು ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ 2008ನೇ ಸಾಲಿನಲ್ಲಿ ಒಲಂಪಿಕ್ಸ್ ನಡೆಸಲು ಅಂತರ್‍ರಾಷ್ಟ್ರೀಯ ಒಲಂಪಿಕ್ಸ್ ಸಮಿತಿ ಸಮ್ಮತಿಸಿದಾಗ ಚೀನಾದುದ್ದಗಲಕ್ಕೂ ಸಂಭ್ರಮದ ಹೊಳೆ ಹರಿಯಿತು.
ಹೆಚ್ಚಿನ ವರದಿ ಮುಂದಿನ ಸಂಚಿಕೆಯಲ್ಲಿ.



PRBDECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎನ್ ವೈ ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.